ಸಂಪುಟ 24 ಸಂಚಿಕೆ 13
ಮಾರ್ಚ್ 31 , 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ




ಭಾರತ ಉಳಿಸಲು
ಭವಿಷ್ಯತ್ತು ಬದಲಾಯಿಸಲು....





ಮಹಿಳೆ
ಈ ಬದುಕು ಬಲು ಘೋರಾ...

ಕೃಷ್ಣರ ಬಜೆಟ್
ಹೇರಿತಲ್ಲೋ ಮತ್ತೆ ಹೊರೆ



ಪಂಪ್‌ಸೆಟ್ ರೈತರು
ಹೋರಾಟದತ್ತ...

ಬಂಗಾಳದಲ್ಲಿ ಕೈಗಾರಿಕೆ ಬೆಳವಣಿಗೆಗೆ ಮಹತ್ವದ ನಿರ್ಧಾರ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 91

ಹಿಂದಿನ ಸಂಚಿಕೆಯಲ್ಲಿ ಬೆಲೆ ಏರಿಕೆ ವಿರೋಧಿ ಸಪ್ತಾಹ, ಹವಾಲಾ ಹಗರಣ ಬಯಲು, ಬಿಜೆಪಿ ರಾಜ್ಯ ಸರ್ಕಾರಗಳ ವಜಾಕ್ಕೆ ಸುಪ್ರೀಂಕೋರ್ಟ್ ಸಮ್ಮತಿ, ಬೃಹತ್ ಸಂಸತ್ ಚಲೋ ಮತ್ತು ಜ್ಯೋತಿ ಬಸುರವರ ಕೊರಿಯಾ ಪ್ರವಾಸದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ರಾವ್ ಸರ್ಕಾರದ ಸಕ್ಕರೆಹಗರಣ, 1994 ಜುಲೈ 14 ರ ಸಾರ್ವಜನಿಕ ಉದ್ದಿಮೆ ಕಾರ್ಮಿಕ ಮುಷ್ಕರ, ಜೈಲು ತುಂಬಿ ಚಳುವಳಿ, ಬಂಗಾಳದಲ್ಲಿ ಕೈಗಾರಿಕೆ ಬೆಳವಣಿಗೆ ತೆಗೆದುಕೊಂಡ ಮಹತ್ವದ ನಿರ್ಧಾರ, ಈಶಾನ್ಯ ರಾಜ್ಯಗಳ ಬಗೆಗಿನ ಕೇಂದ್ರದ ಮಲತಾಯಿ ಧೋರಣೆ ಈ ಬಗ್ಗೆ ಓದಿರಿ...

ಮೇ ಮಧ್ಯಭಾಗದಲ್ಲಿ ಭಾರತಕ್ಕೆ ಮರಳಿದೆವು. ರಾವ್ ಸರಕಾರದ ಸಚಿವ ಕಲ್ಪನಾಥ್ ರಾಯ್ ಸಕ್ಕರೆ ಹಗರಣದ ಪೇಚಿಗೆ ಸಿಲುಕಿಕೊಂಡಿದ್ದರು. ಕೆಲ ತಿಂಗಳಿಂದ ಈ ಹಗರಣ ವಿಚಾರ ಗೊತ್ತಿದ್ದರೂ ಪದತ್ಯಾಗ ಮಾಡುವಂತೆ ರಾಯ್ ಗೆ ಒಮ್ಮೆಯೂ ಹೇಳಿರಲಿಲ್ಲ. ರಾವ್ ಸರಕಾರ ಸಕ್ಕರೆ ದೊರೆಗಳ ಖಜಾನೆಗೆ ಕೋಟ್ಯಾಂತರ ರೂಪಾಯಿಗಳನ್ನು ತುಂಬಿಸಿದ್ದು ಸ್ಪಷ್ಟವಾಗಿತ್ತು. ರಾವ್ ಸರ್ಕಾರ ಆಗಿನ ಅತ್ಯಂತ ಕಡಿಮೆ ಅಂತರ್ರಾಷ್ಟ್ರೀಯ ಮಾರುಕಟ್ಟೆ ದರದಲ್ಲಿ ಸಕ್ಕರೆಯನ್ನು ಖರೀದಿಸಲಿಲ್ಲ, ಆದರೆ ಬೆಲೆಗಳು ಹೆಚ್ಚಿದಾಗ ಸಕ್ಕರೆಯನ್ನು ಆಮದು ಮಾಡಿಕೊಂಡಿತು. ಬಂಡವಾಳಶಾಹಿಗಳ ಖಜಾನೆಯನ್ನು ತುಂಬಿಸುವ ಒಂದು ಮಾರ್ಗವಿದು.

1994 ಜುಲೈ 14 ರಂದು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಮುಷ್ಕರ ನಡೆಸಿದರು. ಸೆಪ್ಟೆಂಬರ್ 20 ರಂದು ರಾಷ್ಟ್ರವ್ಯಾಪಿಯಾಗಿ 'ಜೈಲು ತುಂಬಿ' ಚಳುವಳಿ ನಡೆಯಿತು. ಸೆಪ್ಟೆಂಬರ್ 29 ರಂದು ರಾಷ್ಟ್ರವ್ಯಾಪಿ ಮುಷ್ಕರ ನಡೆಸಲು 56 ಸಾಮೂಹಿಕ ಸಂಘಟನೆಗಳು ಕರೆ ನೀಡಿದವು. ಬಂಗಾಳದಲ್ಲಿ ಯಶಸ್ವಿಯಾಗಿ ಬಂದ್ ನಡೆಯಿತು.

ಷೇರು ಹಗರಣ ಕುರಿತ ಜೆಪಿಸಿಯ ಕಹಿ ವರದಿ ಕಾಂಗ್ರೆಸ್‌ಗೆ ಖುಷಿ ತರಲಿಲ್ಲ. ವರದಿ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮದ ವರದಿಯನ್ನು (ಎಟಿಆರ್) ರಾವ್ ಸರ್ಕಾರ ಜುಲೈ 26 ರಂದು ಸಂಸತ್ತಿನಲ್ಲಿ ಮಂಡಿಸಿತು. ಜೆಪಿಸಿ ವರದಿ 'ಅನಗತ್ಯ ಹಾಗೂ ಹಳಸಲು' ಎಂದು ಸರಕಾರ ವರ್ಣಿಸಿತು! ಹಗರಣಕ್ಕೆ ಯಾವುದೇ ಹೊಣೆ ಹೊರಲು ನಿರಾಕರಿಸಿತು. ಇದು ತೀರಾ ನಾಚಿಕೆಗೇಡಿನದ್ದಾಗಿತ್ತು. ಕಾಂಗ್ರೆಸ್ ಎಲ್ಲ ಸಮಿತಿಗಳನ್ನು ಬಹಿಷ್ಕರಿಸಿತು. ಎಟಿಆರ್ ವಾಪಸ್ ಪಡೆಯುವಂತೆ ಒತ್ತಾಯಿಸಿ ಸಂಸತ್ತಿನ ಕಲಾಪಗಳನ್ನು ಸ್ಥಗಿತಗೊಳ್ಳುವಂತೆ ಮಾಡಿತು. ಇದನ್ನು ಪ್ರತಿಭಟಿಸಿ ಎಡಪಕ್ಷಗಳು ಮತ್ತು ರಾಷ್ಟ್ರೀಯ ರಂಗ ಧರಣಿ ನಡೆಸಿದವು. ಆಗಸ್ಟ್ 17 ರಂದು ಎಟಿಆರ್ ಅನ್ನು ವಾಪಸ್ ಪಡೆಯಲಾಯಿತು. ಸರಕಾರದ ಮುಖ



ಗ್ಯಾಟ್ ಒಪ್ಪಂದ ವಿರೋಧಿಸಿ ಎಡಪಕ್ಷಗಳಿಂದ ಸಂಸತ್ ಚಲೋ

ಇನ್ನಷ್ಟು ಬಯಲಿಗೆ ಬಂತು. ಆದರೆ ರಾವ್ ಸರ್ಕಾರದ ಕಪಾಟಿನಲ್ಲಿ ಇನ್ನಷ್ಟು ಅಸ್ಥಿಪಂಜರಗಳಿದ್ದವು; ಟೆಲಿಕಾಂ ಹಗರಣ ಸೆಪ್ಟೆಂಬರ್‌ನಲ್ಲೇ ದೊಡ್ಡ ಸುದ್ದಿಯಾಯಿತು.

ಕೈಗಾರಿಕೆಯ ಪ್ರಶ್ನೆ

ಬಂಗಾಳದಲ್ಲಿ ಕೈಗಾರಿಕೆ ಬೆಳವಣಿಗೆಗೆ ಸಂಬಂಧಿಸಿ ನಾವು ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡೆವು. ನಾವು ಯಾವಾಗಲೂ ಭೂಸುಧಾರಣೆ ಮತ್ತು ಕೃಷಿ ರಂಗದ ಯಶಸ್ಸಿಗೆ ಒತ್ತು ನೀಡಿದೆವು. ಆದರೆ ಬದಲಾದ ಸನ್ನಿವೇಶದಲ್ಲಿ ಇನ್ನೂ ಹೆಚ್ಚಿನ ಮಹತ್ವ ಕೊಡುವುದು ಅಗತ್ಯವಾಗಿತ್ತು. ರಾಜ್ಯ ಸರಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳು ಹಾಗೂ ಪಶ್ಚಿಮ ಬಂಗಾಳ ಕೈಗಾರಿಕೆ ಅಭಿವೃದ್ಧಿ ನೀಗಮವನ್ನು ಬಲಪಡಿಸಲು ಪ್ರಜ್ಞಾಪೂರ್ವಕ ಕ್ರಮಗಳನ್ನು ಕೈಗೊಂಡೆವು. ಸಿಪಿಐ(ಎಂ) ಸಂಸತ್ ಸದಸ್ಯ ಸೋಮನಾಥ ಚಟರ್ಜಿ ಅವರನ್ನು ನಿಗಮದ ಅಧ್ಯಕ್ಷರನ್ನಾಗಿ ನೇಮಿಸಿದೆವು. ಈ ಎಲ್ಲಾ ಕ್ರಮಗಳು ಫಲ ನೀಡಿದವು. ರಾಜ್ಯದ ಕೈಗಾರಿಕೀಕರಣದ ಬಗ್ಗೆ ಸೆಪ್ಟೆಂಬರ್ 23 ರಂದು ವಿಧಾನಸಭೆಯಲ್ಲಿ ಒಂದು ಹೇಳಿಕೆ ನೀಡದೆವು. ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರವೇ ಸ್ವಂತವಾಗಿ ನೀತಿಯನ್ನು ನಿರೂಪಿಸುವಂತಿಲ್ಲ. ಆ ಅಧಿಕಾರ ರಾಜ್ಯ ಸರಕಾರಕ್ಕೆ ಇಲ್ಲ ಅದು ಕೇಂದ್ರ ಸರಕಾರದ ವ್ಯಾಪ್ತಿಗೆ ಬರುತ್ತದೆ ಎಂದು ಹೇಳಿಕೆಯಲ್ಲಿ ನಾವು ಸ್ಪಷ್ಟಪಡಿಸಿದೆವು.

ಚುನಾವಣೆಗಳ ಮೇಲೆ ಕಣ್ಣಿಟ್ಟೇ ನಾವು ಕೈಗಾರಿಕೆ ನೀತಿಯನ್ನು ರೂಪಿಸುತ್ತೇವೆ. ನಾವು ಅಪ್ರಾಮಾಣಿಕರು ಎಂದು ನಮ್ಮ ಟೀಕಾಕಾರರು ಪದೇ ಪದೇ ಹೇಳುವುದನ್ನು ನಾನು ಕಂಡಿದ್ದೇನೆ. ನಾವು ಕೇಂದ್ರದ ಹೊಸ ಆರ್ಥಿಕ ನೀತಿಯನ್ನು ವಿರೋಧಿಸುತ್ತೇವೆ. ಆದರೆ ಅದೇ ಹೊತ್ತಿಗೆ ಅದೇ ನೀತಿಯನ್ನು ರಾಜ್ಯದಲ್ಲಿ ಅನುಸರಿಸುತ್ತೇವೆ ಎಂದು ಟೀಕಾಕಾರರು ಹೇಳುತ್ತಾರೆ. ನಿಜ ಹೇಳಬೇಕೆಂದರೆ ಪ್ರಧಾನಿ ಮತ್ತು ಹಣಕಾಸು ಮಂತ್ರಿ ದೇಶದಲ್ಲೂ ವಿದೇಶದಲ್ಲೂ ಇದನ್ನು ಜಪಿಸುತ್ತಿದ್ದರು ಎಡರಂಗ ವಿರೋಧಿ ಪತ್ರಿಕೆಗಳೂ ಆ ರೀತಿ ಬರೆಯುತ್ತಿದ್ದವು.

ಇವೆಲ್ಲವೂ ರಾಜಕೀಯದಾಟದ ಭಾಗವೆಂದು ಪ್ರತ್ಯೇಕ ಹೇಳಬೇಕಿಲ್ಲ. ಕಳೆದ 30 ವರ್ಷಗಳಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಸತತವಾಗಿ ಆಡಳಿತ ನಡೆಸಿದ ಕಾಂಗ್ರೆಸ್ ಸರಕಾರಗಳು ಇಡೀ ಈಶಾನ್ಯ ಭಾರತವನ್ನು ಕಡೆಗಣಿಸಿವೆ. ಈ ಭಾಗದಲ್ಲಿ ಬೆಳವಣಿಗೆ ಆಗದಿರುವುದಕ್ಕೆ ಕೇಂದ್ರವನ್ನೇ ದೂರಬೇಕು. ಅದು ವಿಶೇಷವಾಗಿ ಪಶ್ಚಿಮ ಬಂಗಾಳದ ವಿರುದ್ಧ ಒಂದು ರೀತಿಯ ಆರ್ಥಿಕ ದಿಗ್ಬಂಧನವನ್ನು ಹೇರಿದೆ. ಇದರಿಂದ ರಾಜ್ಯ ಅಪಾರ ಸಂಕಷ್ಟ ಅನುಭವಿಸಿದೆ.

ನಾಲ್ಕು ನಿರ್ಧಿಷ್ಟ ಕ್ಷೇತ್ರಗಳಲ್ಲಿ ನಮಗೆ ತೊಂದರೆ ಆಗುವ ರೀತಿಯಲ್ಲಿ ಕೇಂದ್ರ ತನ್ನ ಅಧಿಕಾರಗಳನ್ನು ಬಳಸಿದೆ ಎಂದು ಹಲವು ಬಾರಿ ನಾನು ಹೇಳಿದ್ದೇನೆ. ಇನ್ನೂ ಅದನ್ನು ಹೇಳುತ್ತೇನೆ. ಆ ನಾಲ್ಕು ವಲಯಗಳು ಯಾವುವೆಂದರೆ ಸರಕುಸಾಗಣೆದಾರರ ಸಮೀಕರಣ ನೀತಿ, ಕೈಗಾರಿಕೆ ಯೋಜನೆಗಳ ಮಂಜೂರಾತಿ, ರಾಜ್ಯದಲ್ಲಿ ಕೇಂದ್ರದ ಹೂಡಿಕೆ ಮತ್ತು ಹಣಕಾಸು ಸಂಸ್ಥೆಗಳ ಧೋರಣೆ.

ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ರಾಜ್ಯ ಅತಿ ಹೆಚ್ಚು ತೊಂದರೆ ಅನುಭವಿಸಿದ ಕ್ಷೇತ್ರಗಳಲ್ಲಿ ಕಬ್ಬಿಣ ಮತ್ತು ಉಕ್ಕು ಕೂಡ ಒಂದು ಕೇಂದ್ರ ಭೇದಭಾವದ ಸರಕುಸಾಗಾಟದರ ಸಮೀಕರಣ ನೀತಿ 1956ರಿಂದ 1992ರವರೆಗೆ ಮುಂದುವರಿಯಿತು. ದೇಶದಾದ್ಯಂತ ಸಮತೋಲನದ ಆರ್ಥಿಕ ಬೆಳವಣಿಗೆ ಸಾಧಿಸಲು ಅಗತ್ಯ ಎಂಬ ನೆನವೊಡ್ಡಿ ಇಷ್ಟೂ ವರ್ಷಕಾಲ ಇದನ್ನು ಮುಂದುವರಿಸಿಕೊಂಡು ಬರಲಾಯಿತು. ನಿರಂತರ ಚಳುವಳಿಗಳ ನಂತರ ಕೇಂದ್ರ ಸರಕಾರ ಬಿ.ಡಿ. ಪಾಂಡೆ ಸಮಿತಿಯನ್ನು ನೇಮಿಸುವ ಒತ್ತಡಕ್ಕೆ ಒಳಗಾಯಿತು. ಈ ಕೈಗಾರಿಕೆಯನ್ನು ನಿಯಂತ್ರಿಸುವ ಕಾನೂನನ್ನು ಕೈಬಿಡಬೇಕೆಂದು 1982ರಲ್ಲಿ ಈ ಸಮಿತಿ ಶಿಫಾರಸು ಮಾಡಿತು. ಕೆಲವು ಅವ್ಯಕ್ತ ಕಾರಣಗಳಿಗಾಗಿ ಮುಂದಿನ ಹತ್ತು ವರ್ಷಕಾಲ ಈ ವಿಚಾರದಲ್ಲಿ ಏನನ್ನೂ ಮಾಡಲಾಗಲಿಲ್ಲ. ಬಂಗಾಳದ ಕಬ್ಬಿಣ ಮತ್ತು ಉಕ್ಕು ಕ್ಷೇತ್ರದ ಮೇಲೆ ಪರಿಣಾಮ ಬೀರುವ ಅನೇಕ ನಿರ್ಧಾರಗಳನ್ನು ಈ ಅವಧಿಯಲ್ಲಿ ಕೈಗೊಳ್ಳಲಾಯಿತು.

ಈ ನೀತಿಯನ್ನು ವಾಪಸ್ಸು ಪಡೆದ ನಂತರ ಕಬ್ಬಿಣ ಮತ್ತು ಉಕ್ಕು ಆಧಾರಿತ 100ಕ್ಕೂ ಹೆಚ್ಚು ಯೋಜನೆಗಳು ಮುಂದಿನ 44 ತಿಂಗಳಲ್ಲಿ ನಮ್ಮ ರಾಜ್ಯಕ್ಕೆ ಬಂದವು. ಸರಕುಸಾಗಣೆದರ ಸಮೀಕರಣ ನೀತಿ ರಾಜ್ಯ ವಿರುದ್ಧದ ಆರ್ಥಿಕ ನಿರ್ಬಂಧದಲ್ಲಿ ಕೇಂದ್ರದ ಮುಖ್ಯ ಸಾಧನಗಳಲ್ಲಿ ಒಂದಾಗಿತ್ತು.

ಮಂಜೂರಾತಿ ನೀತಿ ಇನ್ನೊಂದು ಸಾಧನ. ಕೈಗಾರಿಕೆ ಲೈಸೆನ್ಸ್‌ಗಳಿಗೆ ಸಂಬಂಧಿಸಿದ ಈ ನೀತಿ 1951 ರಿಂದ 1991ರವರೆಗೆ ಇದು ಮುಖ್ಯ ಅಡ್ಡಿಯಾಗಿತ್ತು. ದೇಶವನ್ನು ಅಭಿವೃದ್ಧಿಪಡಿಸುವಲ್ಲಿ ನಿಯಂತ್ರಣ ಇರಬೇಕೆಂಬುದು ಎಲ್ಲರೂ ಒಪ್ಪತಕ್ಕ ವಿಚಾರ. ಆದರೆ ಅದೇ ಹೊತ್ತಿಗೆ ಕೆಲವು ರಾಜ್ಯಗಳಿಗೆ ಅನಾನುಕೂಲವಾಗುವ ರೀತಿಯಲ್ಲಿ ಅವು ಭೇದಭಾವದಿಂದ ಕೂಡಿರಬಾರದು ಎನ್ನುವುದು ಕೂಡ ಅಷ್ಟೇ ಮುಖ್ಯ. ನಮ್ಮನ್ನು ಸಂತುಷ್ಟಪಡಿಸಬೇಕೆಂದೇನೂ ನರಸಿಂಹರಾವ್ ಸರಕಾರ ಈ ನೀತಿಯನ್ನು ವಾಪಸ್ ಪಡೆಯಲಿಲ್ಲ. ಈ ಕ್ರಮವನ್ನು ನಾವು ಸ್ವಾಗತಿಸಿದೆವು.

ಈಗಿರುವ ಘಟಕಗಳ ಯೋಜನೆ ಅಭಿವೃದ್ಧಿ ಹಾಗೂ ಆಧುನೀಕರಣವಲ್ಲದೆ ಬಂಡವಾಳ ಹೂಡಿಕೆಯಲ್ಲೂ ಕೇಂದ್ರ ಸರಕಾರಕ್ಕೆ ಮುಖ್ಯ ಪಾತ್ರವಿದೆ. ಇಲ್ಲಿಯೂ ಬಂಗಾಳದ ಬಗ್ಗೆ ಕೇಂದ್ರ ಸರಕಾರದ ಪಕ್ಷಪಾತ ಧೋರಣೆ ಮುಂದುವರಿಯಿತು. ಕೈಗಾರಿಕೆಯ ಮೂಲ ಸೌಕರ್ಯಕ್ಕೆ ಮಹತ್ವದ್ದಾದ ಬಂದರು, ವಾಯುಯಾನ ಹಾಗೂ ಅಂಚೆ ವ್ಯವಸ್ಥೆಗಳ ಆಧುನೀಕರಣಕ್ಕಾಗಲೀ ಮೇಲ್ದರ್ಜೆಗೇರಿಸುವ ವಿಚಾರದಲ್ಲಾಗಲೀ ಪ್ರಯತ್ನಗಳನ್ನು ಮಾಡಲಿಲ್ಲ. ಹಾಲ್ದಿಯಾ ಯೋಜನೆಯ ಮಂಜೂರಿಗೆ ನಾವು 11 ವರ್ಷ ಕಾದೆವು. ಆದರೆ ಕೇಂದ್ರ ತನ್ನ ಸ್ವಂತ ದುಡ್ಡಿನಿಂದ ಗುಜರಾತಿನಲ್ಲಿ ಪೆಟ್ರೋ ರಾಸಾಯನಿಕ ಘಟಕವೊಂದನ್ನು ಸ್ಥಾಪಿಸಿತು. ಮೆಟ್ರೋರೈಲ್ವೆ, ಮತ್ತು ದುರ್ಗಾಪುರ ಉಕ್ಕು ಸ್ಥಾವರ ಹಾಗೂ ಡಂಡಂ ವಿಮಾನ ನಿಲ್ದಾಣದ ಭಾಗಶಃ ಆಧುನೀಕರಣ ಬಿಟ್ಟರೆ ಕೇಂದ್ರ ಸರಕಾರ ಬಂಗಾಳದ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೇಳಿಕೊಳ್ಳುವಂಥ ಕೆಲಸವನ್ನೇನೂ ಮಾಡಲಿಲ್ಲ.

ರಾಜ್ಯದಲ್ಲಿ ಕೇಂದ್ರದ ಹೂಡಿಕೆ 1981ರಲ್ಲಿ ಶೇಕಡ 8.1. ಇದ್ದದ್ದು 1991ರಲ್ಲಿ ಶೇಕಡ 7ಕ್ಕೆ ಇಳಿಯಿತು. ಅದೇ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ಕೇಂದ್ರದ ಹೂಡಿಕೆ ಶೇ. 8.6 ರಿಂದ ಶೇ. 16.3ಕ್ಕೆ ಏರಿತು.

ಹಣಕಾಸು ಸಂಸ್ಥೆಗಳನ್ನು ಕೂಡ ನಮ್ಮ ವಿರುದ್ಧ ಬಳಸಲಾಯಿತು. ಸಂಭಾವ್ಯ ಹೂಡಿಕೆದಾರರು ಯೋಜನೆಯ ಒಟ್ಟು ಹಣದ ಸುಮಾರು ಶೇಕಡ 30 ರಷ್ಟು ಹೂಡಬೇಕಾಗುತ್ತದೆ. ಉಳಿದದ್ದನ್ನು ಹಣಕಾಸು ಸಂಸ್ಥೆಗಳು ಭರಿಸಬೇಕು. ನಮ್ಮ ರಾಜ್ಯದಲ್ಲಿ ಹಣಕಾಸು ಸಂಸ್ಥೆಗಳ ಪಾತ್ರ ಕೊಚ್ಚಿಕೊಳ್ಳುವಂಥದ್ದಿಲ್ಲ. ಪಶ್ಚಿಮ ಬಂಗಾಳ ರಾಷ್ಟ್ರೀಯ ಸರಾಸರಿಗಿಂತ ಕನಿಷ್ಠವೆಂದರೂ ಶೇಕಡ 20ರಷ್ಟು ಕಡಿಮೆ ಮೊತ್ತವನ್ನು ಹಣಕಾಸು ಸಂಸ್ಥೆಗಳಿಂದ ಪಡೆಯುತ್ತಿತ್ತು. ಹೀಗಾಗಿ ಅನೇಕ ಹೂಡಿಕೆದಾರರು ನಮ್ಮ ರಾಜ್ಯಕ್ಕೆ ಬೆನ್ನು ತಿರುಗಿಸಿದರು.

ಆದರೆ 1977ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ನಾವು ಈ ಎಲ್ಲ ಅಡೆತಡೆಗಳನ್ನು ನಿವಾರಿಸಲು ಗರಿಷ್ಠ ಪ್ರಯತ್ನ ಮಾಡಿದೆವು. ಕೈಗಾರಿಕೆ ಹಣಕಾಸು ಹಾಗೂ ಪುನರ್‌ನಿರ್ಮಾಣ ಮಂಡಳಿ (ಬಿ.ಐ.ಎಫ್.ಆರ್) ಯು ಪುನರುಜ್ಜೀವನ ಕಾರ್ಯಕ್ರಮವನ್ನು ಹಾಳುಗೆಡವಲು ಹಣಕಾಸು ಸಂಸ್ಥೆಗಳು ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ನಾವು ಸಣ್ಣ ಕೈಗಾರಿಕೆಯನ್ನು ರಾಷ್ಟ್ರೀಯವಾಗಿ ಉನ್ನತ ಸ್ಥಾನಕ್ಕೆ ಕೊಂಡೊಯ್ದೆವು. ಕೃಷಿ ವಲಯದಲ್ಲಿ ಕೂಡ ನಾವು ಅಪಾರ ಯಶಸ್ಸನ್ನು ಸಾಧಿಸಿದೆವು. ನಮ್ಮ ಕೈಗಾರಿಕೆ ಪ್ರಗತಿಗೆ ಅದನ್ನು ಮೂಲವಾಗಿ ತೆಗೆದುಕೊಂಡೆವು. ರಾಜ್ಯದ ಕೈಗಾರಿಕೀಕರಣಕ್ಕೆ ನಡೆಸುವ ಪ್ರಯತ್ನಗಳು ಕೂಡ ಹೋರಾಟದ ಒಂದು ಭಾಗ ಎಂಬುದು ನಮ್ಮ ನಂಬಿಕೆ ನಾವು ಅದರಲ್ಲಿ ಕೂಡ ಯಶಸ್ವಿಯಾಗುತ್ತೇವೆ.

(ಮುಂದುವರಿಯುತ್ತದೆ)

ಸಮರಕ್ಕೆ ಸಜ್ಜಾಗುತ್ತಿರುವ ಪಂಪ್‌ಸೆಟ್ ರೈತರು

ಪಂಪ್‌ಸೆಟ್‌ಗಳ ಹಳೆಯ ಬಾಕಿಗಳ ವಸೂಲಿ, ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ, ವಿದ್ಯುತ್ ದರ ಏರಿಕೆ ಪ್ರಸ್ತಾಪ, ದಂಡದಸಮೇತ ಅನಧಿಕೃತ ಸಂಪರ್ಕಗಳ ಸಕ್ರಮ, "ಭಾಗ್ಯಜ್ಯೋತಿ" ಬಳಕೆದಾರರಿಗೆ ಹೊಸದರಗಳ ನಿಗದಿ, ವಿದ್ಯುತ್ ಕ್ಷೇತ್ರದ ಖಾಸಗೀಕರಣ ಮುಂತಾದ ತೀರ್ಮಾನ ಗಳು ಸರ್ಕಾರದ ವತಿಯಿಂದ ಪ್ರಕಟಣೆ ಗೊಳ್ಳುತ್ತಿದ್ದಂತೆ ರೈತರ ಪ್ರತಿಭಟನೆ-ಹೋರಾಟಗಳು ರಾಜ್ಯಾದ್ಯಂತ ಮೊಳೆಯುತ್ತಿವೆ.

ನೀರಿಳಿಯದ ಗಂಟಲಿನಲ್ಲಿ ಕಡುಬು ತುರುಕುವಂಥ ಕೃಷ್ಣ ಸರ್ಕಾರದ ಘಾತುಕತನದ ಪ್ರಸ್ತಾಪಗಳು ರೈತರನ್ನು ರೊಚ್ಚಿಗೇಬ್ಬಿಸಿವೆ. ಬಜೆಟ್‌ನಲ್ಲಿಯೇ ಕೃಷ್ಣ ಅದನ್ನೇ ಧ್ವನಿಸಿದ್ದಾರೆ. ಕೆಪಿಟಿಸಿಎಲ್ ಪ್ರಸ್ತಾಪಿತ ದರಗಳು ಈ ರೀತಿಯಾಗಿವೆ.

ಒಂದನೇ ವರ್ಗ:- ಒಂದು ಪಂಪ್‌ಸೆಟ್ ಇರುವ ರೈತನಿಗೆ ಒಂದು ಹೆಚ್.ಪಿ.ಗೆ ವರ್ಷಕ್ಕೆ 900 ರೂಪಾಯಪಿಗಳು, 10 ಹೆಚ್.ಪಿಗೆ ವರ್ಷಕ್ಕೆ 9-000 ರೂಪಾಯಿಗಳು ಜೊತೆಗೆ ಮೀಟರ್ ಅಳವಡಿಸಿ ಒಂದು ಯೂನಿಟ್‌ಗೆ 80 ಪೈಸೆ ಸಂಗ್ರಹಿಸುವುದು.

ಎರಡನೇ ವರ್ಗ:- ಒಂದಕ್ಕೂ ಹೆಚ್ಚು ಪಂಪ್‌ಸೆಟ್ ಹೊಂದಿರುವ ಜೊತೆಗೆ ತೆಂಗು, ಮಾವು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುವ ರೈತರಿಗೆ 1 ಹೆಚ್.ಪಿಗೆ 2400 ರೂಪಾಯಿ ಅದರಂತೆ ವಾರ್ಷಿಕ 24,000 ರೂಪಾಯಿಗಳ ಸಂಗ್ರಹ ಒಂದು ಯೂನಿಟ್ ಮೇಲೆ 3ರೂಪಾಯಿಗಳ ಬೆಲೆ ನಿಗದಿ.

ಮೂರನೇ ವರ್ಗ:- ನೀರಾವರಿ ಪಂಪ್‌ಸೆಟ್ ಬಳಕೆದಾರರ ಮನೆಯಲ್ಲಿ ಸರ್ಕಾರಿ ನೌಕರರಿದ್ದಲ್ಲಿ ತಿಂಗಳಿಗೆ 2000 ರೂಪಾಯಪಿಗಳ ಹೆಚ್ಚುವರಿ ದರ ಹೇರಿಕೆ, ಭಾಗ್ಯಜ್ಯೋತಿ ಬಳಕೆದಾರರಿಗೆ ಶೇಕಡಾ 200 ದರ ಹೆಚ್ಚಳ ಜೊತೆಗೆ ಮೀಟರ್ ಅಳವಡಿಕೆ. ಗೃಹಬಳಕೆಗೆ ವಿದ್ಯುತ್ ಶೇಕಡಾ 60 ರಿಂದ ಶೇಕಡಾ 90ಕ್ಕೆ ಹೆಚ್ಚಳ ---- ಈ ರೀತಿಯಾದ ಹೊಸ ದರಗಳು ಜನಸಾಮಾನ್ಯರಲ್ಲಿ ಭಯ ಹುಟ್ಟಿಸಿವೆ.

ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಸಲುವಾಗಿ ಓರಿಸ್ಸಾದ ಖಾಸಗೀ ಕಂಪನಿ "ಗ್ರೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್''ನವರ ಜೊತೆ ಒಪ್ಪಂದವಾಗಿದೆ. ಈಗಾಗಲೇ ಈ ಕಂಪನಿಯವರು ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಬೂದಿಗೆರೆ, ತುಮಕೂರು ಜಿಲ್ಲೆ ತುರುವೆಕೆರೆ ತಾಲ್ಲೂಕಿನ ನೊಣವಿನಕೆರೆಯಲ್ಲಿ, ಕೋಲಾರ ಜಿಲ್ಲೆಯ ಕೈವಾರದಲ್ಲಿ ಮೀಟರ್ ಅಳವಡಿಕೆಯ ಪ್ರಾಯೋಗಿಕ ಕೆಲಸವನ್ನು ಪ್ರಾರಂಭಿಸಿರುತ್ತಾರೆ.

ಏಪ್ರಿಲ್ 1ರಿಂದ ರಾಜ್ಯಾದ್ಯಂತ ಒಂದು ವಾರ ಕಾಲ ಧರಣಿ ಸತ್ಯಾಗ್ರಹ

ಅತ್ಯಂತ ರೈತವಿರೋಧಿಯೂ ಈ ಕ್ರಮವನ್ನು ವಿರೋಧಿಸಿ ಹೋರಾಟ ಆರಂಭಗೊಂಡಿದೆ. ಕರ್ನಾಟಕ ಪ್ರಾಂತರೈತಸಂಘಟನೆ ಮುತುವರ್ಜಿಯಿಂದ ಸಿದ್ಧತೆ ನಡೆದಿದೆ. ಎರಡೂವರೆ ಸಾವಿರಕ್ಕೂ ಅಧಿಕ ಸಂಖ್ಯೆಯ ರೈತರು ಬೂದಿಗೆರೆ ಗ್ರಾಮದಲ್ಲಿ 18.3.2002 ರಂದು ಬೃಹತ್ ಸಮಾವೇಶವನ್ನು ನಡೆಸಿದರು.

ತಮಿಳುನಾಡಿನ ಟಿಐಕೆಎಸ್‌ನ ರೈತ ಮುಖಂಡರಾದ ಲಘುಮಯ್ಯನವರು ಜ್ಯೋತಿ ಬೆಳಗುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಪಿ.ಬಯ್ಯಾರೆಡ್ಡಿ ದರ ಏರಿಕೆಗಳ ಕುರಿತು ಖಾಸಗೀಕರಣ ಹಾಗೂ ಮುಂಬರುವ ಸವಾಲುಗಳ ಕುರಿತು ವಿಸ್ತೃತವಾಗಿ ವಿವರಿಸಿದರು.

ಪ್ರಾಂತರೈತಸಂಘದ ಜಿಲ್ಲಾ ಮುಖಂಡರಾದ ಮನೋಹರ ಶಿವರಾಮರೆಡ್ಡಿ ಚಂದ್ರು ತೇಜಸ್ವಿ ವೆಂಕಟಾಚಲಯ್ಯ, ವಕೀಲರಾದ ಹರಿಂದ್ರ, ಬೂದಿಗೆರೆ ಗ್ರಾಮಪಂಚಾಯ್ತಿ ಅಧ್ಯಕ್ಷರಾದ ಸೀನಪ್ಪ ಮಾಜಿ ತಾಲ್ಲೂಕಾ ಪಂಚಾಯ್ತಿ ಸದಸ್ಯ ಶ್ರೀರಾಮಯ್ಯ ಕೋಲಾರದ ರೈತಮುಖಂಡರಾದ ಕೆ.ಎಮ್.ವೆಂಕಟೇಶ್, 'ಐಕ್ಯರಂಗ' ಪತ್ರಿಕೆಯ ಸಂಪಾದಕರಾದ ಎಸ್. ವೈ.ಗುರುಶಾಂತ್ ಮುಂತಾದವರು ಪಾಲ್ಗೊಂಡು ಮಾತನಾಡಿದ ಸಮಾವೇಶದ ಅಧ್ಯಕ್ಷತೆಯನ್ನು ಮಾಜಿ ಶಾಸಕರು ಸ್ವಾತಂತ್ರ್ಯ ಹೋರಾಟಗಾರರು ಆದ ಸು.ರಂ.ರಾಮಯ್ಯನವರು ವಹಿಸಿದ್ದರು. ಹೊಸಕೋಟೆ ತಾಲ್ಲೂಕಿನ ಹೆಚ್.ಆರ್.ಕೃಷ್ಣಪ್ಪ, ಬಚ್ಚೇಗೌಡ, ಮುನಿರಾಜು ಮುಂತಾದ ಮುಖಂಡರು ಪಾಲ್ಗೊಂಡಿದ್ದರು.


ಕಿಕ್ಕಿರಿದು ಸೇರಿದ್ದ ರೈತರು

ಕೆ.ಪಿ.ಟಿ.ಸಿ.ಎಲ್ ಸಲ್ಲಿಸಿರುವ ಹೊಸ ವಿದ್ಯುತ್ ದರ ಏರಿಕೆ ಪ್ರಸ್ತಾಪವನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಿ, ವಿದ್ಯುತ್ ಕ್ಷೇತ್ರದ ಖಾಸಗೀಕರಣವನ್ನು ವಿರೋಧಿಸಿ ತೀವ್ರ ಹೋರಾಟ ನಡೆಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕಾರ ಮಾಡಿದರು.

ಏಪ್ರಿಲ್ 1ರಿಂದ ರಾಜ್ಯಾದ್ಯಂತ ಒಂದು ವಾರ ಕಾಲ ಧರಣಿ ಸತ್ಯಾಗ್ರಹ ನಡೆಸುವುದು, ಏಪ್ರಿಲ್ ಕೊನೆಯವಾರದಲ್ಲಿ ವಿದ್ಯುತ್ ಗ್ರಾಹಕರ ರಾಜ್ಯಮಟ್ಟದ ಬೃಹತ್ ರ್‍ಯಾಲಿಯನ್ನು ಬೆಂಗಳೂರಿನಲ್ಲಿ ನಡೆಸುವುದು. ಇವು ಪ್ರಮುಖ ನಿರ್ಣಯಗಳು.

ಇದಕ್ಕೆ ಪೂರ್ವಬಾವಿಯಾಗಿ ಈಗಾಗಲೇ ತಾಲ್ಲೂಕು ಮಟ್ಟದ ಸಮಾವೇಶಗಳು ಹಲವಾರು ಕಡೆ ಯಶಸ್ವಿಯಾಗಿ ಜರುಗುತ್ತಿವೆ. ಮುಂದಿನ ಹೋರಾಟಗಳು ಆಂಧ್ರದ ಮಾದರಿಯಲ್ಲಿ ಮೂಡಿ ಬರಲೆಂದು ಆಶಿಸೋಣ.

ಸಮಾವೇಶದ ಪೂರ್ವಬಾವಿಯಾಗಿ 3 ತಂಡಗಳು 4 ದಿನಗಳ ಜಾಥಾಗಳನ್ನು ಹಮ್ಮಿಕೊಂಡಿದ್ದವು. ಸುಮಾರು 50 ಹಳ್ಳಿಗಳಲ್ಲಿ ಯಶಸ್ವಿಯಾಗಿ ಪ್ರಚಾರ ಮಾಡಲಾಗಿತ್ತು. ನಿರೀಕ್ಷೆಗೂ ಮೀರಿದ ಸ್ಪಂದನೆ ರೈತಬಂಧುಗಳು ಹಾಗೂ ಸಾರ್ವಜನಿಕರಿಂದ ದೊರಕಿತು.

ಈಗಾಗಲೇ **ನೊಣವಿನಕೆರೆಯಲ್ಲಿ** ಹಲವಾರು ಗ್ರಾಮಗಳ ರೈತರು ಸಭೆಸೇರಿ ಹೋರಾಟ ನಡೆಸಲು ನಿರ್ಧರಿಸಿದ್ದಾರೆ. ಇದೇ 27ರಂದು ಬೃಹತ್ ಸಮಾವೇಶ ನಡೆಸಲು ಮತ್ತು ಹಲವು ಹಂತದಲ್ಲಿ ಚಳುವಳಿಗೆ ಸನ್ನದ್ಧರಾಗುತ್ತಿದ್ದಾರೆ.

ಕೋಮು ಸೌಹಾರ್ದ ಕದಡಲು ಭಜರಂಗದಳ ಯತ್ನ

ವಿಜಾಪುರಕ್ಕೆ ಭೇಟಿ ನೀಡಿದ ನಿಯೋಗದ ಅಭಿಪ್ರಾಯ

ಗೋಧ್ರಾಘಟನೆಯನ್ನು ನೆಪಮಾಡಿಕೊಂಡು ಇಡೀ ಗುಜರಾತನ್ನು ಕೋಮುದಳ್ಳುರಿಗೆ ನೂಕಿ ದೇಶವನ್ನೇ ಅದರ ಕೆನ್ನಾಲಿಗಗೆ ಹಾಕುವ ಯತ್ನದಲ್ಲಿ ಸದ್ಯಕ್ಕೆ ವಿಫಲಗೊಂಡರು ಕರ್ನಾಟಕದಲ್ಲಿಯೂ ಭಜರಂಗದಳ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ.

1992 ರ ಕೋಮು ವಿಷಜ್ವಾಲೆ ಇಡೀ ದೇಶಕ್ಕೆ ಹಬ್ಬಿದಾಗಲೂ ಸಾಮರಸ್ಯ ಕಾಪಾಡಿಕೊಂಡ ಖ್ಯಾತಿ ಬಿಜಾಪುರಕ್ಕಿದೆ. ಆದರೆ, ಇತ್ತೀಚೆಗೆ ಬಿಜಾಪುರ ನಗರದ ಶಿಕಾರಖಾನೆ ಬಡಾವಣೆಯ 'ಹನುಮಾನ ಮಂದಿರ' ಮಸೀದಿ, ಅಲ್ಲಾಪೂರ ಅಗಸಿ ಓಣಿಯ ಲಕ್ಷ್ಮಿ ದೇವಸ್ಥಾನ, ಜಿಲ್ಲೆಯ ಮುದ್ದೇಬಿಹಾಳ ತೊರವಿ ಮತ್ತು ಚಿಕ್ಕ ಸಿಂದಗಿ ಹಾಗೂ ಇನ್ನಿತರೆಡೆ ಪೂಜಾ ಸ್ಥಳಗಳಿಗೆ, ಮಸೀದಿಗಳಿಗೆ ಹಾನಿ ಮಾಡುವುದು ಮತ್ತು ವಾಹನಗಳಿಗೆ ಬೆಂಕಿ ಹಚ್ಚಿ ಕೋಮುಗಲಭೆ ಸೃಷ್ಟಿಸುವ ಯತ್ನ ನಡೆದಿದೆ.

ಜಿಲ್ಲೆಯ ಹಾನಿಯಾದ ಧಾರ್ಮಿಕ ಸ್ಥಲಗಳಿಗೆ ಭೇಟಿ ನೀಡಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿಮಾನ್ಪಡೆ, ನಿತ್ಯಾನಂದ ಸ್ವಾಮಿ, ಜಿಲ್ಲಾಕಾರ್ಯದರ್ಶಿ ಭೀಮಸಿ ಕಲಾದಗಿ, ಸುರೇಖಾ ರಜಪೂತ, ವಿ.ಎಂ.ಸೊನ್ನದ, ವೀರಣ್ಣ ಹಳ್ಳಿ ಮೊದಲಾದವರಿದ್ದ ನಿಯೋಗ ಸ್ಥಳ ಪರಿಶೀಲನೆ ನಡೆಸಿ ... ಇದೊಂದು ಪೂರ್ವಯೋಜಿತ ಕೃತ್ಯವಾಗಿದೆ ಎಂದಿದೆ.


ವಿಜಾಪುರದಲ್ಲಿ ನಿಯೋಗ

ವಿಜಾಪುರದಲ್ಲಿ ಹನುಮಾನ್ ವಿಗ್ರಹ ಹೊರಗೆ ಇಡುವಲ್ಲಿ ಬಜರಂಗದಳದವರ ಪಾತ್ರವಿದೆಯೆಂದು ಜನ ಹೇಳುತ್ತಿದ್ದಾರೆ. ಚಿಕ್ಕ ಸಿಂದಗಿ, ಮುದ್ದೆಬಿಹಾಳದ ಅನಾಹುತ ಹಾಗೂ ಇನ್ನಿತರೆ ಸ್ಥಳಗಳಲ್ಲಿ ನಡೆದಿರುವ ಮಸೀದಿಗಳ ಧ್ವಂಸ ಕಾರ್ಯದಲ್ಲೂ ಹಿಂದೂ ಕೋಮುವಾದಿಗಳ ಕೈವಾಡವಿದ್ದು, ಇದನ್ನು ಪ್ರಾಣಭಯುದಿಂದಾಗಿ ಯಾರು ನೇರವಾಗಿ ಹೇಳಲು ಮುಂದೆ ಬರುತ್ತಿಲ್ಲ. ಇಂತಹ ಪರಿಸ್ಥಿತಿಯನ್ನು ಉಪಯೋಗಿಸಿ ಅಲ್ಪಸಂಖ್ಯಾತರ ಮೇಲೆ ಆಪಾದನೆ ಮಾಡುವುದು, ಬೆದರಿಸುವುದು, ಅನ್ಯಾಯ ಅತ್ಯಾಚಾರಗಳನ್ನು ನಡೆಸುವುದು ಸರಿಯಲ್ಲ ಎಂದು ನಿಯೋಗ ಅಭಿಪ್ರಾಯ ಪಟ್ಟಿದೆ.

ಕೇಂದ್ರದಲ್ಲಿನ ಬಿಜೆಪಿ ವರ್ಚಸ್ಸು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಭಜರಂಗದಳ ಹಾಗೂ ವಿಶ್ವಹಿಂದೂ ಪರಿಷತ್ ಸಂಘಟನೆಗಳು ... ವಿಷಯವನ್ನು ಕೈಗೆತ್ತಿಕೊಂಡು ಬಿಜೆಪಿ ಜನಪ್ರಿಯತೆ ಹೆಚ್ಚಳಕ್ಕೆ ಪ್ರಯತ್ನಿಸುತ್ತಿವೆ. ದೇಶದಲ್ಲಿ ಕೋಮು ಗಲಭೆಗಳನ್ನು ಹಬ್ಬಿಸಿ ಬಿಜೆಪಿ ಪ್ರಚಾರ ಪಡೆಯುವ ಇರಾದೆ ಹೊಂದಿದ್ದಾರೆ. ಅದನ್ನು ಕೂಡಲೇ ಕೈಬಿಡುವಂತೆ ನಿಯೋಗ ಆಗ್ರಹಿಸಿದೆ.

ಜಿಲ್ಲೆಯಲ್ಲಿ ಕೋಮುವಾದಿ ಶಕ್ತಿಗಳನ್ನು ಮೆಟ್ಟಿ ಹಾಕಲು ಜಿಲ್ಲಾಆಡಳಿತ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು, ಇಂತಹ ಸಂದರ್ಭದಲ್ಲಿ ಅಮಾಯಕರಿಗೆ ತೊಂದರೆಯಾಗದಂತೆ ಅಧಿಕಾರಿಗಳು ಎಚ್ಚರವಹಿಸಬೇಕು, ಸುಳ್ಳು ವದಂತಿಗಳಿಗೆ ಜನರು ಕಿವಿಗೊಡಬಾರದೆಂದು ನಿಯೋಗ ಮನವಿ ಮಾಡಿಕೊಂಡಿದೆ.

ಕೋಮುವಾದಿ ಶಕ್ತಿಗಳ ವಿರುದ್ಧ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮೃದು ಧೋರಣೆ ಅನುಸರಿಸುತ್ತಿದ್ದಾರೆ. ಗೃಹಸಚಿವ ಮಲ್ಲಿಕಾರ್ಜುನ ಖರ್ಗೆ ಕೋಮುವಾದಿ ಶಕ್ತಿಗಳ ದಮನಕೆ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂಬುವುದು ಇಂತಹ ಘಟನೆಗಳಿಂದ ಸಾಬೀತಾಗುತ್ತಿದೆ ಎಂದಿರುವ ನಿಯೋಗ, ರಾಜ್ಯದಲ್ಲಿ ಶಾಂತಿ ಸೌಹಾರ್ದತೆ ಕಾಪಾಡ ಬೇಕಾದರೆ ರಾಜ್ಯ ಸರ್ಕಾರ ಕೋಮುವಾದಿ ಗಳ ವಿರುದ್ಧ ಕಠಿಣ ಕ್ರಮಕೆ ...

ಭಾರತ ಉಳಿಸಲು - ಭವಿಷ್ಯತ್ತು ಬದಲಾಯಿಸಲು

ಪ್ರಜಾಸತ್ತಾತ್ಮಕ ಜಾತ್ಯಾತೀತ ಪರ್ಯಾಯದತ್ತ ಮುನ್ನಡೆಯಲು ಕರೆ

ಅತ್ಯುತ್ತಮ ನಾಳೆಗಾಗಿ ಭಾರತವನ್ನು ಉಳಿಸಿಕೊಳ್ಳೋಣ, ಬದಲಾಯಿಸೋಣ ಎಂಬ ನಿನಾದದೊಂದಿಗೆ ಜಾಗತೀಕರಣ ವಿರುದ್ಧ ಜಾಗತಿಕ ಹೋರಾಟ ಬೆಸೆಯುವ, ಜನತೆಗೆ ಕಂಟಕಪ್ರಾಯವಾಗಿರುವ ಕೋಮುವಾದಿ ಶತ್ರುಗಳನ್ನು ಹಿಮ್ಮೆಟ್ಟಿಸುವ ನಿರ್ಣಾಯಕ ಸವಾಲಿನ ಎದುರಿನಲ್ಲಿ ಸಿಪಿಐ(ಎಂ) 17ನೆಯ ಮಹಾಧಿವೇಶನ ಹೈದರಾಬಾದ್‌ನಲ್ಲಿ, ಮಾರ್ಚ್ 19 ರಿಂದ 24 ರ ವರೆಗೆ ಜರುಗಲಿದೆ. ಜಗತ್ತಿನ ಹಾಗೂ ಭಾರತದ ಆಗು-ಹೋಗುಗಳ ಬಗ್ಗೆ ಆಳವಾದ ಮಥನದಲ್ಲಿ ತೊಡಗಿದೆ. ವಿಪ್ಲವ ವೀರ ಹೋರಾಟದ ಪರಂಪರೆಯ ನಾಡನಲ್ಲಿ ಸಂಭ್ರಮದ ವಾತಾವರಣದಲ್ಲಿ ಉದ್ಘಾಟನೆಗೊಂಡ ಕಲಾಪಗಳ ಮೊದಲ ಹಂತದ ವರದಿ ಇಲ್ಲಿದೆ

ಕಾಮ್ರೇಡ್ ಎಂ.ಹೆಚ್.ನಗರ, ಹೈದರಾಬಾದ್



ಮೇಲೆ ಮೇಲೆ ಹಾರುತ್ತಲೇ ಇರುವ ಕೆಂಬಾವುಟ

ಧ್ವಜಾರೋಹಣ

"ಕೋಮುವಾದಿ ಬಿಜೆಪಿಗೆ ಮತ್ತು ದಿವಾಳಿಕೋರ ಕಾಂಗ್ರೆಸಿಗೆ ಒಂದು ಬಲಿಷ್ಟವಾದ ಪ್ರಜಾಸತ್ತಾತ್ಮಕ ಜಾತ್ಯಾತೀತ ಪರ್ಯಾಯವನ್ನು ರೂಪಿಸುವತ್ತ ಪಕ್ಷವನ್ನು ಮುನ್ನಡೆಸಬೇಕು" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಹರ್‌ಕಿಶನ್ ಸಿಂಗ್ ಸುರ್ಜಿತ್ ಕರೆ ನೀಡುವುದರೊಂದಿಗೆ ಪಕ್ಷದ 17ನೇ ಮಹಾಧಿವೇಶನವು 'ಕಾಮ್ರೇಡ್ ಮೋಟೂರ ಹನುಮಂತರಾವ್ ನಗರ'ದಲ್ಲಿ ಸಂಭ್ರಮದೊಂದಿಗೆ ಆರಂಭವಾಯಿತು. ಹಿರಿಯ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಮ್ರೇಡ್ ಜ್ಯೋತಿಬಸು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

"ಒಂದು ಕಮ್ಯುನಿಸ್ಟ ಪಕ್ಷದ ಜೀವನದಲ್ಲಿ ಪಕ್ಷದ ಅಧಿವೇಶನವು ಅತ್ಯಂತ ಮಹತ್ವದ ಘಟನೆಯಾಗಿದೆ" ಎಂದು ತಮ್ಮ ಉದ್ಘಾಟನಾ ಭಾಷಣವನ್ನು ಆರಂಭಿಸಿದ ಕಾಮ್ರೇಡ್ ಸುರ್ಜಿತ್ "ಪಕ್ಷದ ಕಳೆದ ಅಧಿವೇಶನದ ನಂತರದ ಅವಧಿಯಲ್ಲಿ ಅಂತರ್‍ರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಗಳಲ್ಲಿ ಆಗಿರುವ ಬದಲಾವಣೆಗಳನ್ನು ಪರಿಶೀಲಿಸುವ ಅಧಿವೇಶನವು ಮುಂದಿನ ಅವಧಿಗೆ ಸೂಕ್ತವಾದ ರಾಜಕೀಯ ಧೋರಣೆಯನ್ನು ರೂಪಿಸುತ್ತದೆ" ಎಂದು ಹೇಳಿದರು.

ಸಿಪಿಐ(ಎಂ) 17ನೇ ಮಹಾಧಿವೇಶನ ಆರಂಭ

ಅಮೆರಿಕದ ಧಾಳಿ ತೀವ್ರ

ಜಾರ್ಜ್ ಬುಷ್ ಅಧಿಕಾರ ವಹಿಸಿಕೊಂಡ ನಂತರ ತೃತೀಯ ಜಗತ್ತಿನರಾಷ್ಟ್ರಗಳ ಮೇಲೆ ಅಮೆರಿಕದ ಧಾಳಿ ತೀವ್ರಗೊಂಡಿದೆ. ಸೆಪ್ಟೆಂಬರ್ 11 ರ ಘಟನೆಯ ನಂತರ ಈ ದಾಳಿ ಮತ್ತಷ್ಟು ಹೆಚ್ಚಾಗಿದೆ. ಅಮೆರಿಕವು ಆರಂಭಿಸಿರುವ ಭಯೋತ್ಪಾದನೆಯ ವಿರುದ್ಧ ಎನ್ನಲಾದ ಯುದ್ಧವನ್ನು ಅದು ತನ್ನ ನೀತಿಯನ್ನು ವಿರೋಧಿಸುವ ಇರಾನ್, ಇರಾಕ್, ಉತರ ಕೊರಿಯಾ, ಲಿಬಿಯಾದಂತಹ ದೇಶಗಳಿಗೂ ವಿಸ್ತರಿಸುವ ಬೆದರಿಕೆಯನ್ನು ಅದು ಹಾಕತೊಡಗಿದೆ. ಅದು ತನ್ನ ಹೊಸ ಆಕ್ರಮಣಕಾರಿ ಕ್ಷಿಪಣಿ (NMD) ನೀತಿಯನ್ನು ಸಂಕೋಚವಿಲ್ಲದೆ ಮುಂದುವರೆಸುತ್ತಿದೆ. ಇಸ್ರಾಯೆಲ್ ಆಡಳಿತವು ಪ್ಯಾಲೆಸ್ಟೀನ್ ಜನತೆಯ ಮೇಲೆ ನಿರಂತರವಾಗಿ ನಡೆಸುತ್ತಿರುವ ಅಮಾನುಷ ಧಾಳಿಯನ್ನು ಅದು ನಿರ್ದಾಕ್ಷಿಣ್ಯವಾಗಿ ಬೆಂಬಲಿಸುತ್ತಿದೆ. ಇದೇ ಸಮಯದಲ್ಲಿ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ವಿಶ್ವಬ್ಯಾಂಕ್, ವಿಶ್ವವಾಣಿಜ್ಯ ಸಂಘಟನೆಗಳ ಮೂಲಕ ತೃತೀಯ ಜಗತ್ತನ್ನು ಆರ್ಥಿಕ ಗುಲಾಮಗಿರಿಗೆ ತಳ್ಳುತ್ತಿವೆ. ಇಂತಹ ಅಂತರ್‍ರಾಷ್ಟ್ರೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷದ 17ನೇ ಮಹಾಧಿವೇಶನ ನಡೆಯುತ್ತಿದೆ" ಎಂದು ಸುರ್ಜಿತ್ ನೆನಪಿಸಿದರು.

ವರದಿ: ನಿತ್ಯಾನಂದಸ್ವಾಮಿ

ಭಾರೀ ಹೊರೆ

ಆಂತರಿಕವಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಿಂದೆಂದೂ ಕಂಡರಿಯದ ಹೊರೆಗಳನ್ನು ಜನಸಾಮಾನ್ಯರ ಮೇಲೆ ಹೇರುತ್ತಿದೆ. ಜನತೆಯ ಮೇಲೆ ತೆರಿಗೆಯ ಹೊರೆಯನ್ನು ಹೆಚ್ಚಿಸಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಾಶ ಮಾಡಿದೆ. ಸಣ್ಣ ಉಳಿತಾಯದ ಮೇಲಿನ ಬಡ್ಡಿ ದರಗಳನ್ನು ಗಣನೀಯವಾಗಿ ಇಳಿಸಿದೆ. ದೊಡ್ಡ ಬಂಡವಾಳಗಾರರಿಗೆ ರಿಯಾಯ್ತಿಗಳನ್ನು ನೀಡುತ್ತಾ ಜನಸಾಮಾನ್ಯರಿಗೆ ನೀಡಲಾಗುತ್ತಿದ್ದ ಸಬ್ಸಿಡಿ ರಿಯಾಯ್ತಿಗಳನ್ನು ಬಹುತೇಕವಾಗಿ ಹಿಂತೆಗೆದುಕೊಳ್ಳಲಾಗಿದೆ.

ಕೇಂದ್ರ ಸರ್ಕಾರದ ನೀತಿಗಳು ನಮ್ಮ ಕೃಷಿಕ್ಷೇತ್ರ ಮತ್ತು ರೈತರ ಮೇಲೆ ಬಲವಾದ ಏಟು ಕೊಟ್ಟಿದೆ. ಸರ್ಕಾರ ರೈತರ ಫಸಲನ್ನು ಖರೀದಿ ಮಾಡುವುದನ್ನೇ ನಿರಾಕರಿಸುತ್ತದೆ. ಕೃಷಿಉತ್ಪಾದನೆ ತೀವ್ರವಾಗಿ ಕುಸಿದಿದೆ. ಆಹಾರ ನಿಗಮದ ಗೋದಾಮುಗಳಲ್ಲಿ 62 ಮಿಲಿಯ ಟನ್ ಆಹಾರ ಧಾನ್ಯಗಳು ಕೊಳೆಯುತ್ತಿರುವಾಗ ಒರಿಸ್ಸಾ ಮೊದಲಾದ ರಾಜ್ಯಗಳಲ್ಲಿ ಜನ ಹಸಿವೆಯಿಂದ ಸಾಯುತ್ತಿದ್ದಾರೆ. ಉದಾರೀಕೃತ ಆಮದು ನೀತಿಯಿಂದಾಗಿ ಪರದೇಶಗಳಿಂದ ಕೃಷಿ ಉತ್ಪನ್ನಗಳೂ ಹರಿದು ಬರುತ್ತಿರುವುದರಿಂದ ನಮ್ಮ ರೈತರ ಫಸಲಿನ ಬೆಲೆಗಳು ಕುಸಿದು ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಗಿದೆ.

> ಕೋಮುವಾದಿ ಶಕ್ತಿಗಳ ಬೆಳವಣಿಗೆ ಏನೆಲ್ಲಾ ಅಪಾಯ ತರಲಿದೆಯೆಂದು ನಾವು ಎಚ್ಚರಿಸಿದ್ದೆವೋ ಆ ಎಲ್ಲಾ ಅಪಾಯಗಳು ದೇಶವನ್ನು ಈಗಾಗಲೇ ಆವರಿಸಿಬಿಟ್ಟಿವೆ.
>
> **- ಜ್ಯೋತಿಬಸು**

ಬಿಜೆಪಿ ನೇತೃತ್ವದ ಸರ್ಕಾರ ತಮ್ಮ ಒಕ್ಕೂಟ ವ್ಯವಸ್ಥೆಯ ಮೇಲೆಯೂ ಧಾಳಿ ಮಾಡುತ್ತಿದೆ ಮತ್ತು ಆಮೂಲಕ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗೆ ಬೆದರಿಕೆಯನ್ನೊಡ್ಡುತ್ತಿದೆ. ಸ್ವತಂತ್ರ ಭಾರತದ ಚರಿತ್ರೆಯಲ್ಲಿ ಅಮೆರಿಕ ಆಡಳಿತಕ್ಕೆ ಇಷ್ಟೊಂದು ಹತ್ತಿರವಾದ ಸರ್ಕಾರ ಬೇರೊಂದು ಇರಲಿಲ್ಲ. ಆರ್ಥಿಕ ವಿಷಯಗಳಲ್ಲಿ ಮಾತ್ರವಲ್ಲ, ರಾಜತಾಂತ್ರಿಕ ಮತ್ತು ಮಿಲಿಟರಿ ವಿಷಯಗಳಲ್ಲಿಯೂ ಭಾರತ ಸರ್ಕಾರ ಇಂದು ಅಮೆರಿಕದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಅಲಿಪ್ತ ರಾಷ್ಟ್ರಗಳ ನಡುವೆ ಭಾರತದ ಗೌರವಕ್ಕೆ ಧಕ್ಕೆಯಾಗಿದೆ.

ನಮ್ಮ ರಾಷ್ಟ್ರೀಯ ಏಕತೆಗೆ, ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿದ ನಮ್ಮ ಸಂಸ್ಕೃತಿಗೆ, ನಮ್ಮ ಧರ್ಮನಿರಪೇಕ್ಷತೆಯ ಮೌಲ್ಯಗಳಿಗೆ ಬಿಜೆಪಿಯಿಂದ ಭಾರಿ ಗಂಡಾಂತರ ಉಂಟಾಗಿದೆ. ಅಲ್ಪಸಂಖ್ಯಾತರ ದೇಶದ ವಿವಿಧ ಭಾಗಗಳಲ್ಲಿ ವ್ಯವಸ್ಥಿತವಾಗಿ ಬೇಟೆಯಾಡಲಾಗುತ್ತಿದೆ. ಅವರ ಮುಸ್ಲಿಂ ದ್ವೇಷ ಯಾವ ಮಟ್ಟಕ್ಕೆ ಹೋಗಬಹುದು ಎಂಬುದನ್ನು ಗುಜರಾತಿನ ಇತ್ತೀಚಿನ ಬೆಳವಣಿಗೆಗಳು ತೋರಿಸುತ್ತವೆ. ಅಯೋಧ್ಯೆಯ ವಿಷಯದಲ್ಲಿ ಅವರ ಇತ್ತೀಚಿನ ಕ್ರಮಗಳು ಅವರು ಅನುಸರಿಸುವ ಸಂಚು ಮತ್ತು ಪಿತೂರಿಗಳ ಸ್ಪಷ್ಟ ಉದಾಹರಣೆಗಳಾಗಿವೆ.

ಮೂರನೇ ಪರ್ಯಾಯ ಮತ್ತು ಹೋರಾಟಗಳು

ಈ ಎಲ್ಲಾ ಬೆಳವಣಿಗೆಗಳನ್ನು ಪಕ್ಷದ ಅಧಿವೇಶನ ವಿವರವಾಗಿ ಪರಿಶೀಲಿಸಬೇಕಾಗಿದೆ ಎಂದ ಹೇಳಿದ ಕಾಮ್ರೇಡ್ ಸುರ್ಜಿತ್ ಸಾಮ್ರಾಜ್ಯಶಾಹಿಗಳ, ಅವರೊಂದಿಗೆ ಸೇರಬಯಸುವ ದೊಡ್ಡ ಬಂಡವಾಳಿಗರ ಮತ್ತು ಅವರು ಪ್ರೋತ್ಸಾಹಿಸುತ್ತಿರುವ ಕೋಮುವಾದಿ ಶಕ್ತಿಗಳ ದಾಳಿಯಿಂದ ಜನತೆಯನ್ನು ಕಾಪಾಡಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ಅಷ್ಟೊಂದು ಬಲಶಾಲಿ ಆಗದಿರುವುದರಿಂದ ನಾವು 'ಪೀಪಲ್ಸ್ ಫ್ರಂಟ್' ಎಂಬ ತೃತೀಯ ಪರ್ಯಾಯವನ್ನು ಜನತೆಯ ಮುಂದೆ ಇಟ್ಟಿದ್ದೇವೆ. ಈ ತೃತೀಯ ರಂಗವನ್ನು ಬಲಪಡಿಸುತ್ತಿರುವಾಗಲೇ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವೇ ನಿಜವಾದ ಪರ್ಯಾಯ ಎಂಬುದನ್ನು ನಾವು ಮರೆಯಬಾರದು. ಇದು ಶೋಷಿತ ಜನತೆಯ ಹೋರಾಟಗಳ ನಡುವೆ ರೂಪುಗೊಳ್ಳಬೇಕಾದ ರಂಗವಾಗಿದೆ. ಇದಕ್ಕಾಗಿ ನಾವು ಸ್ವತಂತ್ರವಾಗಿಯೂ ಜಂಟಿಯಾಗಿಯೂ ಹೋರಾಟಗಳನ್ನು ನಡೆಸಬೇಕಾಗಿದೆ. ಜಂಟಿ ಹೋರಾಟಗಳ ಮೂಲಕ ಇತರೇ ಪಕ್ಷಗಳ ಅಡಿಯಲ್ಲಿರುವ ಜನಗಳನ್ನು ಹೋರಾಟದ ಕಣಕ್ಕೆ ತರಲು ಸಾಧ್ಯವಾಗುವುದಲ್ಲದೆ ಅವರೊಂದಿಗೆ ಸಂಪರ್ಕ ಪಡೆಯಲು ಸಾಧ್ಯವಾಗುವುದು. ಜಂಟಿ ಚಳುವಳಿಗಳು ಸಾಧ್ಯವಾಗಬೇಕಾದರೆ, ನಮ್ಮ ಸ್ವತಂತ್ರ ಚಳುವಳಿಗಳೂ ಪರಿಣಾಮಕಾರಿಯಾಗಿ ನಡೆಯಬೇಕು. ಅಂದರೆ ನಮ್ಮ ಸ್ವತಂತ್ರ ಶಕ್ತಿ ಹೆಚ್ಚಾಗಬೇಕು. ಈ ಎಲ್ಲಾ ಅಂಶಗಳನ್ನು ಅಧಿವೇಶನವು ಪರಿಶೀಲಿಸಬೇಕು ಎಂದು ಕಾಮ್ರೇಡ್ ಸುರ್ಜಿತ್ ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದ ಕಾಮ್ರೇಡ್ ಜ್ಯೋತಿಬಸು ಅವರು



ವಿವಿಧ ದೇಶಗಳ ಸೌಹಾರ್ದ ಪ್ರತಿನಿಧಿಗಳು



ವೀರ ಹುತಾತ್ಮರಿಗೆ ನಿಮಗಿದೋ ಶ್ರದ್ಧಾಂಜಲಿ



ಪ್ರತಿನಿಧಿಗಳಿಗೆ ಲಾಲ್ ಸಲಾಂ

ಪಕ್ಷದ 16ನೇ ಅಧಿವೇಶನವು ಅಂದು ಮಾಡಿದ ವಿಶ್ಲೇಷಣೆಯು ಆನಂತರದ ಅವಧಿಯಲ್ಲಿ ನಿಜವಾಗಿದೆ ಎಂದು ಹೇಳಿದರು. ಐಎಂಎಫ್, ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳ ಅನುಷ್ಠಾನದಿಂದ ಮತ್ತು ಕೋಮುವಾದಿ ಶಕ್ತಿಗಳ ಬೆಳವಣಿಗೆ ಏನೆಲ್ಲಾ ಅಪಾಯ ಸಂಭವಿಸಬಹುದೆಂದು ಎಚ್ಚರಿಸಲಾಗಿತ್ತೋ ಆ ಎಲ್ಲಾ ಅಪಾಯಗಳು ದೇಶವನ್ನೂ ಈಗಾಗಲೇ ಆವರಿಸಿ ಬಿಟ್ಟಿವೆ. ಎಲ್ಲಾ ಅಧಿಕಾರದಲ್ಲಿ ಉಳಿಯು ವುದಕ್ಕಾಗಿ ಯಾವ ಮಟ್ಟಕ್ಕೆ ಇಳಿಯಬಹುದು ಎಂಬುದನ್ನು ಅವರು ಗುಜರಾತಿನಲ್ಲಿ ನಡೆಸಿದ ಘೋರ ಹತ್ಯಾಕಾಂಡ ದಲ್ಲಿ ಕಂಡಿದ್ದೇವೆ. ಉತ್ತರ ಪ್ರದೇಶದಲ್ಲಿ ಚುನಾವಣೆಯ ನಂತರ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಸಮಾಜವಾದಿ ಪಕ್ಷದ ಸರ್ಕಾರವನ್ನು ರಚಿಸಿದ್ದರೆ ಅಯೋಧ್ಯೆಯ ವಿಷಯದಲ್ಲಿ ಇಂತಹ ಹೀನ ನಾಟಕ ನಡೆಯುತ್ತಿರಲಿಲ್ಲ. ಅತಿ ದೊಡ್ಡ ಪಕ್ಷವನ್ನು ಸರ್ಕಾರ ರಚಿಸಲು ಆಮಂತ್ರಿಸುವುದಕ್ಕೆ ಹಿಂದೆ ಕೇಂದ್ರದಲ್ಲಿಯೂ ಕೆಲವು ರಾಜ್ಯ ಗಳಲ್ಲಿಯೂ ಉದಾಹರಣೆಗಳಿದ್ದರೂ, ಬೊಮ್ಮಾಯಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ನಮ್ಮ ಮುಂದೆ ಇದ್ದರೂ ಬಿಜೆಪಿ ನೇತೃತ್ವದ ಸರ್ಕಾರ ಅಂತಹ ಒಂದು ಸಾಧ್ಯತೆಯನ್ನು ತಡೆದು ರಾಜ್ಯಪಾಲರ ನೆರವಿನೊಂದಿಗೆ ರಾಷ್ಟ್ರಪತಿ ಆಳ್ವಿಕೆಗೆ ಒಳಪಡಿಸಿತು. ಇಂತಹ ಪ್ರತಿಗಾಮಿ ಸರ್ಕಾರದ ವಿರುದ್ಧ ಹೋರಾಡಲು ಜನತೆಯಲ್ಲಿ ಸ್ಫೂರ್ತಿಯನ್ನು ತುಂಬುವಂತಹ ಘೋಷಣೆಯನ್ನು ಪಕ್ಷದ ಈ ಅಧಿವೇಶನ ನೀಡುವಂತಾಗಬೇಕು ಎಂದು ಅವರು ಹೇಳಿದರು.

ಆರಂಭದಲ್ಲಿ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಮ್ರೇಡ್ ಕೊರಟಾಲಾ ಸತ್ಯನಾರಾಯಣ ಸ್ವಾಗತಿಸಿದರು. ಪೊಲಿಟ್‌ಬ್ಯೂರೋ ಸದಸ್ಯರಾದ ಕಾಮ್ರೇಡ್ ಉಮಾನಾಥ ಅವರು ಅಗಲಿದ ನಾಯಕರಿಗೆ ...

ಬ್ರೆಜಿಲ್, ಚೀನಾ, ಕೆನಡಾ, ಕ್ಯೂಬ, ಇಸ್ರೇಲ್, ಜಪಾನ್, ಕೊರಿಯಾ, ನೇಪಾಳ, ಪ್ಯಾಲೆಸ್ತೇನ್, ಪೋರ್ಚುಗಲ್, ಶ್ರೀಲಂಕಾ, ಅಮೆರಿಕಾ, ವಿಯೆಟ್‌ನಾಮ್ ಮೊದಲಾದ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಸೌಹಾರ್ದ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಇನ್ನೂ ಕೆಲವು ರಾಷ್ಟ್ರಗಳಿಂದ ಪ್ರತಿನಿಧಿಗಳು ಆಗಮಿಸಲಿದ್ದಾರೆ ಎಂದು ತಿಳಿಸಲಾಯಿತು.

ಇದಕ್ಕೂ ಮೊದಲು 'ಕಾಮ್ರೇಡ್ ಸುಂದರಯ್ಯ ವಿಜ್ಞಾನ ಕೇಂದ್ರ'ದ ಪಕ್ಕದಲ್ಲಿರುವ 'ಸುಂದರಯ್ಯ ಪಾರ್ಕ್' ಎದುರಿನ ಚೌಕದಲ್ಲಿ ಮಾಜಿ ಪೊಲಿಟ್‌ಬ್ಯೂರೊ ಸದಸ್ಯರೂ, ವೀರ ತೆಲಂಗಾಣ ಹೋರಾಟದ ಮುಖಂಡರಲ್ಲಿ ಒಬ್ಬರೂ, ಅತ್ಯಂತ ಹಿರಿಯ ಸದಸ್ಯರೂ ಆಗಿರುವ ಕಾಮ್ರೇಡ್ ಬಾಲಗಂಗಾಧರ್ ರಾವ್ ಪಕ್ಷದ ಧ್ವಜಾರೋಹಣವನ್ನು ನೆರವೇರಿಸಿದರು. ಜೀವಂತವಾಗಿರುವಾಗಲೇ ದಂತಕತೆಯಾಗಿದ್ದ ತೆಲಂಗಾಣ ರೈತರ ಸಶಸ್ತ್ರ ಹೋರಾಟದ ನಾಯಕ ಕಾಮ್ರೇಡ್ ಸುಂದರಯ್ಯನವರ ಬೃಹತ್ ಪ್ರತಿಮೆಯೊಂದು ಈ ಉದ್ಯಾನವನದ ನಟ್ಟನಡುವೆ ಶೋಭಿಸುತ್ತಿತ್ತು. 1996 ರಲ್ಲಿ ಕಾಮ್ರೇಡ್ ಸುರ್ಜಿತ್ ಅವರು ಅನಾವರಣ ಗೊಳಿಸಿದ ಈ ಪ್ರತಿಮೆಯ ಎದುರು ನಡೆದ ಧ್ವಜಾರೋಹಣದಲ್ಲಿ ಪಾಲ್ಗೊಂಡ ಪ್ರತಿನಿಧಿಗಳು ಹಾಗೂ ಸದಸ್ಯರು ಪಕ್ಷದ ಕೆಂಪು ಧ್ವಜ ಮೇಲೇರುತ್ತಿದ್ದಂತೆ ...

- ತೀವ್ರಗೊಂಡ ಅಮೆರಿಕಾ ಧಾಳಿ.
- ಹಿಂದೆಂದೂ ಕಂಡರಿಯದ ಭಾರಿ ಹೊರೆ ಹೊರಿಸಿದ ಬಿಜೆಪಿ ಕೇಂದ್ರ ಸರ್ಕಾರ
- ರಾಷ್ಟ್ರೀಯ ಸಮಗ್ರತೆ-ಐಕ್ಯತೆಗೆ ಗಂಡಾಂತರ-ಹೊಸ ಸಂಚುಗಳ ಹುನ್ನಾರ
- ಸಾಮ್ರಾಜ್ಯಶಾಹಿಗಳು, ದೊಡ್ಡ ಬಂಡವಾಳಗಾರರು, ಭೂಮಾಲೀಕರ ಪ್ರೋತ್ಸಾಹದ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಮೂರನೇಯ ಪರ್ಯಾಯವಾಗಿ ಪೀಪಲ್ಸ್ ಫ್ರಂಟ್
- ಜನತೆಯ ಪ್ರಬಲ ಹೋರಾಟಗಳಿಂದಲೇ ತೃತೀಯ ರಂಗಕ್ಕೆ ಬಲ

- ಸುರ್ಜಿತ್ ವಿಶ್ಲೇಷಣೆ



ದಿಕ್ಸೂಚಿ ಮಾತುಗಳು

ಅಸ್ಥಿಯಾತ್ರೆ ಎಂಬ ದಳ್ಳುರಿ ಹಿಡಿದು

ಪಾದುಕಾಯಾತ್ರೆ-ಇಟ್ಟಿಗೆ ಯಾತ್ರೆ, ರಥಯಾತ್ರೆ ಮುಂತಾದ ತರತರದ ಯಾತ್ರೆಯ ನಂತರ ಈಗ 'ಅಸ್ಥಿಯಾತ್ರೆ' ನಡೆಸಲು ವಿಶ್ವಹಿಂದೂ ಪರಿಷತ್ ಯೋಜಿಸುತ್ತಿದೆ. ಗೋದ್ರಾ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡವರ ಬೂದಿಯನ್ನು ದೇಶದಾದ್ಯಂತ ಯಾತ್ರೆಯಲ್ಲಿ ಒಯ್ಯಲಾಗುವುದಂತೆ. ದೇಶದಲ್ಲಿ ಹಲವಾರು ಯಾತ್ರೆಗಳನ್ನು ನಡೆಸಿದ ಬಳಿಕ ಈ 'ಬೂದಿ ಯಾತ್ರೆ' ನಡೆಸುತ್ತಿರುವುದ ಏನನ್ನು ಸಂಕೇತಿಸುತ್ತಿದೆ ಎಂದು ಸಂಘ ಪರಿವಾರ ಸ್ವಯಂ ವಿಮರ್ಶೆ ಮಾಡಿಕೊಳ್ಳಬಲ್ಲದೇ?

ಇದೊಂದು ರಾಜಕೀಯ ಲಾಭದ ದೃಷ್ಟಿಯ ಕುತಂತ್ರ ಮಾತ್ರವಲ್ಲ, ಸಂಘ ಪರಿವಾರದ ಇನ್ನೊಂದು ಅಪಾಯಕಾರಿ ವಿನಾಶಕಾರಿ ಆಟವಾಗಿದೆ. ಭಾರತೀಯ ಮುಗ್ಧ ಜನರ ಮನಸ್ಸುಗಳನ್ನು ಮುರಿಯಲು ಹಿಂದೆ ಡಾ.ಮುರುಳಿ ಮನೋಹರ ಜೋಶಿ ನಡೆಸಿದ ಯಾತ್ರೆಯನ್ನು 'ಏಕತಾ ಯಾತ್ರೆ' ಎಂದು ಹಿಂದೆ ಕರೆಯಲಾಗಿತ್ತು. ಮತ್ತು ಅದು ಜನರನ್ನು ಒಂದುಗೂಡಿಸುತ್ತದೆ ಎಂದು ಸಹ ಸಾರಲಾಗಿತ್ತು. ಬಹುಶಃ ಕೋಮು ದಂಗೆಗಳಲ್ಲಿ ಜೀವ ಬಿಟ್ಟವರನ್ನು ರಾಶಿ ರಾಶಿ ಹಾಕಿ ಸಾಮೂಹಿಕವಾಗಿ ಸುಡುವಾಗ ಇಲ್ಲವೇ ಗುಂಡಿಗಳಲ್ಲಿ ಸಾಮೂಹಿಕವಾಗಿ ಹೂಳುವಾಗ 'ಜನರನ್ನು ಒಂದುಗೂಡಿಸುತ್ತವೆ'ಯೇ ಇಂತಹ ಯಾತ್ರೆಗಳು?

ದೇಶಕ್ಕೆ ಬೆಂಕಿಯಿಡಲು ಹೊರಟ 'ಖಾವಿಪಡೆ'

ಗೋದ್ರಾ ಹತ್ಯಾಕಾಂಡ ಖಂಡನಾರ್ಹ. ಇದನ್ನು ನಡೆಸಿದ ದುಷ್ಕರ್ಮಿಗಳನ್ನು ಅತ್ಯುಗ್ರವಾಗಿ ಶಿಕ್ಷಿಸಬೇಕು. ಅದು ಬಿಟ್ಟು ಒಂದು ನಿರ್ದಿಷ್ಟ ಧರ್ಮದ, ಜನರ ವಿರುದ್ಧ ದ್ವೇಷವನ್ನು ಹರಡಲು ಸುಟ್ಟು ಹೋದ ಜನರ ಬೂದಿ ಯಾತ್ರೆ ಮಾಡುವುದೆಂದರೇನು?

ಗೋದ್ರಾ ಮತ್ತು ಆ ನಂತರದ ಭೀಕರ ಮಾರಣಹೋಮಗಳಿಂದ ಉದ್ರಿಕ್ತಗೊಂಡ ಜನರ ಭಾವನೆಗಳನ್ನು ತಣಿಸುವ, ಅವರ ನಿತ್ಯ ಜೀವನದ, ಬದುಕಿನ ಬವಣೆಗಳ ವಿರುದ್ಧ ಅವರು ಯೋಚಿಸುವಂತೆ, ಪ್ರತಿಭಟಿಸುವಂತೆ ಪ್ರೇರೇಪಿಸುವ ಯಾವ ಯಾತ್ರೆ- ಯೋಜನೆಯೂ ಈ ಕಾವಿಪಡೆಗಳಿಗೆ ಇಲ್ಲವೇ? ಎಂದಾದರೂ ಜನರ ಬದುಕಿನ ನೈಜ ಪ್ರಶ್ನೆಗಳ ಬಗೆಗೆ ಈ ಕಾವಿ ಪಡೆ ತಲೆ ಕೆಡಿಸಿಕೊಂಡಿದೆಯೇ? ಎಂದಾದರೂ ಬಡವರ, ಕೂಲಿಕಾರರ, ದುಡಿಯುವ ಜನರ, ರೈತರ ನೋವುಗಳ ವಿರುದ್ಧ ನೈಜ ಚಳುವಳಿ ನಡೆಸಿದೆಯೇ? ಗೋದ್ರಾ ಹತ್ಯಾಕಾಂಡವಾಗಲಿ, ಆನಂತರ ನಡೆದ ಅಮಾಯಕರ ಮಾರಣಹೋಮಗಳಾಗಲಿ ಕೇವಲ ಆಕಸ್ಮಿಕವಲ್ಲ ಎಂದು ಇಂತಹ ಯಾತ್ರೆಯ ಯೋಜನೆಗಳೇ ಸಾರುತ್ತಿವೆ.

ಸಹಸ್ರ ಸಹಸ್ರ ಜನರ ಬದುಕನ್ನು ಸುಟ್ಟು ಅವರ ಗೋರಿಗಳ ಮೇಲೆ ಇವರ 'ಧರ್ಮಾಅಧಿಪತ್ಯ'ದ ಸೌಧಗಳನ್ನು ಇವರು ಕಟ್ಟಬೇಕಿದೆ. ಹೀಗಾಗಿ ಇವರ ಯೋಜನೆಗಳು ದೀರ್ಘಕಾಲಿಕ ಮತ್ತು ನಿರಂತರ. 'ಅಯೋಧ್ಯೆ'-'ಗೋದ್ರಾ' ಎಲ್ಲವೂ ಇವರ ಅಧಿಕಾರದ ಮೆಟ್ಟಿಲನ್ನೇರುವ ಸಂಚಿಗೆ ಬಳಕೆಯಾಗುತ್ತಿರುವ ಕೆಲವು ನೆಪಗಳು. ಈ ಅಯೋಧ್ಯಾ ಸಮಸ್ಯೆ ಬಗೆಹರಿದರೆ ಮತ್ತೊಂದು ಗೋದ್ರಾ ಇಲ್ಲವಾದರೆ ಇನ್ನೊಂದು. ಒಟ್ಟು, ಜನರು ಕೋಮು ಭಾವನೆಯಿಂದ ಕೆರಳಬೇಕು! ಇವರ ಕರೆಗೆ ಓಗೊಟ್ಟು ಗೋದ್ರಾದಲ್ಲಿ ಆದಂತೆ ಸುಟ್ಟು ಬೂದಿಯಾಗಬೇಕು. ನಂತರ ಮತ್ತೆ ಆ ಬೂದಿಯನ್ನು ಇವರು ದೇಶಕ್ಕೆಲ್ಲಾ ಊದಿ ಹಂಚಬೇಕು. ಮುಂದೆ ಬಿಜೆಪಿ ಎಂಬ ...

ಇವರ ಅನುಕೂಲಕ್ಕೆ ತಕ್ಕಂತೆ ಯಾವ 'ಗೋದ್ರಾ' ವು ಘಟಿಸದಿದ್ದರೆ, ಇಂತದ್ದನ್ನು ಸೃಷ್ಟಿಸುವುದು ಇವರಿಗೆ ಗೊತ್ತಿದೆ. ಇಂತಹ ಹತ್ಯಾಕಾಂಡಗಳ ತೆರೆಮರೆಯಲ್ಲಿ ಯಾವ ಯಾವ ರಾಷ್ಟ್ರೀಯ-ಅಂತರ್ರಾಷ್ಟ್ರೀಯ ದುಷ್ಟ ಕೂಟಗಳ ಸಂಚುಗಳು, ಷಡ್ಯಂತ್ರಗಳು ಅಡಗಿದ್ದಾವೋ?

ಪಾರ್ಲಿಮೆಂಟುಗಳ ಮೇಲೆ ಧಾಳಿ ಇಡುವ ದುಷ್ಟರಿಗೆ, ಕಟ್ಟಡಗಳಿಗೆ ವಿಮಾನ ನುಗ್ಗಿಸಿ ಜನಗಳನ್ನು ಕೊಲ್ಲುವ ಭಯೋತ್ಪಾದಕರಿಗೆ, ಮಸೀದಿ ಒಡೆದು ಮಂದಿರ ಕಟ್ಟಲು ಹೊರಡುವ ಪಿತೂರಿಗಾರರಿಗೆ ಒಂದು ವಿಷಯ ಚೆನ್ನಾಗಿ ಗೊತ್ತಿರುತ್ತದೆ. ಅದೇನೆಂದರೆ ತಾವು ಯಾವ ಧರ್ಮದ ಹೆಸರಿನಲ್ಲಿ, ಯಾವ ಜನರ ಪರವಾಗಿ ಎಂದು 'ಇದನ್ನು' ಮಾಡುತ್ತಿದ್ದೇವೆಯೋ ಆ ಧರ್ಮಕ್ಕೆ ಆ ಸಮುದಾಯಕ್ಕೆ ಸೇರಿದ ಜನರೆಲ್ಲರೂ ತಮ್ಮ ಬೆಂಬಲಕ್ಕೆ ಇಲ್ಲ ಎಂದು.

ಇಂಥಾ ಕಾರಣ ಗಳಿಗಾಗಿಯೇ ಇವರಿಗೆ 'ಗೋದ್ರಾ' ದಲ್ಲಿ ಬೆಂದವರ ಬೂದಿಯ ಸಹಾಯ ಬೇಕಾಗುತ್ತದೆ. ಇಂತಹದ್ದೇ ಕಾರಣಗಳಿಗಾಗಿಯೇ ಅಮೇರಿಕಾ ಎಂಬ ವಿಶ್ವದ ರಣಹದ್ದು ಇದನ್ನೇ ಕಾಯುತ್ತಿರುವಂತೆ ಇಡೀ ಅಫಘಾನಿಸ್ತಾ ಎಂಬ ದೇಶದ ಮೇಲೆ ಎರಗುತ್ತದೆ. ಇಂತಹದ್ದೇ ಕಾರಣಕ್ಕೆ ಜನರಲ್ ಘರ್ವೇಜ್ ಮುಷರಫ್‌ರಂತ ರವರಿಗೆ ಅಟಲ್ ಬಿಹಾರಿ- ಜಾರ್ಜ್ ಫರ್ನಾಂಡೀಸ್‌ರಂತಹ ವರಿಗೆ ಭಾರತ-ಪಾಕಿಸ್ತಾನಗಳ ಗಡಿಯಲ್ಲಿ ಸದಾ ಉದ್ರಿಕ್ತತೆ, ಸೈನ್ಯದ ಜಮಾವಣೆ ಇರಬೇಕಾಗುತ್ತದೆ.

ಸೀಮೆ ಎಣ್ಣೆ ಬೆಲೆ ಏರಿಕೆ, ಗ್ಯಾಸ್ ಬೆಲೆಏರಿಕೆ, ಉದ್ಯೋಗ ನಾಶ, ಕೃಷಿ ನಾಶದ ವಿರುದ್ಧ, ಜಾಗತೀಕರಣ ವಿರುದ್ಧ ಗೃಹಿಣಿಯರು, ಯುವಜನರು, ರೈತರು ಭುಗಿಲೆದ್ದರೆ ಏನು ಮಾಡುವುದು ಎಂಬ ಭಯ ಅಡ್ವಾಣಿ-ಯಶವಂತ ಸಿನ್ಹಾ-ಜಾರ್ಜ್ ಬುಶ್‌ರಂತಹವರ ಎದೆಯ ಒಳಗೊಳಗೆ ಕೊರೆಯುತ್ತಿರುತ್ತದೆ.

ಗೋದ್ರಾದಂತಹ ಸ್ಮಶಾನಗಳಲ್ಲಿ ಸಿಗುವ ಒಂದು ಹಿಡಿ ಬೂದಿಯನ್ನು ದೇಶಕ್ಕೆಲ್ಲಾ ಎರಚಲು ಇವರ ಸಂಚುಕೋರ ಮನಸ್ಸುಗಳು ಹೊಂಚುಹಾಕುತ್ತಿರುತ್ತವೆ. ಇಂತಹ ಗೋದ್ರಾ, ಬಾಂಬೆ, ಕೊಯಮತ್ತೂರು, ರಾಮನಗರ, ಭಟ್ಕಳ, ಚಿಕ್ಕಮಗಳೂರು ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬೂದಿ ಕೊಡುವ ಸ್ಮಶಾನಗಳನ್ನು ಸೃಷ್ಟಿಸುವುದೇ ಒಂದು ದೊಡ್ಡ ಕರಾಳ ಕಾರ್ಯ ಯೋಜನೆಯಾಗಿದೆ. ಬಿಜೆಪಿ ಈ ಅಸ್ಥಿಯಾತ್ರೆಯನ್ನ ಬೆಂಬಲಿಸಿದೆ.

ಬಿಜೆಪಿಯ ಮಿತ್ರ ಪಕ್ಷಗಳಾದ ಎನ್‌ಡಿಎ ಅಂಗಗಳೇ ಹಲವು ಇದಕ್ಕೆ ಆಕ್ಷೇಪಿಸಿವೆ. ಈ ಯಾತ್ರೆ ತಡೆಯಬೇಕೆಂದು ಆಗ್ರಹಿಸಿವೆ. ಈ ವಾದ-ವಿವಾದ ಎಲ್ಲಿಗೆ ತಲುಪುವುದು ನೋಡಬೇಕು.

ಮುಸ್ಲಿಮರು ಸಹ ಇದೇ ರೀತಿಯಲ್ಲಿ ಬೂದಿ ಯಾತ್ರೆ ಮಾಡಿದರೆ ಅದಕ್ಕೆ ತಮ್ಮ ಆಕ್ಷೇಪವೇನೂ ಇಲ್ಲ ಎನ್ನುತ್ತಾರೆ ಬಿಜೆಪಿಯ ವಕ್ತಾರ ವಿ.ಕೆ.ಮಲ್ಹೋತ್ರಾ.

ಅವರು ಕೇಳುತ್ತಾರೆ ದೇಶದ ಹಲವು ಮಹಾತ್ಮರ ಚಿತಾಭಸ್ಮವನ್ನು ದೇಶದೆಲ್ಲೆಡೆ ಕೊಂಡೊಯ್ಯ ಲಿಲ್ಲವೇ? ಎಂದು. ಎಲ್ಲಿಯ ಮಹಾತ್ಮರು? ಎಲ್ಲಿಯ ಕರಸೇವಕರು?

ಜೀವಂತ ಸುಟ್ಟು ಕರಕಲಾದವರ ಬೂದಿಗಳನ್ನು ಕೆದಕಿ ಯಾವ ಧರ್ಮಕ್ಕೆ ಸೇರಿದ್ದು ಇದು ಎಂದು ಕೇಳುವ ಈ ನೀಚ ಶಕ್ತಿಗಳು ನಿಜಕ್ಕೂ ಧರ್ಮಕ್ಕಾಗಿ ಈ ಕೆಲಸ ಮಾಡುತ್ತಿವೆಯೇ? ಧರ್ಮದ ರಕ್ಷಣೆಗಾಗಿ ಈ ಕೆಲಸ ಮಾಡಬೇಕಿದೆಯೇ?



ದಮನಿತ ಮಹಿಳೆಯರ ದನಿಯಾಗಿ

ಮಾರ್ಚ್ 8, ಅಂತರ್ರಾಷ್ಟ್ರೀಯ ಮಹಿಳಾ ದಿನ. 1908 ರಲ್ಲಿ ಅಮೆರಿಕಾದಲ್ಲಿನ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿದ್ದ ಮಹಿಳೆಯರು 8 ಗಂಟೆ ಕೆಲಸದ ನಿಗದಿಗಾಗಿ, ಕನಿಷ್ಟ ಕಾರ್ಮಿಕ ಹಕ್ಕುಗಳ ಜಾರಿಗಾಗಿ ಒತ್ತಾಯಿಸಿ ಧೀರೋದ್ದಾತ ತ್ಯಾಗಮಯ ಹೋರಾಟ ನಡೆಸಿದರು. ಅಚರ ಹೋರಾಟ ನಡೆಸಿ ವಿಜಯ ದುಂದುಭಿ ಮೊಳಗಿಸಿದರು. ಇದರರ ವಿಜಯೋತ್ಸವವನ್ನು ಪ್ರತಿವರ್ಷ ಮಾರ್ಚ್ 8 ರಂದು ವಿಶ್ವದಾದ್ಯಂತದ ಮಹಿಳೆಯರು ಆಚರಿಸುತ್ತಾ, ತಾವು ಅನುಭವಿಸುವ ಅನ್ಯಾಯ, ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಹೋರಾಡಲು ಸ್ಫೂರ್ತಿ ಪಡೆಯುವಂತೆ 'ಕ್ಲಾರಾಜೆಟ್‌ಕ್ಲಿನ್' ಎನ್ನುವ ಕ್ರಾಂತಿಕಾರಿ ಮಹಿಳೆ' ಕರೆ ನೀಡಿದರು. 1911 ರಿಂದ ಹಿಡಿದು ಈವರೆಗೆ ಪ್ರತಿವರ್ಷ ವಿಶ್ವಮಟ್ಟದಲ್ಲಿ ಮಾರ್ಚ್ 8 ನ್ನು 'ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ'ಯಾಗಿ ಆಚರಿಸುತ್ತಿದ್ದೇವೆ. ಘನತೆಯುಕ್ತ ಬದುಕಿನ ಕಡೆಗೆ ಮಹಿಳೆಯರು ಸಾಗಲು ಮೆಟ್ಟಿಲುಗಳಾಗಿ ಮಾರ್ಪಡಬೇಕಾದ ಮಹಿಳಾ ದಿನಾಚರಣೆಯ ಮಹತ್ವವನ್ನು ಪ್ರಜ್ಞಾಪೂರ್ವಕವಾಗಿ ಸವಕಲು ಮಾಡುವ ಹುನ್ನಾರವನ್ನು ಆಳುವ ಜನ ಅನುಸರಿಸುತ್ತಿದ್ದಾರೆ. ಆದರೇನಂತೆ ಮಹಿಳಾ ದಿನಾಚರಣೆ ಕೇವಲ ಅರ್ಥ ಬದಲಾಯಿಸಿದಾಕ್ಷಣ ಮಹಿಳೆಯರ ಬದುಕನ್ನು ಬದಲಾಯಿಸಿದಂತಾದೀತೇ? ಮಹಿಳೆಯರ ಮನದೊಳಗಿನ ಬೇಗುದಿಯನ್ನು ನಂದಿಸಲಾದೀತೆ? ಹೋರಾಟದ ಹಾದಿ ಹುಗಿಯಲಾದೀತೆ? ಇವತ್ತಿಗೂ ಮಹಿಳೆಯರ ಬದುಕು ಇರುವುದೇ ಹೀಗೆ? ಅದರತ್ತ ಈ ಲೇಖನ..

ಸುಮಾರು ಹದಿನೈದು ದಿನಗಳ ಹಿಂದೆ, ಮಳವಳ್ಳಿ ತಾಲ್ಲೂಕಿನಲ್ಲಿ ಹಸಿರು ಕಾರ್ಡು, ಮತ್ತು ರೇಷನ್‌ಗಾಗಿ ಮಹಿಳೆಯರು ನಡೆಸಿದ ರ್‍ಯಾಲಿಯಲ್ಲಿ ಭಾಗವಹಿಸಿ ಬೆಂಗಳೂರಿಗೆ ವಾಪಸಾಗುತ್ತಿದ್ದೆ. ತಾಲ್ಲೂಕು ಕೇಂದ್ರವೊಂದರಲ್ಲಿ ಸಾವಿರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದ ರ್‍ಯಾಲಿಯ ಬಗ್ಗೆಯೆ ಮೆಲುಕು ಹಾಕುತ್ತಾ, ಉತ್ಸಾಹದಿಂದ ಹಿಂತಿರುಗುತ್ತಿದ್ದೆ. ಇದೇ ಗುಂಗಿನಲ್ಲಿದ್ದ ನಾನು ಬಸ್ಸು ಬೆಂಗಳೂರಿನ ಸಿಗ್ನಲ್ ಒಂದರ ಬಳಿ ದಿಢೀರನೆ ಬ್ರೇಕ್ ಹಾಕಿದಾಗ ತಲೆಗೆ ತಾಗಿ ಸುತ್ತಮುತ್ತ ನೋಡಿದೆ. ಅತ್ಯಂತ ಕರುಣಾಮಯ ದೃಶ್ಯವೊಂದನ್ನು ಕಂಡು ನಾನೀಗ ಎಲ್ಲಿದ್ದೇನೆ, ನಾನು ನೋಡುತ್ತಿರುವುದು ನಿಜವಾದ ದೃಶ್ಯವೇ? ಹಾಗಿದ್ದರೆ ಆಕೆ ಹುಚ್ಚಿಯೇ? ಅಥವಾ ಅಲ್ಲವೆ? ಮುಂತಾದ ಹತ್ತಾರು ಪ್ರಶ್ನೆಗಳು ಒಮ್ಮೆಲೇ ಎದ್ದು ಕೇವಲ ಒಂದೆರಡೇ ನಿಮಿಷದಲ್ಲಿ ಊದಿದ ಬಲೂನಿಗೆ ಪಿನ್ನು ಚುಚ್ಚಿದಂತಾದೆ. ಬಸ್ಸು ಮುಂದಕ್ಕೆ ಚಲಿಸಿದಾಗ ಖಿನ್ನಳಾಗಿ ನಾನೂ ಸಾಗಿದೆ. "ಬಸ್ಸು ನಿಂತದ್ದು ಮೈಸೂರು ರಸ್ತೆಯ ದೊಡ್ಡದೊಂದು ಮೋರಿಯೊಂದರ ಬಳಿಯಲ್ಲಿ. ಕಿಟಕಿಯಿಂದ ಇಣುಕಿ ನೋಡಿದಾಗ ಸುಮಾರು 35 ರಿಂದ 40 ವಯಸ್ಸಿನ ಮಹಿಳೆಯೊಬ್ಬಳು "ಬೆತ್ತಲೆಯಾಗಿ ಯಾರಿಗೂ ಕಾಣಲಾಗದ ರೀತಿಯಲ್ಲಿ ಇಡೀ ಶರೀರವನ್ನೆಲ್ಲಾ ಮುದುಡಿಕೊಂಡು ಬಂಡೆಯ ಮರೆಯಲ್ಲಿ ಅಡಗಿ ಕುಳಿತಿದ್ದಳು. ಸೂರ್ಯನೂ ಜಾರಿಕೊಳ್ಳುತ್ತಿರುವ ಆ ಸಮಯಕ್ಕೆ ತಾನೂ ಒಂದು ಚಿಕ್ಕ ಬಂಡೆಯ ರೀತಿಯಲ್ಲಿಯೇ ಕಾಣುವ ಪ್ರಯತ್ನ ಮಾಡಿದ್ದಳು. ನನಗೆ ಸಹ ನೋಡಿದ ಕೂಡಲೇ ಬಂಡೆಯ ಹಾಗೆ ಕಂಡಳು. ಒಂದೇ ಕಡೆ ದೃಷ್ಟಿ ನೆಟ್ಟಿದ್ದರಿಂದಾಗಿ ಆಕೆ ಮಹಿಳೆಯೆಂದು ಹೊಳೆಯಿತು. ಹಾಗಿದ್ದರೆ ಇವಳ್ಯಾಕೆ ಹೀಗೆ ಕುಳಿತಿರುವಳೆಂದು ಅಕ್ಕ-ಪಕ್ಕ ಗಮನಿಸಿದರೆ ಸ್ವಲ್ಪವೇ ದೂರದಲ್ಲಿ ಮೋರಿಯ ಒಳಗಡೆಯೇ ಒಣಗಿದ್ದ ಜಾಗದಲ್ಲಿ ಸೀರೆ, ರವಿಕೆಯನ್ನು ಒಣಗಿ ಹಾಕಿದ್ದನ್ನು ಕಂಡು ತಲೆ ತಗ್ಗಿಸಿದೆ".

ಭಾರತೀಯ ಮಹಿಳೆಯರು

"ಒಂದು ಸೀರೆ ಕೊಂಡರೆ ಎರಡು ಸೀರೆ ಉಚಿತ" ""ಒಂದಕ್ಕೆ ಹಣ ಕೊಡಿ ಮತ್ತೊಂದನ್ನು ಉಡುಗೊರೆಯಾಗಿ ಪಡೆಯಿರಿ" ಎನ್ನುವ ಸಾವಿರಾರು ಅಂಗಡಿಗಳ ಫಲಕಗಳು ಒಮ್ಮೆಲೇ ನೆನಪಾಗಿ ಅಣಕ ಮಾಡಿದಂತಾಯ್ತು. ಈ ಮಾರಾ- ಮಾರಿ ಮಾರುಕಟ್ಟೆಯಿಂದ ಸಾವಿರಾರು ಮೈಲಿ ದೂರ ಉಳಿದಿರುವ ಈ ಮಹಿಳೆಯ ಪರಿಸ್ಥಿತಿಯನ್ನು ನಿಜವಾಗಿಯೂ ನಂಬಬಹುದಾದ ಜನರಿದ್ದಾರೆಯೇ? ಎಂದು ಯೋಚಿಸಿದೆ. ಇವಳ ಪರಿಸ್ಥಿತಿ ಇಂಥದೇ ಇನ್ನೊಬ್ಬ ಮಹಿಳೆಗೆ ಮಾತ್ರವೇ ತಿಳಿಯಬಹುದಾದ್ದೆನಿಸಿ ಇಲ್ಲ ಇಂಥ ದಾರುಣ ಪರಿಸ್ಥಿತಿಯನ್ನು ಎಲ್ಲರಿಗೂ ಅರ್ಥಮಾಡಿಸ ಬೇಕು. ಎನ್ನುವ ಬಯಕೆ ಮತ್ತಷ್ಟೂ ಹೆಚ್ಚಾಗಿ ಬಸ್ಸಿನಿಂದಿಳಿದೆ.

ಎನ್.ಪ್ರಭಾ

ಬಹುಶಃ ಆಕೆಗೆ ಜನನಿಬಿಡ ಪ್ರದೇಶದಲ್ಲಿ ಬಟ್ಟೆ ಒಗೆದು ಒಣಗಿಸದೆ ಬೇರೆ ಉಪಾಯವೇ ಇರಲಿಲ್ಲವೆಂದು ಈ ಸಮಾಜ ಗೊತ್ತಿರುವ ಯಾರಿಗಾದರೂ ಹೊಳೆಯಲೇಬೇಕು. ಆ ಮಹಿಳೆಗೊಂದು ಸೀರೆ ಕೊಡುವ ಜನ ನಮ್ಮಲ್ಲಿಲ್ಲವೆ? ಎನ್ನುವ ಪ್ರಶ್ನೆಗಳು ಮೂಡಬಹುದು. ಅಪನಂಬಿಕೆಗಳು, ಅಕ್ರಮಗಳು, ದುಷ್ಟಯೋಜನೆಗಳನ್ನೇ ಎದುರು ನೋಡುತ್ತಿರುವ ನಾವು ನಿಜವಾದ ಅಮಾಯಕರ ಬಗ್ಗೆ ಮರುಕ ಪಡುವ ಸ್ಥಿತಿಯಲ್ಲಿದ್ದೇವೆಯೇ? ಬೀದಿಯಲ್ಲಿ ಬದುಕುವ ನಿರ್ಗತಿಕ ಹೆಂಗಸರ ಬಗ್ಗೆ ಕರುಣೆ ತೋರಬಲ್ಲೆವೆ? ಇಷ್ಟಕ್ಕೂ ಆ ಮಹಿಳೆ ಈ ಪ್ರಯತ್ನಗಳನ್ನು ಮಾಡಿರಲಾರಳೆ? ಕೇವಲ ತಿರಿದು ತಿನ್ನುವ, ತಿರಿದು ಮಾನ ಮುಚ್ಚುವ ಬಗ್ಗೆ ಮಾತ್ರವೇ ಆಲೋಚಿಸಬೇಕೆ? ಮುಂತಾದ ಪ್ರಶ್ನೆಗಳನ್ನು ಸಹ ಜೊತೆಜೊತೆಗೆ ಹಾಕಿ ಕೊಳ್ಳಬೇಕಾದ ಅನಿವಾರ್ಯತೆ ಈ ಸಮಾಜಕ್ಕಿದೆ. ಇದು ಕೇವಲ ಒಬ್ಬ ಮಹಿಳೆಯ ಕಷ್ಟವಲ್ಲ. ಇಂಥ ಬರ್ಬರ ಬದುಕನ್ನು ನಡೆಸುವ ಸಾವಿರಾರು ಮಹಿಳೆಯರು ನಮ್ಮ ಮಧ್ಯದಲ್ಲಿದ್ದಾರೆ. ಇವರೆಲ್ಲರೂ "ಭಾರತೀಯ ಮಹಿಳೆಯರೇ"

ಈ ದೃಶ್ಯ ಮಾಸುವ ಮುನ್ನವೇ ಮತ್ತೊಂದು ಘಟನೆ ಎದುರಾಯಿತು.

ಮಾರ್ಚ್ 1ರಂದು ರಾಜಧಾನಿಯ ಕೇಂದ್ರ ಭಾಗವೊಂದರಲ್ಲಿ ಅಂಗನವಾಡಿ ನೌಕರರ ಮೇಲೆ ಹೆಚ್ಚಾಗುತ್ತಿರುವ ದೌರ್ಜನ್ಯಗಳ ವಿರುದ್ಧ ಪ್ರತಿಭಟನಾ ಪ್ರದರ್ಶನ ನಡೆಸುತ್ತಿದ್ದೆವು. 4 ತಿಂಗಳ ಹಸುಳೆಯೊಂದನ್ನು ಅಪ್ಪಿಕೊಂಡು ಇದೇ ದಾರಿಯಲ್ಲಿ ಹಾದುಹೋಗುವಾಗ ಮ[illegible]ಯೊಬ್ಬರು ದಿಢೀರನೆ ಮಗುವಿನ ಸಮೇತ ನಡುರಸ್ತೆಯಲ್ಲಿ ಬಿದ್ದುಬಿಟ್ಟರು. ನಮ್ಮ ಜೊತೆಗಿದ್ದ ಕೆಲ ಮಹಿಳೆಯರು ಆಕೆಯ ಅಡಿಗೆ ಸಿಲುಕಿದ್ದ ಮಗುವನ್ನು ಎತ್ತಿಕೊಂಡು ಬಿದ್ದ ಮಹಿಳೆಯನ್ನು ರಸ್ತೆಯಿಂದ ಬದಿಗೆ ತಂದು ಕೂಡಿಸಿ, ನೀರು ಕುಡಿಸಿ ಚೇತರಿಕೆ ಮೂಡಿದ ಮೇಲೆ ವಿಚಾರಿಸಿದಾಗ, "ಊಟ ಮಾಡಿ ಮೂರು ದಿನ ಆಯ್ತು ಕೂಲಿ ಸಲುವಾಗಿ ಹುಡುಕಾಡ್ತಾ ಇದ್ದೀನಿ. ಎಲ್ಲೂ ಕೂಲಿ ಸಿಗಲಿಲ್ಲ. ಬಸ್ಸಿಗೂ ಕಾಸಿಲ್ಲದೆ



ಅಸಮಾನತೆಗೆ ಎಣೆಯುಂಟೆ?

ಗುಜರಾತಿನ ಬೀದಿಗಳಲ್ಲಿ ರಕ್ತ ಹರಿಯುತ್ತಿತ್ತು. ಕೇಂದ್ರದ ವಿತ್ತ ಮಂತ್ರಿಗಳ ಬಜೆಟ್ ಅದೇ ಸಮಯಕ್ಕೆ ಮಂಡನೆಯಾಗಿತ್ತು. ಒಂದಕ್ಕಿಂತ ಒಂದು ಭಯಾನಕ ಯಾವುದರ ಕಡೆಗೆ ಗಮನ ಕೊಡುವುದು ಯಾವುದನ್ನು ವಿರೋಧಿಸುವುದು.

ಗ್ಯಾಸ್ ಸಿಲಿಂಡರ್‌ನ ಬೆಲೆ ಒಂದೇ ಬಾರಿಗೆ 40 ರೂಪಾಯಿಗಳು ಏರಿಕೆಯಾಯಿತು. ಮೇಣದ ಬತ್ತಿಯಿಂದ ಹಿಡಿದು, ಸಕ್ಕರೆ, ಸೀಮೆ ಎಣ್ಣೆ, ಆಹಾರ ಪದಾರ್ಥಗಳು ಎಲ್ಲದರ ಬೆಲೆಗಳು ತಲೆಬುಡವಿಲ್ಲದೆ ಏರಿದವು. ಇದೇ ಸಂದರ್ಭಕ್ಕೆ ಮಹಿಳೆಯರ ದುಡಿಮೆಯನ್ನೇ ಅವಲಂಬಿಸಿ ನೂರಕ್ಕೆ 35 ಕುಟುಂಬಗಳು ಬದುಕನ್ನು ದೂಡುತ್ತಿವೆ. ಕೋಟ್ಯಾಂತರ ಮಹಿಳೆಯರು ಬಡತನ ರೇಖೆಗಿಂತ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ ಬೆಲೆಯೇರಿಕೆಯನ್ನು ನಿಭಾಯಿಸುವುದಾದರು ಹೇಗೆ.

ಬಜೆಟ್ ಎಂಬ ಭಯೋತ್ಪಾದನೆ

ಯಶವಂತ ಸಿನ್ಹಾರವರು ಮಂಡಿಸಿದ ಬಜೆಟ್ ಬಗ್ಗೆ ಅವರ ಪತ್ನಿಗೆ ಸಿಟ್ಟು ಬಂದಿತ್ತೆಂದ ಮೇಲೆ ಸಾಮಾನ್ಯ ಮಹಿಳೆಯರ ಗತಿ ಏನಾಗಿರಬೇಕು. ಹೇಗೆ ಹೊಟ್ಟೆ ತುಂಬಿಸಿಕೊಳ್ಳಬೇಕು.

ಕೌಟುಂಬಿಕ ಜವಾಬ್ದಾರಿಗಳನ್ನು ಮಹಿಳೆಯರ ಪಾಲಿಗೆ ಭಯೋತ್ಪಾದನೆಯೇ ಸರಿ.

ಶ್ರೀಮಂತರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಹಣಕಾಸು ಬಂಡವಾಳಗರಿಗೆ ರಿಯಾಯ್ತಿಗಳನ್ನು ಕೊಡುವ ಸಲುವಾಗಿ 'ಸ್ವದೇಶಿ ಮಹಿಳೆಯರನ್ನು' ಶಾಪಗ್ರಸ್ತಗೊಳಿಸಿ ಬೆಲೆಗಳನ್ನು ಹೇರಿದ ಆಳುವ ಜನ ಮಹಿಳೆಯರಿಗಾಗಿ ಲಿಪ್‌ಸ್ಟಿಕ್ ಮುಂತಾದ ಮೇಕಪ್ ಸಾಮಗ್ರಿಗಳ ಬೆಲೆಗಳನ್ನು ಇಳಿಸಿದ್ದಾರಂತೆ. ಬಟ್ಟೆಯಿಲ್ಲದೇ ಮೋರಿ ಕೆಳಗೆ ಅಡಗಿ ಕುಳಿತ, ಹೊಟ್ಟೆಗಿಲ್ಲದೇ ಸುಸ್ತಾಗಿ ಬಿದ್ದ, ಕೂಲಿ-ನಾಲಿ ಮಾಡಿ ಕುಟುಂಬ ಸಾಕುತ್ತಿರುವ ಮಹಿಳೆಯರಿಗೆ ಇದಕ್ಕಿಂತ ಬೇರೆ ಉಡುಗೊರೆ ಬೇಕೆ?

ಕೆಲಸ ಇಲ್ಲದೇ, ಕೂಲಿ ಇಲ್ಲದೆ ಲೆಕ್ಕಕ್ಕಿಲ್ಲದಷ್ಟು ಕುಟುಂಬಗಳು ಬೀದಿ ಪಾಲಾಗುತ್ತಿವೆ. ಅದೇ ಸಮಯಕ್ಕೆ ಜೀವನಾವಶ್ಯಕ ವಸ್ತುಗಳು, ಶಿಕ್ಷಣ, ಆರೋಗ್ಯ ಎಲ್ಲದರ ಬೆಲೆ ಏರುತ್ತಿದೆ. ಇಂತಹ ಏರು-ಪೇರುಗಳಿಂದಾಗಿ ವರದಕ್ಷಿಣೆ ಕಿರುಕುಳ, ಮಹಿಳೆಯರ ಮೇಲಿನ ಹಿಂಸಾಚಾರ, ವಂಚನೆ, ಬಹುಪತ್ನಿತ್ವ ಹೆಣ್ಣುಮಕ್ಕಳ ಮಾರಾಟ, ಹೆಣ್ಣು ಭ್ರೂಣಹತ್ಯೆ, ಕೊಲೆಗಳು ಮುಂತಾದ ಪ್ರಕರಣಗಳು ಗಾಬರಿ ಹುಟ್ಟಿಸುವಷ್ಟು ಹೆಚ್ಚಾಗುತ್ತಿವೆ.

ಹೆಣ್ಣು ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವ ವರದಿಯಂತೂ, ಮುಂದೊಂದು ದಿನ ಪುರುಷ ಮತ್ತು

ಬಾಳಬೇಕಾದೀತೆಂಬ ಭಯ ಹುಟ್ಟಿಸುತ್ತಿದೆ. ಕಂದಮ್ಮಗಳು ವಯೋವೃದ್ಧರು ಎನ್ನುವ ಭೇದವೂ ಇಲ್ಲದೇ ಈಗಲೇ ಇಷ್ಟೊಂದು ಪ್ರಮಾಣದ ಅತ್ಯಾಚಾರಗಳು ಮಹಿಳೆಯರ ಮೇಲೆ ನಡೆಯುತ್ತಿರುವಾಗ ಮುಂದಿನ ಪರಸ್ಥಿತಿ ಏನಾಗಬಹುದು.

ನೇರ ಬಲಿಗಳು

ಹದಗೆಡುತ್ತಿರುವ ಸಾಮಾಜಿಕ ಪರಿಸ್ಥಿತಿಗೆ ನೇರವಾಗಿ ಬಲಿಪಶುಗಳಾಗುತ್ತಿರುವವರು ಮಹಿಳೆಯರು. ಬೆಲೆಯೇರಿಕೆಗಳಿಂದಾಗಿ, ಕೋಮು ಹಿಂಸಾಚಾರಗಳಿಂದಾಗಿ, ಭಯೋತ್ಪಾದನೆಯಿಂದಾಗಿ, ರಾಜಕೀಯ ಹಿಂಸಾಚಾರಗಳಿಂದಾಗಿ, ಸೆಕ್ಸ್ ಮತ್ತು ಕ್ರೌರ್ಯಗಳನ್ನೇ ವೈಭವೀಕರಿಸುವ ಮಾಧ್ಯಮಗಳ ದಾಳಿಗಳಿಂದಾಗಿ, ಉದಾರೀಕರಣದ ಹೊಂದಾಣಿಕೆಗಳಿಂದಾಗಿ ಮಹಿಳೆಯರ ಬದುಕು ಅಸಹನೀಯವಾಗುತ್ತಿದೆ.

ಇಂಥ ಹಿನ್ನೆಲೆಯಲ್ಲಿ ಬರುತ್ತಿರುವ ಅಂತರಾಷ್ಟ್ರೀಯ ಮಹಿಳಾ ದಿನ ಹೆಚ್ಚೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತಿದೆ. ಅಂತರಾಷ್ಟ್ರೀಯ ಮಹಿಳಾ ದಿನವೆಂದರೆ ಟಿ.ವಿ. ಕಾರ್ಯಕ್ರಮವೊಂದರಲ್ಲಿ ಪ್ರಸಾರವಾದ ರೀತಿಯಲ್ಲಿ ಸ್ವಲ್ಪ ನಗು-ಸ್ವಲ್ಪ ಸಂತೋಷವಲ್ಲ. ಸ್ವಲ್ಪ ಹುಳಿ ಸ್ವಲ್ಪ ಸಿಹಿ ಎನ್ನುವ ಜಾಹೀರಾತಿನ ರೀತಿಯಲ್ಲಲ್ಲ.

ಇದು ಅಕ್ರಮ, ಅನ್ಯಾಯ, ಅಸಮಾನತೆ, ಶೋಷಣೆಗಳ ವಿರುದ್ಧ ಹೋರಾಟದ ಸ್ಫೂರ್ತಿಯ ಅಸ್ತ್ರ. ಧೀರೋದ್ದಾತ ಹೋರಾಟ ನಡೆಸಿ ವಿಜಯಗಾಥೆ ಮೆರೆದ ಮಹಿಳೆಯರ, ಮಾದರಿಗಳನ್ನು ಸೃಷ್ಟಿ ಮಾಡಲು ಪಣ

ತರ್ರಾಷ್ಟ್ರೀಯ ಮಹಿಳಾದಿನ

ಮಾರ್ಕೆಟ್‌ನಿಂದ ಶಿವಾಜಿನಗರಕ್ಕೆ ನಡೆದೇ ಹೊರಟಿದ್ದೆ ತಲೆ ಸುತ್ತಿ ಹಿಂಗಾಯ್ತು ಎಂದಳು". ಆಕೆಯ ಹೇಳಿಕೆಯ ಬಗ್ಗೆ ಎಂಥದೇ ಗುಮಾನಿ ಪಡುವ ಅಗತ್ಯವೇ ಇರಲಿಲ್ಲ. ಯಾಕೆಂದರೆ ಆಕೆ ಅಷ್ಟೊಂದು ಅಸ್ವಸ್ಥಳಾಗಿದ್ದಳು. ಅಂಥಾ ಸಂದರ್ಭದಲ್ಲೂ ಯಾರೋ ಕೊಡಲು ಮುಂದಾದ 10 ರೂಪಾಯಿಗಳನ್ನು ಖಂಡಿತವಾಗಿ ಬೇಡವೆಂದಿದ್ದಳು. ಹೊಟ್ಟೆಗಿಲ್ಲದ ಸಾವಿರಾರು ಮಹಿಳೆಯರ ಪರಿಸ್ಥಿತಿಯನ್ನು ಆಕೆ ಬಿಂಬಿಸಿದ್ದಳು.

ಬೆಳಕು ಚೆಲ್ಲಲಿ

ಮಹಿಳಾ ಸಬಲೀಕರಣ ವರ್ಷ ಮುಗಿದಿದೆ. ಇನ್ನು ಅಂತರ್ರಾಷ್ಟ್ರೀಯ ಮಹಿಳಾ ದಿನಕ್ಕೆ ಕೇವಲ 7 ದಿನ ಉಳಿದಿದೆಯೆಂದು ನೆನೆದಾಗ ಅವೆರಡರ ನಡುವೆ ಎಂಥಾ ದೊಡ್ಡ ಕಂದರವಿದೆಯೆನಿಸಿ ಇಂಥಾ ಕೋಟ್ಯಾಂತರ ಮಹಿಳೆಯರ ಭವಿಷ್ಯದ, ಕಡೆಗೆ ಅಂತರಾಷ್ಟ್ರೀಯ ಮಹಿಳಾ ದಿನ ಬೆಳಕನ್ನು ಚೆಲ್ಲಲಿ, ಚಳುವಳಿಯ ಸ್ಫೂರ್ತಿಯನ್ನು ತುಂಬಲಿ, ಕೇವಲ ಮೊಸಳೆ ಕಣ್ಣೀರಿನಲ್ಲಿ ತೊಯ್ದು ಹೋಗುತ್ತಿರುವ ಮಹಿಳೆಯರು ಕನಿಷ್ಠ ಎರಡು ಹೊತ್ತಿನ ಗಂಜಿಗಾದರೂ ಮಾನ ಮುಚ್ಚುವ ಬಟ್ಟೆಗಾದರೂ ಸೆಣಸಾಡುವಂತಾಗಲಿ ಎಂದು ಆಸೆ ಪಡುತ್ತಾ ಅಲ್ಲಿಂದ ಹೊರಟೆ.

ನೇರವಾಗಿ ಕಛೇರಿಗೆ ಬಂದೆ. ಕಛೇರಿಯಲ್ಲಿದ್ದ ಸಂಗಾತಿಗಳೆಲ್ಲಾ ಟಿ.ವಿ. ಮುಂದೆ ಕುಳಿತಿದ್ದರು. ಎಲ್ಲರ ಮುಖದಲ್ಲೂ ದುಃಖದ ಛಾಯೆ. ಮೌನವಾಗಿ ಟಿ.ವಿ.ನೋಡುತ್ತಿದ್ದರು. ನಾನೂ ಸಹ ಟಿ.ವಿ.ಯ ಕಡೆ ಕಣ್ಣಾಡಿಸಿದೆ.

ಗುಜರಾತಿನ ಬೀದಿಗಳಲ್ಲಿ ಮಕ್ಕಳು, ಮಹಿಳೆಯರು ಮುಗ್ಧರು ಜೀವಂತ ಸುಟ್ಟುಹೋಗುತ್ತಿದ್ದ ದೃಶ್ಯ ಪ್ರಸಾರಗೊಳ್ಳುತ್ತಿತ್ತು. ಮನೆಗಳಿಗೆ ಬೆಂಕಿ ಹಚ್ಚಲಾಗುತ್ತಿತ್ತು. ಹೆಂಗಸರು, ಪೋಲೀಸರೆದುರು 'ಜೀವಭಿಕ್ಷೆ ಕೇಳುತ್ತಿದ್ದರು' 'ಮಾನ' ಕಾಪಾಡಿ ಎಂದು ಗೋಗರೆಯುತ್ತಿದ್ದರು. ಏನು ನಡೆಯುತ್ತಿಲ್ಲವೆನ್ನುವ ಹಾಗೆ ತಮಗೆ ಸಂಬಂಧವಿಲ್ಲದ ರೀತಿಯಲ್ಲಿ ಪೋಲೀಸರು ನಿರ್ಲಿಪ್ತರಾಗಿ ನೋಡುತ್ತಾ ನಿಂತಿದ್ದರು.

ಮನುಷ್ಯ- ಮನುಷ್ಯನನ್ನು ಜೀವಂತ ಸುಟ್ಟು ಹಾಕುತ್ತಿದ್ದ ಘೋರ ಘಟನೆಗಳನ್ನು ವೀಕ್ಷಿಸಲು ಸಾಧ್ಯವಾಗಲಿಲ್ಲ. ನನಗೆ ಅರಿವಿಲ್ಲದೇ ಕಣ್ಣೀರು ಹರಿಯುತ್ತಿತ್ತು. ನನ್ನದೇ ಕುಟುಂಬದಲ್ಲಿ ದುಖಃ ಆವರಿಸಿದ ಅನುಭವವಾಗಿ ನಿಲ್ಲಲಾಗದೆ ಮರೆಯಲ್ಲಿ ಹೋಗಿ ಕುಳಿತೆ.



ಬೆನ್ನು ಬಾಗಿ ಮುಪ್ಪಡರಿದರೂ ತಪ್ಪದ ದುಡಿಮೆ

ರೈಲಿನೊಳಗೆ ಬೆಂದವರು, ಬೀದಿಗಳಲ್ಲಿ ಸತ್ತವರು, ಮನೆಗಳಲ್ಲಿ ಕರಕಲಾದವರು ಎಲ್ಲರೂ ನಮ್ಮವರೆ. ಸಾಯುವಾಗಿನ ಎಲ್ಲರ ಆರ್ತನಾದ ಒಂದೆ. ದುರುಳರ ತೆವಲುಗಳಿಗೆ, ಹಿತಾಸಕ್ತಿಗಳಿಗೆ ಮುಗ್ಧರು ಮಹಿಳೆಯರು ಜೀವ ತೆತ್ತಿದ್ದರು. ಮಕ್ಕಳಿಗೆ ಅಪ್ಪ-ಅಮ್ಮ ಇಲ್ಲವಾದರು. ಹೆತ್ತ ಒಡಲುಗಳ ಮುಂದೆಯೇ ಮಕ್ಕಳು ಜೀವಂತ ಬೆಂದುಹೋದರು. ಬಂಧು-ಬಳಗವನ್ನು ಕಳೆದುಕೊಂಡರು.

"ರಾಜಕೀಯ"ಕ್ಕೆ ಬೇರೆ ವಿಷಯಗಳಿಲ್ಲವೇ. ಮುಗ್ದ ಜನರನ್ನು ಬಲಿ ಕೊಟ್ಟೇ ಗದ್ದುಗೆ ಏರಬೇಕೆ? ಹೆಂಗಸರ ಬಗೆಗಿನ ಮೃದು ನುಡಿಗಳು ಭಾಷಣಕ್ಕೆ ಮಾತ್ರವೆ? ಈ ದೇಶದ ಕಾನೂನು ಕಟ್ಟಳೆಗಳು, ನ್ಯಾಯಾಲಯಗಳು, ಸಂವಿಧಾನ ಇವೆಲ್ಲವೂ ಹೊಟ್ಟೆಗಿಲ್ಲದ ಜನತೆಗೆ ಮಾತ್ರವೆ ಇರುವಂಥವೆ? ಮುಂತಾದ ಪ್ರಶ್ನೆಗಳನ್ನು ಯಾರಿಗೆ ಹಾಕಬೇಕು. ಪ್ರಶ್ನೆಗೆ ಉತ್ತರ ನೀಡಬೇಕಾದ, ಜವಾಬ್ದಾರಿ ಸ್ಥಾನದಲ್ಲಿರುವ ಜನರೆ, ಕಾನೂನನ್ನು ಕೈಯ್ಯಿಗೆ ಕೈಯಿಂದ-ತಲವಾರಿಗೆ ಹಸ್ತಾಂತರ ಮಾಡಿಕೊಂಡಾಗಿದೆ.

"ನಮಗೆ ಸಾವೇ ದಿಕ್ಕು".

ಬಟ್ಟೆಯಿಲ್ಲದೆ ಬೆತ್ತಲೆ ಕುಳಿತಿದ್ದ ಮಹಿಳೆ ಒಂದು ಕಡೆ! ಬಟ್ಟೆಯಿದ್ದೂ ಮಾನ ರಕ್ಷಿಸಿಕೊಳ್ಳಲಾಗದ ಮಹಿಳೆ ಮತ್ತೊಂದು ಕಡೆ. ಹೊಟ್ಟೆಗಿಲ್ಲದ ಅಮ್ಮನ ಎದೆಯೆಂಬ ಎಲುಬಿಗೆ ಅಂಟಿಕೊಂಡಿದ್ದ ಹಸುಳೆ ಒಂದು ಕಡೆ. ಹೆತ್ತ ಕರುಳಿನ ಆರ್ತನಾದಕ್ಕೆ ಬೆಲೆಯಿಲ್ಲವಾಗಿ ಯಾರದ್ದೋ ಕೈವಾಡಗಳಿಗೆ ಬಲಿಯಾಗಿ ಬೆಂದುಹೋದ ಕಂದಮ್ಮಗಳು ಇನ್ನೊಂದು ಕಡೆ. ಈ ದೇಶದ ಮಹಿಳೆಯರು ಕ್ಷಮಯಾಧರಿತ್ರಿ ಯರು, ಸಹನಾ ಮೂರ್ತಿಗಳು ಆಗಿರಬೇಕೆಂಬ ಸಂದೇಶಗಳು ಎಲ್ಲ ಕಡೆ. ಅಬ್ಬಾ ಎಂಥಾ ಸುಂದರ ಸಮಾಜ! "ರಾಮರಾಜ್ಯವೆಂದರೆ" ಇದೇ ಎಂದು ಖಂಡಿತ ಗೊತ್ತಿರಲಿಲ್ಲ. ಚರಿತ್ರೆಯ ಬದಲಾವಣೆಯೆಂದರೆ ಹೀಗೆ ಎಂದು ತಿಳಿದಿರಲಿಲ್ಲ.

ಶೋಷಣೆಮುಕ್ತ ಸಮಾಜ, ಮಹಿಳಾ ಸಮಾನತೆ ಚರಿತ್ರೆಯ ಮುಂದಿನ ಪಾಠವಾಗಬೇಕು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಈ ಪಾಠವನ್ನು ಅನ್ವಯಿಸಲು ಪ್ರೇರಣೆಯಾಗಬೇಕು. ಮಹಿಳಾ ದಿನ ಹುಟ್ಟಿದ್ದೆ ಅಸಮಾನತೆ ಅನ್ಯಾಯದ ವಿರುದ್ಧದ ಸಂಘರ್ಷದಲ್ಲಿ ತಾನೆ? ○

ವಿಜಾಪುರ : ಸಂಘರ್ಷದ ನಡುವೆ ಮಹಿಳಾ ದಿನಾಚರಣೆ

ಅಂತರ್ರಾಷ್ಟ್ರೀಯ ಮಹಿಳಾ ದಿನವೆಂದು ಆಚರಣೆಗೆ ಬಂದುದೇ ಧೀಮಂತ ಹೋರಾಟದ ಮೂಲಕ. ಈ ಪರಂಪರೆ ಸಾರ್ಥಕಗೊಳಿಸುವಂತೆ ವಿಜಾಪುರದಲ್ಲಿ ದಿನಾಚರಣೆ ನಡೆಯಿತು. ಕೋಮುವಾದಿಗಳು ಗಲಭೆಯ ಉದ್ವಿಗ್ನತೆ ಹಬ್ಬಿಸುತ್ತಾ, ಬೆದರಿಕೆ ಒಡ್ಡಿರುವಾಗ ಶಾಂತಿ-ಸೌಹಾರ್ದತೆಗಾಗಿ ಮಹಿಳೆಯರು ಬೀದಿ ಬೀದಿಗಳಲ್ಲಿ ಇಳಿದರು. ಪೋಲೀಸರ ಬೆದರಿಕೆಯನ್ನು ಧಿಕ್ಕರಿಸಿದರು. ಆ ಕಾರ್ಯಕ್ರಮದ ವರದಿ....

ಗುಜರಾತ್‌ನ ಗೋದ್ರಾದಲ್ಲಿನ ರೈಲು ದುರಂತ ಘಟನೆ ಮತ್ತು ಅಹ್ಮದಾಬಾದ್ ಸುತ್ತಮುತ್ತಲಿನ ಪ್ರದೇಶದಲ್ಲಿ ಹರಡಿದ ಕೋಮು ಗಲಭೆಯ ಬಿಸಿ ವಿಜಾಪುರ ನಗರ ಹಾಗೂ ಜಿಲ್ಲೆಗೂ ತಟ್ಟಿದೆ. ಡಿಸೆಂಬರ್ 6,1992ರ ಅಯೋದ್ಯೆಯಲ್ಲಿ ನಡೆದ ಬಾಬ್ರಿ ಮಸಿದಿ ದ್ವಂಸ ಪ್ರಕರಣವಾದಗಲೂ ಕೂಡ ವಿಜಾಪುರ ನಗರ ಮತ್ತು ಜಿಲ್ಲೆಯಲ್ಲಿ ಕೋಮುಸೌಹಾರ್ದಕ್ಕೆ ಧಕ್ಕೆ ಬಂದಿರಲಿಲ್ಲ. ಹಿಂದು ಮುಸ್ಲಿಂ ಜನಾಂಗ ಐಕ್ಯತೆಯನ್ನು ಸಾಧಿಸಿ ತೋರಿಸಿದ್ದರು. ವಿಜಾಪುರ ಸ್ಹೋಲಾಪುರ ಗದಗ ಬ್ರಾಡ್‌ಗೇಜ್‌ನ ಹೋರಾಟದ ದುರ್ಲಾಭವನ್ನು ಪಡೆದು, ಪ್ರಬಲ ವಿರೋಧಿಗಳಿಲ್ಲದ್ದರಿಂದ ನಗರದ ಬಿಜೆಪಿ ಶಾಸಕ ಪಾರ್ಲಿಮೆಂಟಗೂ ಏರುವ ಸ್ಥಿತಿ ಬಂದುದು ಒಂದು ದುಃಖದ ಸಂಗತಿ. ಇದರ ನಂತರ ನಗರ ಹಾಗೂ ಜಿಲ್ಲೆಯಲ್ಲಿ ಆಗಾಗ ಶಾಂತಿಕದಡುವ ಕೋಮದ್ವೇಷ ಬೆಳೆಸುವ ಸಂಘಟನೆಗಳಾದ ವಿಶ್ವಹಿಂದು ಪರಿಷತ್ ಮತ್ತು ಆರ್‌ಎಸ್ ಎಸ್ ಬೆಳೆದು ಬಂದವು. ಕಳೆದ ವರ್ಷ ಕೋಲ್ಹಾರದಲ್ಲಿ ನಡೆದ ಕೋಮುಗಲಭೆಗಳಿಗೆಲ್ಲ ಈ ಸಂಘಟನೆಗಳೇ ಪ್ರಮುಖ ರೂವಾರಿಗಳೆಂಬುದು ಅಲ್ಲಗಳೆಯದ ಸಂಗತಿ. ಇಂತಹ ಸಂದರ್ಭದಲ್ಲಿ ಗುಜರಾತ್ ಘಟನೆ ಇಲ್ಲಿನ ಜನ ಜೀವನದ ಮೇಲೆ ಗಂಭೀರ ಸ್ವರೂಪದ ಪರಿಣಾಮಗಳನ್ನು ಬೀರಿದೆ.

ಈ ಕೋಮುಗಲಭೆಯನ್ನು ವಿರೋಧಿಸಿ 'ಭಯೋತ್ಪಾದನೆ ಬೇಡ, ಶಾಂತಿ ಬೇಕು" ಎಂಬ ಘೋಷಣೆಯೊಂದಿಗೆ ಜನವಾದಿ ಮಹಿಳಾ ಸಂಘಟನೆ ಗಾಂಧಿಚೌಕದಲ್ಲಿ 'ಮಾರ್ಚ್ 8 ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ' ಅಂಗವಾಗಿ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೊದಮೊದಲು ಹೆದರಿಕೆಯನ್ನು ಪ್ರದರ್ಶಿಸಿದ ಸದಸ್ಯರು ಸುರೇಖಾ ರಜಪೂತ, ಲಕ್ಷ್ಮಿ ಭರವಸೆ ತುಂಬಿದ ನಂತರ, ನೂರಾರು ಸದಸ್ಯರು ಬೀದಿಗಿಳಿದರು. ಗಾಂಧಿಚೌಕದಲ್ಲಿ ಪೋಲಿಸರೊಂದಿಗೆ ಘರ್ಷಣೆಯಾದರೂ ಕೂಡ ಹಾಗೂ ಒಂದು ವೇಳೆ ಕಾರ್ಯಕ್ರಮ ಹಮ್ಮಿಕೊಂಡಲ್ಲಿ ಪೊಲೀಸ್ ಬಂಧನ ಕ್ಕೊಳಗಾಗಬೇಕೆಂಬ ಹೆದರಿಕೆ ಹಾಕಿದರೂ ಕೂಡ ಹೆದರಲಿಲ್ಲ. 'ಭಯೋತ್ಪಾದನೆ ಬೇಡ ಶಾಂತಿ ಬೇಕು, ಕೋಮುವಾದಕ್ಕೆ ದಿಕ್ಕಾರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಜಯವಾಗಲಿ' ಎಂಬ ಘೋಷಣೆಗಳೊಂದಿಗೆ ನಗರಸಭೆ ತೆರಳಿದರು. ವಿಜಾಪುರ ಬೇಸಿಗೆಯ ಬಿಸಿಲಿನ ಪ್ರಭಾವವನ್ನು ಲೆಕ್ಕಿಸದೇ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಅಲ್ಲಿ ವಿಚಾರ ಸಂಕಿರಣ, ನಾಟಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ' ಕುರಿತಾದ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಸುರೇಖಾ ರಜಪೂತ ವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಲಕ್ಷ್ಮಿದೇಸಾಯಿ ಗ್ರಾಹಕ ರಕ್ಷಣಾ ವೇದಿಕೆಯ ಪರವಾಗಿ ಹಾಗೂ ಪ್ರೊ. ಶ್ರೀಮತಿ ಖಾನ್ ಮಾತನಾಡುತ್ತಾ ಮಹಿಳೆಯರು ಆತ್ಮಹತ್ಯೆಗೆ ಪ್ರಯತ್ನ ಮಾಡದೇ, ದೈರ್ಯದಿಂದ ಜೀವನ ಮಾಡುವುದನ್ನು ಕಲಿಯಬೇಕಾಗಿದೆಯೆಂದರು. ಮಹಿಳೆಯರ ಹಕ್ಕಿಗಾಗಿ ಹೋರಾಟ ಮಾಡಬೇಕೆಂದು ಕರೆ ನೀಡಿದರು. ಶಾಂತಾಬಾಯಿ ಮಾನೆ ಮಹಿಳೆಯರ ಶೋಷಣೆ ವಿರುದ್ಧ ಹೋರಾಟ ಮಾಡಲು ಕರೆ ನೀಡಿದರು. ಭೀಮಶಿ ಕಲಾದಗಿ, ವ್ಹಿ.ಎಂ.ಸೊನ್ನದ, ಪ್ರಭುಗೌಡ ಪಾಟೀಲ, ಮನ್ನಸಾಬ ಕಲಾದಗಿ ಮುಂತಾದವರು ಶುಭಕೋರಿ ಮಾತನಾಡಿದರು.

ವಿಶೇಷವಾಗಿ ಯುನೆಸ್ಕೋ ಸಂಸ್ಥೆಯಿಂದ ಯುವತಿಯರು ನಾಟಕ ಪ್ರದರ್ಶನ ಮಾಡಿ, ದೇಶದಲ್ಲಿ ಕೋಮುವಾದಿ ಶಕ್ತಿಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿವೆಯೆಂಬುದನ್ನು ಎಲ್ಲರ ಮನಮುಟ್ಟುವಂತೆ ಮಾಡಿದರು.

ಅಲ್ಲಲ್ಲಿ ಮಹಿಳಾ ದಿನಾಚರಣೆಗಳು

ಬೆಂಗಳೂರು: ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ "ಭಯೋತ್ಪಾದನೆ ಮತ್ತು ಕೋಮುವಾದ ವಿರೋಧಿಸಿ" ಅಂತರಾಷ್ಟ್ರೀಯ ಮಹಿಳಾ ದಿನ ಆಚರಿಸಿತು. ಈ ಸಂದರ್ಭದಲ್ಲಿ ಏರ್ಪಡಿಸಿದ್ದ "ವಿಚಾರ ಸಂಕಿರಣದಲ್ಲಿ" ಸಂಘಟನೆಯ ಅಖಿಲ ಭಾರತ ಉಪಾಧ್ಯಕ್ಷರಾದ ಸುಧಾರವರು ಪಾಲ್ಗೊಂಡು 'ಮಹಿಳೆ ಮತ್ತು ಅಭಿವೃದ್ಧಿ'ಯ ಕುರಿತಾಗಿ ವಿಷಯ ಮಂಡಿಸಿದರು. ತಾವು ಭಾಗವಹಿಸಿದ್ದ ಬ್ರೆಜಿಲ್‌ನಲ್ಲಿ ಜರುಗಿದ 'ವರ್ಲ್ಡ್ ಸೋಷಿಯಲ್ ಫೋರಂ'ನ ಸಮ್ಮೇಳನದ ಕುರಿತಾದ ಶ್ರೀಮಂತ ಅನುಭವಗಳನ್ನು ಸಹ ಈ ಸಂದರ್ಭದಲ್ಲಿ ಹಂಚಿಕೊಂಡರು.

ವಿಚಾರವಾದಿ ರಂಜಾನ್‌ದರ್ಗಾರವರು ಭಾವಹಿಸಿ 'ಭಯೋತ್ಪಾದನೆ ಮತ್ತು ಅದರ ಬೇರುಗಳ' ಮೇಲೆ ವಿಷಯ ಪ್ರಸ್ತಾಪಿಸಿದರು.

ಜ.ಮ ಸಂಘಟನೆಯ ರಾಜ್ಯಪ್ರಧಾನ ಕಾರ್ಯದರ್ಶಿ ಕೆ.ಎಸ್ ವಿಮಲಾ, 'ಮಹಿಳೆಯರ ಮುಂದಿರುವ ಸವಾಲುಗಳ' ಕುರಿತಾಗಿ ಚರ್ಚಿಸಿದರು. ಎನ್. ಪ್ರಭಾ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮಕ್ಕೆ ಕೆ.ಎಸ್.ಶಾರದಾ ಸ್ವಗತಿಸಿದರೆ ಜಿಲ್ಲಾ ಅಧ್ಯಕ್ಷರಾದ ವಿ.ಎನ್.ಯಶೋಧಾ ವಂದನೆ ಸಲ್ಲಿಸಿದರು.

ಬೆಂಗಳೂರು ನಗರದ ಹೊರವಲಯ ಕುಂಬಳಗೋಡಿನಲ್ಲಿ ಮಹಿಳಾದಿನವನ್ನು ಆಚರಿಸಲಾಯಿತು. ಸುತ್ತ-ಮುತ್ತಲ 2 ಪಂಚಾಯ್ತಿಯ ಮಹಿಳೆಯರು ಪಾಲ್ಗೊಂಡಿದ್ದ ಬಹಿರಂಗ ಸಭೆಯಲ್ಲಿ ಜನವಾದಿಯ ರಾಜ್ಯ ಯಶೋದಾ, ಪಾಲ್ಗೊಂಡಿದ್ದರು. ಸ್ಥಳೀಯ ಮುಖಂಡರಾದ ಮುನಿಲಕ್ಷ್ಮ, ಶಾಹೀನ ಮುಂತಾದವರಿದ್ದರು. ಜನವಿರೋಧಿ ಬಜೆಟ್ ಹಾಗೂ ಗುಜರಾತಿನ ಘಟನೆಗಳ ಕುರಿತಾಗಿ ಪ್ರಸ್ತಾಪಿಸಿ ಸಾರ್ವಜನಿಕರ ಗಮನ ಸೆಳೆದರು. ತಾಲ್ಲೂಕು ಪಂಚಾಯ್ತಿ ಸದಸ್ಯರಾದ ಶಾಂತಮ್ಮ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಮಂಜುಳ ಪಾಲ್ಗೊಂಡಿದ್ದರು.


ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಜನವಾದಿಯ ವತಿಯಿಂದ "ಜನವಿರೋಧಿ ಬಜೆಟ್" ವಿರೋಧಿಸಿ, ಕೋಮುಸೌಹಾರ್ದಕ್ಕಾಗಿ ಆಗ್ರಹಿಸಿ, ಪಟ್ಟಣದಲ್ಲಿ ಮೆರವಣಿಗೆ ನಡೆಸಲಾಯಿತು. ತಹಸಿಲ್ದಾರರ ಕಛೇರಿಯ ಮುಂದೆ ಧರಣಿ ಕುಳಿತ ನೂರಾರು ಮಹಿಳೆಯರು ಕೇಂದ್ರದ ಜನವಿರೋಧಿ ಬಜೆಟ್ ಖಂಡಿಸಿ ತಹಸೀಲ್ದಾರರಿಗೆ ಮನವಿ ಮೂಲಕ ಕೋಮು ಸಾಮರಸ್ಯಕ್ಕಾಗಿ ಮನವಿ ಮಾಡುವ ಮೂಲಕ ನಾಗರೀಕರ ಗಮನ ಸೆಳೆದರು.

ಜಿಲ್ಲಾ ಕಾರ್ಯದರ್ಶಿ ಎನ್.ಪ್ರಭಾ, ತಾಲ್ಲೂಕು ಕಾರ್ಯದರ್ಶಿ, ಶಾಂತಮ್ಮ ಅಧ್ಯಕ್ಷರಾದ ಅಮರಾವತಿ ಡಿವೈಎಫ್‌ಐನ ಸಂಗಾತಿಗಳು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನ ಕೆ.ಆರ್.ಪುರಂನ ನಗರಸಭಾ ವ್ಯಾಪ್ತಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಹತ್ತಾರು ವಾರ್ಡುಗಳ ಮಹಿಳೆಯರು ಪಾಲ್ಗೊಂಡಿದ್ದರು. ಬಸ್‌ಸ್ಟ್ಯಾಂಡಿನ ಪಕ್ಕದಲ್ಲಿಯೇ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಾಕಷ್ಟು ಸಂಖ್ಯೆಯ ಸಾರ್ವಜನಿಕರು ಭಾಗವಹಿಸಿದ್ದರು. ಕೆ.ಆರ್. ಪುರಂ

ಕಾಂ. ಎನ್.ಕೆ. ಯವರ ಹೋರಾಟದ ನೆನಪುಗಳು

ಫೆಬ್ರವರಿ 16 ಕಾಮ್ರೇಡ್ ಎನ್.ಕೆ.ಯವರ ಜನ್ಮದಿನ. ಅಂದು ಅವರನ್ನು ನೆನಪಿಸಿಕೊಂಡದ್ದು ಹೋರಾಟಗಳ ನೆನಪುಗಳ ಮೂಲಕ. ಅಂತಹದ್ದೊಂದು ವಿಶಿಷ್ಟ ಕಾರ್ಯಕ್ರಮ ನಡೆದಿದ್ದು ವಿಜಾಪುರದಲ್ಲಿ. ಅದೂ ಎನ್.ಕೆ.ಯವರು ಕಟ್ಟಿ ಬೆಳೆಸಿದ ಪೌರಕಾರ್ಮಿಕರ ಸಂಘನೆಯಿಂದ...



ವಿಜಾಪುರ ನಗರಸಭೆ ಸಭಾಂಗಣದಲ್ಲಿ ಅಂದು (16 ಫೆಬ್ರುವರಿ 2002) ನಗರದ ಕಸಗುಡಿಸುವ ಕೆಲಸಗಾರರು ಸಭೆ ಸೇರಿ ಅಗಲಿದ ಹಿರಿಯ ನಾಯಕನ ಹೋರಾಟದ ಒಂದೊಂದೇ ಅನುಭವಗಳನ್ನು ಮತ್ತೊಮ್ಮೆ ನೆನಪಿಸಿಕೊಂಡರು.

16 ಫೆಬ್ರುವರಿಯಂದು ದಿವಂಗತ ಕಾಂ। ಎನ್.ಕೆ. ಉಪಾಧ್ಯಾಯರ ಜನ್ಮದಿನ ನಿಮಿತ್ತ "ಎನ್.ಕೆ.ಯವರ ಹೋರಾಟದ ನೆನಪುಗಳು" ಎಂಬ ವಿಚಾರಸಂಕಿಣರವನ್ನು ಸಿಐಟಿಯುನ ಮುನ್ಸಿಪಲ್ ಕಾಮಗಾರಿ ಯೂನಿಯನ್‌ರವರು ಹಮ್ಮಿಕೊಂಡಿದ್ದರು. 150 ಕ್ಕೂ ಹೆಚ್ಚು ಕೆಲಸಗಾರರು ಅಂದು ತಮ್ಮ ಬೆಳಗಿನ ಕೆಲಸ ಮುಗಿಸಿ, ನಗರಸಭೆ ಸಭಾಂಗಣದಲ್ಲಿ ಸಭೆ ಸೇರಿದ್ದರು.

ಈ ವಿಚಾರಸಂಕಿರಣದ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು ನ ಮುನ್ಸಿಪಲ್ ಕಾಮಗಾರಿ ಯೂನಿಯನ್‌ನ ಅಧ್ಯಕ್ಷರಾದ ವ್ಹಿ.ಎಂ. ಸೊನ್ನದ ವಹಿಸಿದರು. ನಗರಸಭೆ ನೂತನ ಅಧ್ಯಕ್ಷರಾದ ಗೂಳಪ್ಪ ಶೆಟ್ಟಗಾರ, ಉಪಾಧ್ಯಕ್ಷ ಅನ್ವರ್ ಮಹ್ಮದ್ ಸಾಬ್ ಜಮಾದಾರ್ ಮತ್ತು ನಗರಸಭೆ ಸದಸ್ಯರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

ಹೋರಾಟಗಳ ನೆನಪು

ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಭೀಮಶಿ ಕಲಾದಗಿಯವರು ಎನ್.ಕೆ.ಯವರು ಮಾಡಿದ ಕೃಷ್ಣಾನದಿ ನೀರು, ಭೀಮಾ ನದಿ ನೀರು ಸಮಸ್ಯೆ, ಬ್ರಾಡ್ ಗೇಜ್‌ಗಾಗಿ ನಡೆಸಿದ ಹೋರಾಟವನ್ನು ನೆನಸಿಕೊಂಡರು. ಅವರು ಅನುಭವಿಸಿದ ಜೈಲು ವಾಸ, ಸ್ವಾತಂತ್ರ್ಯಪೂರ್ವ ಹಾಗೂ ನಂತರ ಸಂಘಟನೆಗಳಿಗಾಗಿ ಮಾಡಿದ

ವಿಚಾರ ಸಂಕಿರಣ

ಶ್ರಮವನ್ನು ನೆನಪಿಸಿದರು. ನಗರಸಭೆ ನೂತನ ಅಧ್ಯಕ್ಷ ಗೂಳಪ್ಪ ಶೆಟ್ಟಗಾರ ಅವರ ಸ್ವಾತಂತ್ರ್ಯಪೂರ್ವ ಹೋರಾಟಗಳನ್ನು ಮೆಲಕು ಹಾಕಿದರು. ವ್ಹಿ.ಎಂ. ಕಾಳೆ- ಸಾಮೂಹಿಕ ಸಂಘಟನೆಗಳ ವೇದಿಕೆಯ ಸಂಚಾಲಕರು, ಮಾತನಾಡುತ್ತಾ ಒಬ್ಬ ಹಿರಿಯ ಕಾರ್ಮಿಕ ಮುಖಂಡ, ಅವರ ಮಾರ್ಗದರ್ಶನ ಎಲ್ಲ ಸಂಘಟನೆಗಳಿಗೂ ಬಹು ಉಪಯೋಗವಾಗಿತ್ತೆಂದು ನೆನಪಿಸಿದರು. ಅವರು ಮಾಡಿದ ಕಾರ್ಮಿಕರ ಐಕ್ಯ ಹೋರಾಟ ಕುರಿತು ನೆನಪಿಸಿದರು. ವಿಜಾಪುರದಲ್ಲಿ ಕಟ್ಟಿದ ಅತ್ಯಂತ ಹಳೆಯ ಕಾರ್ಮಿಕ ಸಂಘ ಮುನ್ಸಿಪಲ್ ಕಾಮಗಾರಿ ಯೂನಿಯನ್- ಆದುದರಿಂದ ಅವರ ಜನ್ಮದಿನ ಪ್ರಯುಕ್ತ ಕಾರ್ಯಕ್ರಮಗಳನ್ನು ಪ್ರತಿವರ್ಷ ನಗರಸಭೆಯಲ್ಲಿಯೇ ನಡೆಸಿಕೊಂಡು ಹೋಗಬೇಕೆಂದು ಕೇಳಿದವರು ಎನ್.ಆರ್. ಮಠ. ಗಣಿ ದೇಸಾಯಿಯವರ ವಿರುದ್ಧದ ಹೋರಾಟ, ರೈತ-ಕಾರ್ಮಿಕರ ಹೋರಾಟದ ದಿನಗಳನ್ನು ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ, ನೆನಪಿಸಿದರು. ಮುನ್ಸಿಪಲ್ ಕಾಮಗಾರಿ ಯೂನಿಯನ್ ಸ್ಥಾಪನೆ, ಅಲ್ಲಿ ಕೆಲಸಗಾರರಲ್ಲಿ ಮೂಡಿಸಿದ ರಾಜಕೀಯ ಪ್ರಜ್ಞೆ, ಮುನ್ಸಿಪಲ್ ಕಾಮಗಾರಿ ಯೂನಿಯನ್ ಕೆಲಸಗಾರರ 21 ದಿನಗಳ ಕಾಲ ಸೆರೆಮನೆ ವಾಸ ಕುರಿತು ವೀರಣ್ಣ ಹಳ್ಳಿ ನೆನಪಿಸಿದರು. ಸಮಾರೋಪ ಭಾಷಣ ಮಾಡಿದ ವ್ಹಿ.ಎಂ. ಸೊನ್ನದ, ಎನ್.ಕೆ. ಯವರ ಒಡನಾಟ, ಸುದೀರ್ಘ ಸ್ವಾತಂತ್ರ್ಯ ಹೋರಾಟ, ಜೈಲುವಾಸ ಮುಂತಾದವುಗಳ ಕುರಿತು ಸವಿಸ್ತಾರವಾಗಿ ನೆನಪಿಸುತ್ತಾ, ಎನ್.ಕೆ.ಯವರು ಸಾಗಿಬಂದ ಹಾದಿ ಇನ್ನು ಸುದೀರ್ಘವಾಗಿದ್ದು ಇನ್ನೂ ನಾವು ಬಹಳ ದೂರ ಸಾಗಬೇಕಾಗಿದೆಯೆಂದು ತಿಳಿಸಿದರು. ಇದರಲ್ಲಿ ಎಲ್ಲ ಕಾರ್ಮಿಕರು, ರೈತರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು ಕೈಗೂಡಿಸಬೇಕೆಂದು ಕರೆ ನೀಡಿದರು.

ಲಕ್ಷ್ಮಿ ಮೈಲಾರಿ ವಂದನಾರ್ಪಣೆ ಮಾಡಿದರು. ಜೀವವಿಮಾ ಇಲಾಖೆಯ ನೌಕರರ ಸಂಘದ ಕಾರ್ಯದರ್ಶಿ ಎಸ್.ಎಂ. ನಾವಲಗಿ, ಆರ್.ಟಿ. ಕುಲಕಣಿ, ರವಿ ವಾರ ಸಂತೆಯ ಕಿರುಕಳ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ನಾಗನೂರು, ಪುರಸಭೆ ನೌಕರರ ಸಂಘದ ಅಧ್ಯಕ್ಷ ಸೌದಾಗಾರ, ಕಾಲೇಜು ಶಿಕ್ಷಕಿ ಪ್ರೊ ಖಾನ್ ಮೇಡಮ್ ಎನ್.ಕೆ.ಯವರ ಮೊಮ್ಮಕ್ಕಳು, ಸೊಸೆಯಂದಿರು ಮುಂತಾದವರು ಭಾಗವಹಿಸಿದರು. ○





ಕೇರಳದಾದ್ಯಂತ 'ಇಎಂಎಸ್ ದಿನ'

ಕಾಮ್ರೇಡ್ ಇಎಂಎಸ್ ನಂಬೂದರಿ ಪಾಡ್‌ರವರ ನಾಲ್ಕನೇ ಮರಣ ವಾರ್ಷಿಕ ದಿನವಾದ ಇದೇ ಮಾರ್ಚ್ 19 ರಂದು ಕೇರಳದಾದ್ಯಂತ ಕಾರ್ಮಿಕ ವರ್ಗದ ಈ ಮಹಾನ್ ಸಿದ್ಧಾಂತಿ ಹಾಗೂ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸುವ ಸಮಾರಂಭಗಳು ನಡೆದವು. ಸಿಪಿಐ(ಎಂ) ಘಟಕಗಳು ಮತ್ತು ಹಲವಾರು ಸಾಮೂಹಿಕ ಸಂಘಟನೆಗಳು ಈ ಸಮಾರಂಭಗಳಲ್ಲಿ ಇಎಂಎಸ್ ಗೆ ಶ್ರದ್ಧಾಂಜಲಿ ಅರ್ಪಿಸಿದವು. ಎಲ್ಲಾ ಸಿಪಿಐ(ಎಂ) ಕಚೇರಿಗಳನ್ನು ಕೆಂಬಾವುಟದಿಂದ ಸಿಂಗರಿಸಿ ಇಎಂಎಸ್ ಭಾವಚಿತ್ರಕ್ಕೆ ಪುಷ್ಪಸಮರ್ಪಣೆ ಪ್ರತಿಮೆಯೆದುರು ಇಎಂಎಸ್ ಕುಟುಂಬದವರು ಮತ್ತು ಸಾವಿರಾರು ಜನ ನಮನ ಸಲ್ಲಿಸಿದರು. ಕಾಂ. ಇ.ಎಂ.ಎಸ್. ರೊಂದಿಗೆ ಜೈಲಿನಲ್ಲಿನ ಅನುಭವಗಳನ್ನು ಕುರಿತು ಒಂದು ಹೊಸ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. 'ದೇಶಾಭಿಮಾನಿ' ದೈನಿಕ ಕೂಡಾ ತನ್ನ ಎಲ್ಲಾ ಆರು ಆವೃತ್ತಿಗಳ ಕಛೇರಿಗಳಲ್ಲಿ ಸ್ಮರಣಾರ್ಥ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಕೊಟ್ಟಾಯಂನಲ್ಲಿ ಜನತಾ ಪತ್ರಿಕೋದ್ಯಮಕ್ಕೆ ಇಎಂಎಸ್ ಕೊಡುಗೆಯ ಬಗ್ಗೆ ವಿಚಾರಸಂಕಿರಣ ನಡೆಯಿತು. ಮಲೆಯಾಳಂ ಟಿ.ವಿ.ಚಾನೆಲ್ 'ಕೈರಳಿ'

.........ಮಹಿಳಾ ದಿನಾಚರಣೆ

ಪುಟ 7 ರಿಂದ

ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಶ್ರೀಮತಿ ಉಮಾ ದೇಸಾಯಿ ಸಭೆಯನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಎನ್ ಪ್ರಭಾ, ಉಪಾಧ್ಯಕ್ಷರಾದ ಸುನಂದಾ, SJSRY ನ ಅಧ್ಯಕ್ಷರಾದ ಮಂಜುಳಾ ಮುಂತಾದವರು ಅತಿಥಿಗಳಾಗಿ ಪಾಲ್ಗೊಂಡಿದ್ದರು.

ವಿವಿಧ ವಾರ್ಡುಗಳಲ್ಲಿ ಏರ್ಪಡಿಸಿದ್ದ ಹಲವಾರು ಸ್ಪರ್ದೆಗಳಲ್ಲಿ ವಿಜೇತರಾದ ಮಹಿಳೆಯರಿಗೆ ಈ ಸಂದರ್ಭದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು. ಮಕ್ಕಳಿಂದ ಆಕರ್ಷಕ ಮನರಂಜನಾ ಕಾರ್ಯಕ್ರಮಗಳು ಜರುಗಿದವು. ಕೇಶವಾಚಾರ್ ರವರಿಂದ ರಂಜನೆಯ ಮ್ಯಾಜಿಕ್ ಷೋ' ಏರ್ಪಡಿಸಲಾಗಿತ್ತು.

ರಾಜ್ಯ ಸಹಕಾರ್ಯದರ್ಶಿ ಗೌರಮ್ಮನವರು ಅಧ್ಯಕ್ಷತೆ ವಹಿಸಿದ್ದರು. ಪ್ರೇಮಾ ಸ್ವಾಗತಿಸಿ ಮಂಜುಳಾ ವಂದನೆಗಳನ್ನು ಸಲ್ಲಿಸಿದರು.

ಮಳವಳ್ಳಿ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಜರುಗಿದ ಸಮಾರಂಭಕ್ಕೆ ತಾಲ್ಲೂಕಿನ ಹತ್ತಾರು ಹಳ್ಳಿಗಳಿಂದ ಇನ್ನೂರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು. ತಾಲ್ಲೂಕು ಶಿಕ್ಷಕರ ಭವನದಲ್ಲಿ ಜರುಗಿದ ಮಹಿಳಾ ದಿನಾಚರಣೆಯನ್ನು ಜನವಾದಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ವಿಮಲಾ ಉದ್ಘಾಟಿಸಿದರು. ರಾಜ್ಯ ಸಹಕಾಯದರ್ಶಿ ಎನ್.ಪ್ರಭಾ, ಮಂಡ್ಯ ಜಿಲ್ಲಾ DYFI ಅಧ್ಯಕ್ಷರಾದ ಭರತ್‌ರಾಜ್ ಡಿವೈಎಸ್ಪಿ ಶಿವಣ್ಣನವರು, ಡಿಸಿಸಿ ಬ್ಯಾಂಕಿನ ಅಧಿಕಾರಿಗಳಾದ ಸುರೇಶ್ BJVS ನ ಕುಮಾರಿ.ಸಿ ಮುಂತಾದವರು ಅತಿಥಿಗಳಾಗಿ ಪಾಲ್ಗೊಂಡಿದ್ದರು. ತಾಲ್ಲೂಕು ಸಂಚಾಲಕಿ ದೇವಿ ಅಧ್ಯಕ್ಷತೆ ವಹಿಸಿದ್ದು ಸಮಾರಂಭಕ್ಕೆ ಶಾಂತಮ್ಮ ಸ್ವಾಗತ ಕೋರಿದರು. ಮಹಾದೇವಮ್ಮ ಕಾರ್ಯಕ್ರಮ ನಿರೂಪಣೆ ನೆರವೇರಿಸಿದರು. ಕೋಮುಸೌಹಾರ್ದ ಕಾಪಾಡುವ ಪ್ರತಿಜ್ಞಾ ವಚನವನ್ನು ಈ ಸಂದರ್ಭದಲ್ಲಿ ನೆರೆದಿದ್ದ ಮಹಿಳೆಯರೆಲ್ಲರೂ ಸ್ವೀಕರಿಸಿದರು ಸಭೆಯ ಕೊನೆಯಲ್ಲಿ ಉದ್ದನೆಯ "ಮಾನವ ಸರಪಳಿಯನ್ನು" ರಚಿಸುವ ಮೂಲಕ ಸಾರ್ವಜನಿಕರನ್ನಾಕರ್ಷಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಎಸ್.ಎಫ್.ಐ ನ ಸಂಗಾತಿಗಳು ಸಹಕಾರ ನೀಡಿದರು.

ಕೋಲಾರ: KGF ನ ಬೆಮೆಲ್ ಕಾಲೋನಿಯ ಮಹಿಳೆಯರು ಒಟ್ಟಾಗಿ ಸೇರಿ "ಬಯಲು ರಂಗಮಂದಿರದಲ್ಲಿ ಮಹಿಳಾ ದಿನವನ್ನಾಚರಿಸಿದರು. ಮಹಿಳೆಯರಿಗಾಗಿ ಅತ್ಯಾಕರ್ಷಕ ಸ್ಪರ್ದೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡಲಾಯಿತು.

ಸಮಾರಂಭಕ್ಕೆ ರಾಜ್ಯ ಸಹಕಾರ್ಯದರ್ಶಿ ಎನ್.ಪ್ರಭಾ ಭಾಗವಹಿಸಿದ್ದರು. ಜಿಲ್ಲಾ ಅಧ್ಯಕ್ಷರಾದ ಫ್ಲೋರಾ, ಸ್ಥಳೀಯ ಮುಖಂಡರಾದ, ಜಯಲಕ್ಷ್ಮಿ, ಶಾರದಾ, ಜಯಲಕ್ಷ್ಮಿ ಸಾಧನಾ ಮುಂತಾದವರು ಪಾಲ್ಗೊಂಡಿದ್ದರು. ○



ಬೆಂಗಳೂರಿನ ಟಿ.ದಾಸರಹಳ್ಳಿ ರವೀಂದ್ರ ನಗರದಲ್ಲಿ ನಡೆದ ಮಹಿಳಾದಿನಾಚರಣೆ -

ವಿಶ್ವಬ್ಯಾಂಕ್ ನಿಬಂಧನೆಗಳಿಗೆ ಅನುಗುಣವಾದ ರಾಜ್ಯ ಬಜೆಟ್

ಎಸ್.ಸೂರ್ಯನಾರಾಯಣ ರಾವ್

ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಯಾದ ಎಸ್.ಎಂ.ಕೃಷ್ಣರವರು ವಿಧಾನಸಭೆಯಲ್ಲಿ ಮಂಡಿಸಿದ ಬಜೆಟ್ಟು ಜನವಿರೋಧಿಯಾಗಿದ್ದು ವಿಶ್ವಬ್ಯಾಂಕ್ ಶರತ್ತುಗಳಿಗೆ ಅನುಗುಣವಾಗಿದೆ ಎಂದು ಹೈದರಾಬಾದಿನಲ್ಲಿ ಸಿಪಿಐ(ಎಂ) ನ 17ನೇ ಅಧಿವೇಶನದಲ್ಲಿ ಭಾಗವಹಿಸಲು ತೆರಳಿದ್ದ ರಾಜ್ಯ ಕಾರ್ಯದರ್ಶಿ ಕಾಂ. ಎಸ್.ಸೂರ್ಯನಾರಾಯಣ ರಾವ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಲವು ಯೋಜನೆಗಳಿಗೆ ವಿಶ್ವಬ್ಯಾಂಕಿನಿಂದ ಸಾವಿರಾರು ಕೋಟಿ ರೂ.ಗಳು ಸಾಲ ಪಡೆದುಕೊಂಡ ರಾಜ್ಯ ಸರ್ಕಾರ ಅವರ ಶರತ್ತುಗಳನ್ನು ಪಾಲಿಸುತ್ತಿದೆಯಲ್ಲದೇ ಕೇಂದ್ರ ಸರ್ಕಾರದ ಹಾದಿಯನ್ನೇ ತುಳಿದಿದೆ.

ಆಡಳಿತ ಸುಧಾರಣೆಯ ಹೆಸರಿನಲ್ಲಿ ಕೇಂದ್ರ ಸರ್ಕಾರವು ಜಾರಿಗೊಳಿಸಿದಂತೆ, ರಾಜ್ಯ ಸರ್ಕಾರಿ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ ಜಾರಿಗೊಳಿಸಲಾಗಿದ್ದು ಇದರಿಂದ 80,000 ಕ್ಕೂ ಹೆಚ್ಚು ಉದ್ಯೋಗ ಕಡಿತವಾಗುವುದು ಎಂದು ಅಂದಾಜು ಮಾಡಲಾಗಿದೆ. ಆದರೆ ಹೊಸ ನೇಮಕಾತಿಗಳನ್ನು (ಬ್ಯಾಕ್ ಲಾಗ್ ಹುದ್ದೆಬಿಟ್ಟು) ಮಾಡುವ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಿಲ್ಲ.



ಕಳೆದ ವರ್ಷಕ್ಕಿಂತ 1771 ಕೋಟಿ ರೂ. ಹೆಚ್ಚು ತೆರಿಗೆ ಆದಾಯವನ್ನು ರಾಜ್ಯ ಸರ್ಕಾರ ನಿರೀಕ್ಷಿಸಿದೆ. ಇವುಗಳಲ್ಲಿ ಬಹುಭಾಗ ಜನಸಾಮಾನ್ಯರು ಬಳಸುವ ಅಲ್ಯೂಮಿನಿಯಂ ವಸ್ತುಗಳು, ಸಿಮೆಂಟ್ ಮತ್ತು ಪೆಟ್ರೋಲ್, ಡೀಸೆಲಗಳ ಮೇಲೆ ಹೇರಲಾಗಿದೆ. ಲೇಖನಸಾಮಗ್ರಿಗಳು, ಸೋಪು, ಕಿರಾಣಿ ವಸ್ತುಗಳಮೇಲೆ ತೆರಿಗೆಯನ್ನು ಹೆಚ್ಚಿಸಲಾಗಿದೆ. ಇದರಿಂದ ಈಗಾಗಲೇ ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ತೊಂದರೆಯಾಗಲಿದೆ. ಈಗ ಲೇಖಾನುದಾನಕ್ಕೆ ಒಪ್ಪಿಗೆ ಪಡೆದುಕೊಳ್ಳುತ್ತಿರುವ ಸರಕಾರವು, ಬಜೆಟ್ ಅಂಗೀಕಾರಗೊಳ್ಳುವ ಮೊದಲು ಬಡ, ಮಧ್ಯಮವರ್ಗಕ್ಕೆ ಹಾನಿಕಾರಕವಾದ ಈ ಹೆಚ್ಚುವರಿ ತೆರಿಗೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.

ವಿದ್ಯುತ್ ವಲಯವನ್ನು 4 ಭಾಗಗಳಾಗಿ ಮಾಡಿ ವಿತರಣೆಯನ್ನು ಖಾಸಗೀಕರಣಗೊಳಿಸಲಾಗುವುದು ಎಂದು ಸ್ಪಷ್ಟಪಡಿಸಿರುವ ಮುಖ್ಯಮಂತ್ರಿಯವರು ವಿದ್ಯುತ್ ದರವನ್ನು ಹೆಚ್ಚಿಸುವ ಇಂಗಿತವನ್ನು ತೋರಿಸಿದ್ದಾರೆ. ಭಾಗ್ಯಜ್ಯೋತಿ, ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆಯ ಘೋಷಣೆ ಮಾಡುವುದರ ಮೂಲಕ ಬಡ ಜನರ ಮೇಲೆ, ರೈತ ಸಮುದಾಯದ ಮೇಲೆ ಹೆಚ್ಚಿನ ಹೊರೆ ಹೇರಲಾಗುವುದು. ವಿದ್ಯುತ್ ಖಾಸಗೀಕರಣವನ್ನು ಕೈಬಿಡಬೇಕು ಹಾಗೂ ಕೃಷಿ ಪಂಪ್‌ಸೆಟ್ ಹಾಗೂ ಭಾಗ್ಯಜ್ಯೋತಿ ಬಳಕೆದಾರರಿಗೆ ಮೀಟರ್ ಅಳವಡಿಕೆ ಸಲ್ಲದು. ರೈತರು ತೀವ್ರ ಬರಗಾಲ ಎದುರಿಸುತ್ತಿದ್ದು, ಬೆಳೆ ಹಾನಿ, ಫಸಲಿಗೆ ಬೆಲೆ ಸಿಗದೇ ಸಂಕಷ್ಟದಲ್ಲಿದ್ದಾರೆ. ಕಾರ್ಖಾನೆಗಳು ಮುಚ್ಚಿ ಉದ್ಯೋಗಹೀನತೆಯಿಂದ, ಅಭಿವೃದ್ಧಿ ಸ್ಥಗಿತತೆಗೊಂಡಿರುವಾಗ ಕೃಷ್ಣರ ಬಜೆಟ್ ಅಭಿವೃದ್ಧಿಯತ್ತ ಗಮನವನ್ನೇ ಹರಿಸಿಲ್ಲ. ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠಕ್ಕೆ 10 ಕೋಟಿ ನೀಡಿ ಬಿಟ್ಟರೆ ಸಾಕು ಪ್ರಾದೇಶಿಕ ಅಸಮಾನತೆ ನಿವಾರಿಸುತ್ತದೆ, ಯೋಚಿಸುವ ಅಗತ್ಯವಿಲ್ಲ ಎಂದು ಕೃಷ್ಣ ಭಾವಿಸಿದಂತಿದೆ.

ನೀರಾವರಿಗೆಂದು ಮೀಸಲಾದ ಹಣ, ಯಾವುದಕ್ಕೆ ಎಷ್ಟೆಂದು ವಿವರಣೆಯಿಲ್ಲ, ಕೃಷಿ ರಂಗದ ಬೆಳವಣಿಗೆಗೆ ಬೆಲ್ಲದ ಮಾತು, ಕೃಷಿ ಭೂಮಿ ಪರಿವರ್ತನೆ ನಿರ್ಬಂಧದ ರದ್ಧತಿ, ಇದರಿಂದಾಗಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಇದ್ದುಳ್ಳವರ ಬಾಯಿಗೆ ರಸಗವಳ, ಜನಸಾಮಾನ್ಯನಿಗೆ ಬರೆ ಈ ಬಜೆಟ್. ಈ ನಿರ್ಧಾರವನ್ನು ಕೃಷ್ಣ ಹಿಂತೆಗೆದುಕೊಳ್ಳದಿದ್ದಲ್ಲಿ ಜನರ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ ಎಂದು ಕಾಂ. ರಾವ್ ಎಚ್ಚರಿಸಿದ್ದಾರೆ.

ಬದಲಾದ ಆದ್ಯತೆಗಳು: ಸಾಲದ ದವಡೆಗೆ ಕರ್ನಾಟಕ

ಕೆಲವೊಂದು ಮಾಧ್ಯಮಗಳು, ವ್ಯಕ್ತಿಗಳು ಹಾಗೂ ಕಾಂಗ್ರೆಸ್ ಪಕ್ಷ ಕೃಷ್ಣ ಸರ್ಕಾರವು ಗ್ರಾಮೀಣ ಪ್ರದೇಶಕ್ಕೆ ಆದ್ಯತೆ ನೀಡುತ್ತಿದೆ ಎಂದು ಪ್ರಚಾರ ನಡೆಸುತ್ತಿವೆ. ಆದರೆ ಇದು ಸುಳ್ಳು ಎಂದು ಅಂಕಿಸಂಖ್ಯೆಗಳು ಸ್ಪಷ್ಟ ಪಡಿಸುತ್ತಿವೆ. ಕೃಷ್ಣ ಸರ್ಕಾರದ ಪ್ರಥಮ ಬಜೆಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿಗೆ ಶೇ 3.94 (286.61 ಕೋಟಿ ರೂ.) ಮೀಸಲಿಟ್ಟಿದ್ದಾರೆ, ಈ ಬಾರಿಯ ಬಜೆಟ್ಟಿನಲ್ಲಿ ಶೇ 2.74 (236.28 ಕೋಟಿ ರೂ.) ಮಾತ್ರ ಮೀಸಲಿಟ್ಟಿದ್ದಾರೆ. ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ ಮೊದಲ ಬಜೆಟ್ಟಿನಲ್ಲಿ 2879.14 ಕೋಟಿ ರೂ. ತೆಗೆದಿರಿಸಿದ್ದರೆ (ಶೇ 39.58) ಈ ಬಾರಿ 2790.78 ಕೋಟಿ ರೂ.(ಶೇ 32.41) ಮಾತ್ರ ಮೀಸಲಿಡಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಪ್ರಥಮ ಬಜೆಟ್ಟಿನಲ್ಲಿ 225.58 ಕೋಟಿ ರೂ. (3.10 ಶೇ) ತೆಗೆದಿಟ್ಟಿದ್ದಾರೆ. ಈ ಬಾರಿ ಅದು 192.46 ಕೋಟಿ ರೂ.(2.24 ಶೇ) ಗೆ ಇಳಿದಿದೆ. ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿಗಳಿಗೆ ಶೇ 5.83 ರಿಂದ ಶೇ 5.39 ಕ್ಕೆ ಕುಸಿದಿದೆ.

ಸಾಲದ ಹೊರೆ: ಸಾಲದ ಬಲೆಯಲ್ಲಿ ಕೃಷ್ಣ ಸರ್ಕಾರ ಬೀಳಿಸುತ್ತಿದೆ ಎಂದು ಸಿಪಿಐ(ಎಂ) ಎಚ್ಚರಿಸುತ್ತಾ ಬಂದಿತ್ತು. ಈ ಬಾರಿ ಸಾಲ ತೀರಿಸಲು ಸಾಧಾರಣ 3840 ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದೆ. ಇದು ಕೃಷ್ಣ ಸರ್ಕಾರದ ಪ್ರಥಮ ಬಜೆಟ್ಟಿಗಿಂತ ಸಾಧಾರಣ 1000 ಕೋಟಿ ಜಾಸ್ತಿ! ಪ್ರಥಮ ಬಜೆಟ್ಟಿನಲ್ಲಿ ಅದು ಸಾಧಾರಣಾ 2800 ಕೋಟಿ ಆಗಿತ್ತು.

"ರೇಷನ್‌ಕಾರ್ಡ್ ಕೊಡೋವರೆಗೂ ಬಿಡೋದಿಲ್ಲ"

ಮಳವಳ್ಳಿಯಲ್ಲಿ ದಿಟ್ಟ ಹೋರಾಟ

ನಂಬರ್‌ಒನ್ ಮುಖ್ಯಮಂತ್ರಿಯೆಂದು ಮಾಧ್ಯಮಗಳ ಮುಖಾಂತರ ಘೋಷಿಸಿಕೊಂಡ ಸ್ವಂತ ಮುಖ್ಯಮಂತ್ರಿಯವರ ಮಂಡ್ಯ ಜಿಲ್ಲೆಯಲ್ಲಿನ ಪಡಿತರ ವ್ಯವಸ್ಥೆ ಅವ್ಯವಸ್ಥೆಗೊಂಡಿದೆ. ಗೊಂದಲದ ಗೂಡಾಗಿದೆ. ಅರ್ಹ ಬಡಜನರಿಗೆ ಕಾರ್ಡ್‌ಗಳು ಸಿಗದೆ ರಾಜಕೀಯ ಬಾಲಂಗೋಚಿಗಳ ಕೈ ಸೇರುತ್ತಿವೆ. ಬಡವರು ರೇಷನ್ ಕಾರ್ಡುಗಳಿಗಾಗಿ ಪರಿತಪಿಸುತ್ತಿದ್ದಾರೆ. ಅಧಿಕಾರಿಗಳು ಲಂಚ ನುಂಗುತ್ತಾ ತೇಲಾಡುತ್ತಿದ್ದಾರೆ. ಇನ್ನು ಕೆಲವರು ನಮಗೆ ಅದರ ಜವಾಬ್ದಾರಿ ಇಲ್ಲವೆಂದು ನುಣುಚಿಕೊಳ್ಳುತ್ತಿದ್ದಾರೆ. ಇದನ್ನರಿತ ದುಡಿವ ಜನರ ಸಂಗಾತಿಯಾಗಿರುವ ಜನವಾದಿ ಮಹಿಳಾ ಸಂಘಟನೆ (ಜೆಎಂಎಸ್) ಹಾಗೂ ದೇಶಪ್ರೇಮಿ ಯುವಜನ ಸಂಘಟನೆ(ಡಿವೈಎಫ್‌ಐ) ಜಂಟಿಯಾಗಿ ಮಂಡ್ಯ ಜಿಲ್ಲೆ ಮಳವಳ್ಳಿ ನಗರದಲ್ಲಿ ರೇಷನ್ ಕಾರ್ಡ್‌ಗಳಿಗಾಗಿ ನಡೆಸಿದ ಪ್ರತಿಭಟನಾ ಮೆರವಣಿಗೆಯ ವರದಿ ಇಲ್ಲಿದೆ.

ವಂಚನೆಯ ಆಟ

ದೂರದ ಬೆಟ್ಟ ನುಣ್ಣಗಿದೆ ಎಂಬಂತೆ ಮಂಡ್ಯ ಜಿಲ್ಲೆ ಎಂದರೆ ನೋಡುಗರ ಕಣ್ಣಿಗೆ ಶ್ರೀಮಂತ ಜಿಲ್ಲೆ ಎಂದು ಕಾಣುತ್ತದೆ. ಆದರೆ ಮಳವಳ್ಳಿ, ನಾಗಮಂಗಲ ಮತ್ತು ಕೆ.ಆರ್.ಪೇಟೆ ತಾಲೂಕುಗಳಲ್ಲಿ ಬಹಳಷ್ಟು ಜನ ಮಳೆ ನಂಬಿ ಜೀವನ ನಡೆಸುತ್ತಿದ್ದಾರೆ. ಮುಖ್ಯವಾಗಿ ಮಳವಳ್ಳಿ ತಾಲೂಕಿನ 4 ಹೋಬಳಿಗಳಲ್ಲಿ ಮಳೆ ಮತ್ತು ಪಂಪ್‌ಸೆಟ್‌ಗೆ ಆಧಾರಿತ ಪ್ರದೇಶವಾಗಿ ಜನರು ಜೀವನ ನಡೆಸುತ್ತಿದ್ದಾರೆ. ಅದರಲ್ಲೂ ಹೆಚ್ಚಿನ ಜನರು ಪರಊರುಗಳಿಗೆ ಕೂಲಿಗೆ ವಲಸೆ ಹೋಗುವುದು ಕೂಡ ಇತ್ತೀಚಿಗೆ ಹೆಚ್ಚಾಗುತ್ತಿದೆ. ಇಂತಹ ಸಂಕಷ್ಟ ಜೀವನ ನಡೆಸುತ್ತಿರುವ ಬಡಜನರಿಗೆ ಸಮರ್ಪಕವಾಗಿ ಪಡಿತರ ಚೀಟಿ ವಿತರಿಸದೆ ಕೃಷ್ಣಾ ಸರ್ಕಾರ ಕಣ್ಣಾ ಮುಚ್ಚಾಲೆ ಆಟ ಆಡುತ್ತಿದೆ. ಬಡಜನರು ಕಾರ್ಡುಗಳನ್ನು ಕೇಳಲು ಹೋದರೆ ಅಂಗನವಾಡಿ ನೌಕರರು ಮಾಡಿದ ಸರ್ವೆ ಸರಿಯಿಲ್ಲ, ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಿ ವಿತರಿಸುತ್ತೇವೆಂದು ಹೇಳಿದ್ದಾರೆ. ಆದರೆ ಗ್ರಾಮಸಭೆಗಳನ್ನು ಮಾಡಿ ಅದು ಕೂಡಾ ಸರಿಯಿಲ್ಲವಾಗಿದೆ, ಆದ್ದರಿಂದ ಗ್ರಾಮ ಲೆಕ್ಕಿಗರ ಹತ್ತಿರ ಮಾಡಿಸುತ್ತೇವೆಂದು ಮುಂದೂಡಿದರು. ಗ್ರಾಮ ಲೆಕ್ಕಿಗರು ಅದು ನಮ್ಮ ಕೆಲಸವಲ್ಲ, ನಮ್ಮದು ಕಂದಾಯ ಇಲಾಖೆ, ಅದು ಆಹಾರ ಸರಬರಾಜು ಇಲಾಖೆ ಎಂದು ಸರ್ಕಾರಿ ನೌಕರರು ಬೇಜಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ಹೀಗೆ ವರ್ಷಗಟ್ಟಲೇ ವಿಳಂಬ ಮಾಡುತ್ತಿರುವುದನ್ನು ಗಮನಿಸಿದರೆ ನಿಜ ಉದ್ದೇಶವೇನೆಂದು ಕಂಡು ಬರುತ್ತಿದೆ.

ಜನರ ತತ್ತರ

ಸರ್ಕಾರವು ಪ್ರಾಮಾಣಿಕ ಕಾಳಜಿ ವಹಿಸಿ ಬಡಜನರಿಗೆ ಸಿಗಬೇಕಾದ ಸೌಲಭ್ಯ ಒದಗಿಸದೆ ಬಡಜನವಿರೋಧಿ ನಿಲುವು ತಾಳುತ್ತಿದೆ. ಶ್ರೀಮಂತರ ತಾಳಕ್ಕೆ ಹೆಜ್ಜೆ ಹಾಕುತ್ತಿದೆ. ಹೆಸರಿಗೆ ಮಾತ್ರ ಅಂತ್ಯೋದಯ ಅನ್ನ ಯೋಜನೆ ಅಡಿಯಲ್ಲಿ ಕಡು ಬಡವರಿಗೆ ಶೇ 15 ರಂತೆ ಹಿಂದಿನ ಕಾರ್ಡುಗಳ ಆಧಾರದ ಮೇಲೆ ರೂ. 3.20 ಕ್ಕೆ ಅಕ್ಕಿ, ರೂ. 2.50 ಕ್ಕೆ ಗೋಧಿ ಕೊಡುತ್ತೇವೆಂದು ಹೇಳಿ ಆ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡಲು ಆದೇಶಿಸಿದೆ. ಈ ಆಯ್ಕೆ ವಿಪರೀತ ಭ್ರಷ್ಟತೆ ಯಿಂದ ತುಂಬಿ ತುಳುಕಿದೆ. ನ್ಯಾಯ ಬೆಲೆ ಅಂಗಡಿಯವರು ಹಾಗೂ ಸೊಸೈಟಿಯವರು ರೇಷನ್‌ನನ್ನು ಹಣಕ್ಕೆ ಮಾರಿಕೊಳ್ಳುತ್ತಿದ್ದಾರೆ. ಇದಕ್ಕೆಲ್ಲಾ ತಹಶೀಲ್ದಾರರ ಗಮನಕ್ಕೆ ತಂದರೂ ಹುಸಿ ಭರವಸೆಗಳನ್ನು ಅಧಿಕಾರಿಗಳು ನೀಡಿ ನುಣುಚಿಕೊಂಡರು. ಬಡಜನರು ತತ್ತರಿಸಿಹೋದರು.

ಹೋರಾಟದತ್ತ...

ಇಂಥ ಅವ್ಯವಸ್ಥೆಗೆ ಹೋರಾಟ ಒಂದೇ ನ್ಯಾಯ ದೊರಕಿಸಿಕೊಡುತ್ತದೆಂದು ನಂಬಿದ್ದ ಡಿವೈಎಫ್‌ಐ ಮತ್ತು ಜೆಎಂಎಸ್ ಸಂಘಟನೆಗಳು ಊರು-ಕೇರಿ ತಿರುಗಿ ಜನರನ್ನು ಸಂಘಟಿಸತೊಡಗಿದ್ದರು. ಮೊದಲೇ ನೋವುಂಡ ಜನ ತಾಮುಂದು-ನಾಮುಂದು ಎಂದು ಒಟ್ಟೊಟ್ಟಿಗೆ ಸೇರತೊಡಗಿದರು. ಸಂಘಟಕರು ಆಟೋ ಪ್ರಚಾರ ನಡೆಸಿ ಸರ್ಕಾರ ಗೋಸುಂಬೆತನವನ್ನು ಹೊರಗೆಡವಿದರು. ಫೆ. 8 ರಂದು ಮಳವಳ್ಳಿಯಲ್ಲಿ ಸಾವಿರಾರು ಜನ ಸೇರಿ ಹೋರಾಟದ ಕಣಕ್ಕೆ ಮುನ್ನುಗ್ಗಿದರು.

ಹೊರಟಿತೋ ಹೊರಟಿತು ಮೆರವಣಿಗೆ

ಅಂಗಡಿ ಮುಂಗಟ್ಟುಗಳ ರಸ್ತೆ ಬದಿಯ ಮುಂದೆ ನಿಂತ ಜನ ಮೆರವಣಿಗೆ ಹೊರಟ ಹೋರಾಟದ ಸಾಲಿಗೆ ಸೇರತೊಡಗಿದರು. ಆಳುವ ಸರ್ಕಾರದ ಪುಡಾರಿ ರಾಜಕೀಯ ವ್ಯಕ್ತಿಗಳಿಗೆ ಹೊಟ್ಟೆ ನೋವು ಕಾಣಿಸತೊಡಗಿತು. ಸಾವಿರಕ್ಕಿಂತ ಹೆಚ್ಚಿದ್ದ



ಹೋರಾಟಗಾರರು ಕೇಂದ್ರ-ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿದರು. ದುಡಿವ ಜನರ ಹಕ್ಕುಗಳಿಗೆ ಧಕ್ಕೆ ತರುವ ಸರ್ಕಾರಗಳನ್ನು ಬಿಡುವುದಿಲ್ಲ, ನ್ಯಾಯ ಗೆಲ್ಲುವವರೆಗೂ ಹೋರಾಟ, ಹೈಟೆಕ್ ಮುಖ್ಯಮಂತ್ರಿಗೆ ಧಿಕ್ಕಾರ, ಬಂಡವಾಳಶಾಹಿ ಪರ ಮುಖ್ಯಮಂತ್ರಿಗೆ ಧಿಕ್ಕಾರ, ನಾವು ದುಡಿಯದೇ ಹೋದರೆ ನಿಮ್ಮ ಕಂಪ್ಯೂಟರ್‌ಗಳು ರೇಷನ್ ಬೆಳೆಯಲಾರವು ಕೃಷ್ಣ, ನಾವಿದ್ದರೇ ನೀವು ಇದನ್ನು ಅರಿಯೋ ಮುಖ್ಯಮಂತ್ರಿ ಕೃಷ್ಣ ಎಂಬ ಅಂತರಾಳದ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಮೆರವಣಿಗೆಯನ್ನು ನೋಡುತ್ತಿದ್ದ ಜನರಿಗೆ ನಾವು ಸೇರಬೇಕೆಂಬ ಬಯಕೆ ಹೊರಬರುತ್ತಿತ್ತು.

ಅತಿಯಾದ ಪೋಲೀಸರ ವರ್ತನೆ

ಹೀಗೆ ಸಾವಿರಾರು ಘೋಷಣೆಗಳ ಮೂಲಕ ತಹಶೀಲ್ದಾರರ ಕಛೇರಿ ಬಳಿ ಪ್ರತಿಭಟನೆ ಸಭೆ ಆರಂಭವಾಯ್ತು. ನೆರೆದಿದ್ದ ಜನರೆಲ್ಲಾ ಸರ್ಕಾರದ ವಿರುದ್ಧ ಕಿಡಿಕಾರುತ್ತಿದ್ದರು. ಪೋಲೀಸರ ಮಧ್ಯ ಪ್ರವೇಶ ಅತಿಯಾಗಿತ್ತು. ಕಾರ್ಯಕರ್ತರು ಪೋಲೀಸರ ದಬ್ಬಾಳಿಕೆಗೆ ದಿಕ್ಕಾರ ಕೂಗತೊಡಗಿದರು. ಪೋಲೀಸರು ತೆಪ್ಪಗಾದರು. ಸಭೆಯನ್ನು ಉದ್ದೇಶಿಸಿ ಜೆಎಂಎಸ್ ರಾಜ್ಯ ಸಹ ಕಾರ್ಯದರ್ಶಿ ಎನ್.ಪ್ರಭಾ, ಡಿವೈಎಫ್‌ಐ ಮುಖಂಡ ಭರತರಾಜ್, ಎಸ್‌ಎಫ್‌ಐನ ಯೋಗೇಶ್, ಸಿಪಿಐ(ಎಂ) ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಪುಟ್ಟಮಾದು ಮಾತನಾಡಿ ಸರ್ಕಾರದ ಸೋಗಲಾಡಿತನವನ್ನು ಬಯಲಿಗೆಳೆದರು. ನಂತರ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು. ತಹಶೀಲ್ದಾರರುಆದಷ್ಟು ಬೇಗ ರೇಷನ್ ಕಾರ್ಡುಗಳನ್ನು ವಿತರಿಸುತ್ತೇವೆಂದು ಭರವಸೆ ನೀಡಿದರು. ಪ್ರತಿಭಟನೆಯ ನೇತೃತ್ವವನ್ನು ಡಿವೈಎಫ್‌ಐ ಮತ್ತು ಜೆಎಂಎಸ್ ಕಾರ್ಯಕರ್ತರು ವಹಿಸಿದ್ದರು. ಈ ಹೋರಾಟ ದುಡಿಯುವ ಜನರ ಹಕ್ಕುಗಳಿಗಾಗಿ ನಡೆದ ಹೋರಾಟದ ಹೆಗ್ಗುರುತಾಗಿ ಉಳಿಯಿತು.

ಕೋಮುವಾದ ಭ್ರಷ್ಟಾಚಾರಕ್ಕಿಂತಲೂ ಅಪಾಯಕಾರಿ

ಖ್ಯಾತ ನ್ಯಾಯವಾದಿ ಎ.ಕೆ.ಸುಬ್ಬಯ್ಯ

ಹಾಸನದಲ್ಲಿ ದಕ್ಷಿಣ ಜಿಲ್ಲೆಗಳ ಯುವಜನರ ಶಿಬಿರದ ಸಂದರ್ಭದಲ್ಲಿ ವಿಚಾರಸಂಕಿರಣ ನಡೆಯಿತು. ಭಯೋತ್ಪಾದನೆ ಕೋಮುವಾದದ ಅಪಾಯಗಳತ್ತ ಗಮನಸೆಳೆದ ಸಂಕಿರಣವು ಯುವಜನತೆಯನ್ನು ಎಚ್ಚರಿಸುವಲ್ಲಿ ಒಂದು ಯಶಸ್ವಿ ಹೆಜ್ಜೆಯಾಯಿತು. ಕೊಂಚ ವಿಳಂಬವಾದರೂ ಪ್ರಸಕ್ತತೆಯ ವರದಿಯಿದು.

ಭಯೋತ್ಪಾದನೆ ಮತ್ತು ಯುವಜನ ವಿಚಾರಸಂಕಿರಣ

ಕೆ.ಮಹಾಂತೇಶ್

ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ಅವಶ್ಯಕತೆಗಿಂತ ಹೆಚ್ಚಾಗಿ ಯುದ್ಧದ ಬಗ್ಗೆ ಮಾತನಾಡುತ್ತಾ ಭಾರತ ಪಾಕಿಸ್ತಾನದ ನಡುವೆ ಯುದ್ಧೋನ್ಮಾದ ಪರಿಸ್ಥಿತಿ ನಿರ್ಮಾಣ ಮಾಡುತ್ತಿದೆ ಎಂದು ಮಾಜಿ ಶಾಸಕರು, ಖ್ಯಾತ ವಕೀಲರು ಆದ ಎ.ಕೆ.ಸುಬ್ಬಯ್ಯ ಆರೋಪಿಸಿದರು.

ಡಿವೈಎಫ್ಐ ಹಾಸನದಲ್ಲಿ ಏರ್ಪಡಿಸಿದ್ದ 'ಭಯೋತ್ಪಾದನೆ, ಯುದ್ಧ, ನಿರುದ್ಯೋಗ ಹಾಗೂ ಯುವಜನತೆ' ಕುರಿತ ರಾಜ್ಯ ಮಟ್ಟದ ವಿಚಾರಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇಂದು ದೇಶದ ಎಲ್ಲಾ ಸಮಸ್ಯೆಗಳಿಗಿಂತ ಹೆಚ್ಚಾಗಿ ಭಯೋತ್ಪಾದನೆ ಕುರಿತು ಚರ್ಚೆಗಳು ನಡೆಯುವಂತೆ ಸರ್ಕಾರ ಪ್ರೇರೇಪಿಸಿದೆ. ದಿನಾ ಬೆಳಗಾದರೆ ಯುದ್ಧೋನ್ಮಾದದ ಹೇಳಿಕೆಗಳು ಹೊರಬೀಳುತ್ತವೆ.

ಮಾಜಿ ಸಮಾಜವಾದಿಯಾದ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್‌ರಂತೂ ಆರ್.ಎಸ್.ಎಸ್.ನ ಸರಸಂಘಚಾಲಕರಂತೆ ವರ್ತಿಸುತ್ತಿದ್ದಾರೆ ಎಂದು ಟೀಕಿಸಿದ ಅವರು ಇದರ ಉದ್ದೇಶ ಸ್ಪಷ್ಟ. ಒಂದು ನಿರ್ದಿಷ್ಟ ಕೋಮಿನ ವಿರುದ್ಧ ಜನರನ್ನು ಎತ್ತಿ ಕಟ್ಟುವ ಹುನ್ನಾರ ನಡೆದಿದೆ ಎಂದರು.

ಕೋಮುವಾದದ ಕುರಿತು ವಿಶ್ಲೇಷಿಸಿದ ಅವರು ಭ್ರಷ್ಟಾಚಾರಕ್ಕಿಂತ ಅಪಾಯಕಾರಿಯಾದ ಕೋಮುವಾದ ತೀವ್ರವಾಗಿ ಬೆಳೆಯುತ್ತಿದೆ. ಮಾನವ ವಿರೋಧಿಯಾದ ಈ ಕೋಮುವಾದವನ್ನು ಎಲ್ಲಾ ಜಾತ್ಯಾತೀತ ಶಕ್ತಿಗಳು ಒಗ್ಗಟ್ಟಾಗಿ ಎದುರಿಸಲು ಕರೆ ನೀಡಿದರು.

ಈ ದೇಶದಲ್ಲಿ ಹಿಂದು ಧರ್ಮ ಎಂಬುದು ಇಲ್ಲವೇ ಇಲ್ಲ. ಇರುವುದು ಬ್ರಾಹ್ಮಣ ಧರ್ಮ ಮಾತ್ರ. ನಶಿಸುತ್ತಿರುವ ಬ್ರಾಹ್ಮಣ ಧರ್ಮವನ್ನು ಮತ್ತೆ ಸ್ಥಾಪಿಸಲು ಪುರೋಹಿತಶಾಹಿಗಳಿಗೆ ಶೂದ್ರರ ಬೆಂಬಲ ಬೇಕಾಗಿದೆ. ಆ ಕಾರಣಕ್ಕಾಗಿಯೇ ನಾವೆಲ್ಲ 'ಹಿಂದು-ಒಂದು' ಎಂದು ಬೊಬ್ಬೆ ಹಾಕುತ್ತಿದ್ದಾರೆ. ಆ ಮೂಲಕ ಮುಸ್ಲಿಂ ವಿರೋಧಿ ಭಾವನೆ ಹುಟ್ಟುಹಾಕುತ್ತಿದ್ದಾರೆ' ಎಂದರು.

ದೇಶದ್ರೋಹಿಗಳು ಯಾರು?

ಈ ಜಗತ್ತಿನಲ್ಲಿ ದೇವರಿಲ್ಲ ಎಂಬುದು ಎಲ್ಲರಿಗಿಂತ ಖಚಿತವಾಗಿ ಪುರೋಹಿತಶಾಹಿಗಳಿಗೆ ಗೊತ್ತಿದೆ ಎಂದು ವ್ಯಂಗ್ಯ ಮಾಡಿದ ಸುಬ್ಬಯ್ಯನವರು, ಆದ್ದರಿಂದಲೇ ಅವರು ದೇವರು, ಧರ್ಮದ ಹೆಸರಿನಲ್ಲಿ ವಿವಿಧ ಜನಾಂಗ ಮತ್ತು ಸಂಸ್ಕೃತಿಗಳ ತವರಾದ ಭಾರತದಲ್ಲಿ ಕೋಮುಗಲಭೆಗಳನ್ನು ಎಬ್ಬಿಸಿ ರಣರಂಗ ಮಾಡಲು ಹೊರಟಿದ್ದಾರೆ. ಬಿಜೆಪಿಯ ಮಾತೃ ಸಂಸ್ಥೆಯಾದ ಆರ್.ಎಸ್.ಎಸ್. ಈ ದೇಶದ ಸಂವಿಧಾನವನ್ನು ಒಪ್ಪುವುದಿಲ್ಲ. ಅಮಾನವೀಯವಾದ 'ಮನುಧರ್ಮ ಶಾಸ್ತ್ರವೇ' ಅದರ ಸಂವಿಧಾನ. ಅವರ ಶಾಖೆಗಳಲ್ಲಿ ರಾಷ್ಟ್ರಧ್ವಜ ಹಾರಿಸುವುದಿಲ್ಲ. ರಾಷ್ಟ್ರಗೀತೆ ಹಾಡುವುದಿಲ್ಲ. ರಾಷ್ಟ್ರಪಿತ ಮಹಾತ್ಮಗಾಂಧಿಯನ್ನು ಹತ್ಯೆ ಮಾಡಿದ ದಿನ ಎಲ್ಲಾ ಆರ್.ಎಸ್.ಎಸ್. ಶಾಖೆಗಳಲ್ಲಿ ಸಿಹಿ ಹಂಚಲಾಗಿತ್ತು ಎಂಬುದನ್ನು ಹಿಂದೆ ತಾವಿದ್ದ ಆರ್.ಎಸ್.ಎಸ್. ಶಾಖೆಯಲ್ಲಿ ತಿಳಿಸಲಾಗಿತ್ತು ಮತ್ತು ಹಲವರು ಸಂತೋಷದಿಂದ ಹೇಳಿದ್ದನ್ನು ಪ್ರಸ್ತಾಪಿಸಿದರು. ಹೀಗಿರುವಾಗ ದೇಶದ್ರೋಹಿಗಳು ಯಾರು ಎಂಬುದನ್ನು ಜನರೇ ಈಗ ನಿರ್ಧರಿಸುವ ಕಾಲ ಬಂದಿದೆ ಎಂದರು.

"ಇವರು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದೇಶದಲ್ಲಿ ಐಎಸ್ಐ ಚಟುವಟಿಕೆಗಳು ತೀವ್ರವಾಗಿ ಹೆಚ್ಚಿವೆ. ಕಾಶ್ಮೀರದಲ್ಲಿ ಭಯೋತ್ಪಾದಕರ ಕೃತ್ಯಗಳು ತೀವ್ರಗೊಂಡಿವೆ. ಭಯೋತ್ಪಾದನೆ ಹೆಚ್ಚುವಲ್ಲಿ ಆಂತರಿಕ ಸಮಸ್ಯೆಗಳು, ನೀತಿಗಳು ಸಹಾಯಕವಾಗುತ್ತವೆ. ಆದರೆ ಇವುಗಳ ನಿಯಂತ್ರಣ ಮಾಡಲು, ಸಮಸ್ಯೆ ಪರಿಹರಿಸುವುದು ಬಿಜೆಪಿಗೆ ಬೇಕಿಲ್ಲ. ಇದರಿಂದ ರಾಷ್ಟ್ರೀಯ ಸಮಗ್ರತೆಗೆ ಅತ್ಯಂತ ಅಪಾಯವಿದೆ" ಎಂದು ಹೇಳಿದರು.

ಅಂತಿಮ ಹೋರಾಟ ಕೋಮುವಾದಿಗಳು ಮತ್ತು ಕಮ್ಯುನಿಸಂ ನಡುವೆ

ಈ ದೇಶದಲ್ಲಿ ಕೋಮುವಾದವನ್ನು ಎದುರಿಸುವಲ್ಲಿ ಕಮ್ಯುನಿಸಂ ಮಾತ್ರವೇ ಆಶಾಕಿರಣವಾಗಿದೆ. ಈ ದೇಶದಲ್ಲಿ ಅಂತಿಮ ಸಂಘರ್ಷ ಕೋಮುವಾದಿಗಳು ಮತ್ತು ಕಮ್ಯುನಿಸಂ ನಡುವೆ ನಡೆಯುತ್ತದೆ. ಈ ಸಂಘರ್ಷದಲ್ಲಿ ಯಾವುದು ಗೆಲುವು ಸಾಧಿಸುತ್ತದೆ



ಸಂಸದ ಕೃಷ್ಣದಾಸರಿಂದ ಉಪನ್ಯಾಸ

ಎಂಬುದರ ಮೇಲೆ ಭಾರತದ ಭವಿಷ್ಯ ನಿಂತಿದೆ ಎಂದು ಅಭಿಪ್ರಾಯ ಪಟ್ಟ ಅವರು ಭಯೋತ್ಪಾದನೆಯ ಮೂಲವಾದ ಕೋಮುವಾದದ ವಿರುದ್ಧ ಹೋರಾಡಲು ತಾವು ಸದಾ ಸಿದ್ಧವಿದ್ದು, ಅದರ ವಿರುದ್ಧ ಹೋರಾಡುವವರಿಗೆ ತಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದರು.

ಅಮೆರಿಕಾದ ಪಿತೂರಿ

'ಭಯೋತ್ಪಾದನೆ ಮತ್ತು ಧರ್ಮ' ಕುರಿತು ವಿಷಯ ಮಂಡಿಸುತ್ತಾ ಮಾತನಾಡಿದ ಬರಹಗಾರರಾದ ಫಕೀರ್ ಮಹಮ್ಮದ್ ಕಟ್ಪಾಡಿ ಅವರು, 'ಭಯೋತ್ಪಾದನೆ ಮತ್ತು ಯುದ್ಧ' ಒಂದೇ ನಾಣ್ಯದ ಎರಡು ಮುಖಗಳು. ಭಯೋತ್ಪಾದನೆ ವಿರುದ್ಧದ ಚರ್ಚೆ ಹಾಗೂ ಕಾರ್ಯಚರಣೆ ಆರಂಭವಾದುದು ಅಮೆರಿಕದಲ್ಲಿ ಡಬ್ಲ್ಯುಟಿಸಿ ಕಟ್ಟಡಗಳು ಸೆಪ್ಟೆಂಬರ್ 11 ರಂದು ನಾಶವಾದ ನಂತರ. ಇದಕ್ಕೆ ಮೊದಲು ಎಲ್‌ಟಿಟಿಇ ಭಾರತದಲ್ಲಿ ನಡೆಸಿದ ಭಯೋತ್ಪಾದನೆ. (ರಾಜೀವ್ ಗಾಂಧಿ ಹತ್ಯೆ) ಸೇರಿದಂತೆ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ನಡೆದ ಭಯೋತ್ಪಾದನಾ ಕೃತ್ಯಗಳು ಚರ್ಚೆಗೆ ಬರಲೇ ಇಲ್ಲ.

ಅಮೆರಿಕಾದ ಮೂಗಿಗೆ ನೇರವಾಗಿ ಪೆಟ್ಟು ಬಿದ್ದಿದ್ದರಿಂದ ಮಾತ್ರವೇ ಈಗ ಅದರ ವಿರುದ್ಧ ಅಮೆರಿಕ ಜಾಗತಿಕ ಸಮರ ಆರಂಭಿಸಿದೆ.

ಜಗತ್ತಿನಲ್ಲಿ ಮುಸ್ಲಿಂ ಜನಸಂಖ್ಯೆ ಶೇ 25 ರಷ್ಟಿದೆ. ಸೆ. 11 ನಂತರ ಎಲ್ಲಾ ಮುಸ್ಲಿಂರ ಬಗ್ಗೆಯೂ ಸಂಶಯ ಹುಟ್ಟು ಹಾಕಲಾಗಿದೆ. ವ್ಯವಸ್ಥೆಯ ವಿರುದ್ಧ ಆಕ್ರೋಶಗೊಂಡ ಜನರು ವ್ಯವಸ್ಥೆಯ ಗಮನ ಸೆಳೆಯಲು ಭಯೋತ್ಪಾದನೆಯನ್ನು ಆರಂಭಿಸುತ್ತಾರೆ ಎಂಬ ಕಾರಣವೊಂದನ್ನು ಗುರುತಿಸಿದ ಅವರು ವಿಶ್ವದ ಮುಸ್ಲಿಂ ರಾಷ್ಟ್ರಗಳು ಧರ್ಮದ ಚೌಕಟ್ಟಿನಿಂದ ಹೊರಬಂದು ಆಧುನಿಕತೆ ಮತ್ತು ಬದಲಾವಣೆಗೆ ಹೊಂದಿಕೊಂಡು ಪ್ರಜಾಸತ್ತಾತ್ಮಕ ವ್ಯವಸ್ಥೆ ರೂಢಿಸಿಕೊಳ್ಳಲಿಲ್ಲ. ಶಿಕ್ಷಣಕ್ಕೂ ಆದ್ಯತೆ ನೀಡಲಿಲ್ಲ. ಇಂತಹ ಪರಿಸ್ಥಿತಿಯನ್ನು ಬಳಸಿಕೊಂಡು ಪಾಶ್ಚಿಮಾತ್ಯ ರಾಷ್ಟ್ರಗಳು ಇಸ್ಲಾಂ ದೇಶಗಳನ್ನು ತಮ್ಮ ಕೈಗೊಂಬೆಗಳಾಗಿ ಬಳಸಿಕೊಂಡವು. ಇದಕ್ಕೆ ಮುಖ್ಯವಾಗಿ ಅಮೆರಿಕದ ಪಿತೂರಿ ಕಾರಣವೆಂದು ಅವರು ಹೇಳಿದರು.

'ಭಯೋತ್ಪಾದನೆ, ನಿರುದ್ಯೋಗ ಮತ್ತು ಯುವಜನತೆ' ಕುರಿತು ಮಾತನಾಡಿದ 'ಐಕ್ಯರಂಗ' ಪತ್ರಿಕೆ ಸಂಪಾದಕರಾದ ಎಸ್.ವೈ.ಗುರುಶಾಂತ್ ಇದುವರೆಗೂ ನಡೆದಿರುವ ಎಲ್ಲಾ ಯುದ್ಧಗಳ ಹಿಂದಿರುವ ಅಂಶಗಳೆಂದರೆ ಸಾಮ್ರಾಜ್ಯಶಾಹಿಗಳು ಮಾರುಕಟ್ಟೆ ವಿಸ್ತರಿಸುವ ಹುನ್ನಾರಗಳು. ಇತ್ತೀಚಿಗೆ ಅಫಘಾನಿಸ್ತಾನದ ಮೇಲೆ ನಡೆದ ಯುದ್ಧ ಇದಕ್ಕೆ ಹೊರತಲ್ಲ. ಅಮೆರಿಕ ಅರಬ್ ರಾಷ್ಟ್ರಗಳ ಮುಸ್ಲಿಂ ಜಗತ್ತನ್ನು ಒಡೆದು ಅಲ್ಲಿನ ತೈಲ ಸಂಪತ್ತಿನ ಮೇಲೆ ತನ್ನ ಒಡೆತನ ಸ್ಥಾಪಿಸಲು ನಿರಂತರವಾಗಿ ಯತ್ನಿಸುತ್ತಲೇ ಬಂದಿದೆ. ಈ ಕಾರಣಕ್ಕಾಗಿಯೇ ಅಮೆರಿಕಾ ತಾಲಿಬಾನ್‌ಗಳನ್ನು ಸೃಷ್ಟಿಸಿ ಈಗ ಅದರ ವಿರುದ್ಧವೇ ಹೋರಾಡುವ ನಾಟಕವಾಡುತ್ತಿದೆ ಎಂದು ಹೇಳಿದರು.

ಭಯೋತ್ಪಾದನೆ ಕೂಡ ಅಮೆರಿಕಾದ ಕೂಸು. ಎಲ್ಲಾ ರೀತಿಯ ಭಯೋತ್ಪಾದಕರಿಗೂ ತರಬೇತಿ ನೀಡಿ ಶಸ್ತ್ರಾಸ್ತ್ರ ಒದಗಿಸಿದ್ದು ಅಮೆರಿಕಾ. ಭಾರತದಲ್ಲಿ ಕಾಶ್ಮೀರ ನೆಪ ಮಾಡಿಕೊಂಡು ಪಾಕಿಸ್ತಾನದ ಮೂಲಕ ಅಮೆರಿಕಾ ಭಯೋತ್ಪಾದಕ ಕೃತ್ಯ ಎಸಗುತ್ತಲೇ ಬಂದಿದೆ. ಇಂತಹ ದೇಶದೊಂದಿಗೆ ನಮ್ಮ ಅಧಿಕಾರ ಚುಕ್ಕಾಣಿ ಹಿಡಿದಿರುವವರು ಸ್ನೇಹ ಬೆಳೆಸಲು ಯತ್ನಿಸುತ್ತಾ 'ಜ್ಯೂನಿಯರ್ ಪಾರ್ಟನರ್' ಆಗಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ ಎಂದು ಟೀಕಿಸಿದ ಅವರು ಅಮೆರಿಕಾದೊಂದಿಗೆ ಸ್ನೇಹ ಬೆಳೆಸಿದವರು ಯಾರೂ ಉಳಿದಿಲ್ಲ ಎಂಬುದನ್ನು ಮೂರನೇ ಜಗತ್ತಿನ ದೇಶಗಳು ಇತಿಹಾಸದಿಂದ ಪಾಠ ಕಲಿಯಬೇಕಿದೆ ಎಂದು ಎಚ್ಚರಿಸಿದರು.

ವಿಚಾರಸಂಕಿರಣದ ಕೊನೆಯಲ್ಲಿ ನಡೆದ ಸಂವಾದ ಗೋಷ್ಠಿಯಲ್ಲಿ ಪತ್ರಕರ್ತ, ಆರ್.ಪಿ.ವೆಂಕಟೇಶ ಮೂರ್ತಿ, ಲೇಖಕಿ ಭಾನು ಮುಷ್ತಾಕ್, ಕೆ.ಟಿ.ಗಿರೀಶ್ ಮೊದಲಾದವರು ಪಾಲ್ಗೊಂಡು ಮಾತನಾಡಿದರು.

ಡಿವೈಎಫ್ಐ ರಾಜ್ಯ ಅಧ್ಯಕ್ಷ ಶಾಂತರಾಂ ನಾಯಕ್ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೆ.ಮಹಾಂತೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಅಧ್ಯಕ್ಷರು ಹಾಗೂ ಸ್ವಾಗತ ಸಮಿತಿ ಗೌರವಾಧ್ಯಕ್ಷರಾದ ಮದನ ಗೌಡ ಸ್ವಾಗತಿಸಿದರು. ರಾಜಕುಮಾರ್ ವಂದಿಸಿದರು.

ಯುವಜನ ಚಳುವಳಿಗೆ ಬಲ ನೀಡಿದ ಸ್ಫೂರ್ತಿ ಶಿಬಿರ

ಜನವರಿ 20 ರಿಂದ 22 ರವರೆಗೆ ಹಾಸನದಲ್ಲಿ ನಡೆದ ಡಿವೈಎಫ್ಐ ನ ಪ್ರಾದೇಶಿಕ ಶಿಬಿರ ಯುವಜನ ಚಳುವಳಿಗೆ ಬಲ ನೀಡಿದ ಸ್ಫೂರ್ತಿಯ ಶಿಬಿರವಾಯಿತು ಎನ್ನುವುದರಲ್ಲಿ ಅನುಮಾನವಿಲ್ಲ. ಸೈದ್ಧಾಂತಿಕ, ಸಂಘಟನಾ, ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳ ವಿವಿಧ ಆಯಾಮಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಭಾಗವಹಿಸಿದ್ದ ನೂರಾರು ಯುವ ಕಾರ್ಯಕರ್ತರನ್ನು ಸ್ಫೂರ್ತಿಗೊಳಿಸುವಲ್ಲಿ ಯಶಸ್ವಿಯಾಯಿತು. ಅದರಲ್ಲೂ ಮೊದಲನೆಯ ದಿನದ ವಿಚಾರಸಂಕಿರಣವು ಸಾಕಷ್ಟು ಚರ್ಚೆಗೆ ಅವಕಾಶ ನೀಡಿ 'ರಾಜಕೀಯ ಜಾಗೃತಿ' ಗೆ ಕಾರಣವಾಯಿತು.

ಇದಲ್ಲದೆ ಶಿಬಿರದಲ್ಲಿ 'ಮಾಧ್ಯಮ ಮತ್ತು ಯುವಜನ' ಕುರಿತು ತರಗತಿಯು ಇವತ್ತಿನ ಅನಾರೋಗ್ಯಕರ, ಪತ್ರಿಕಾ ಪೈಪೋಟಿಯನ್ನು ತೆರೆದಿಟ್ಟು ಜಾಹೀರಾತು, ಕೀಳು ಅಭಿರುಚಿ, ಭಾವೋದ್ರೇಕ ಸುದ್ದಿಗಳ ಮೂಲಕ ಯಾವ ರೀತಿ ಯುವಜನರನ್ನು ಅಡ್ಡ ದಾರಿಗೆಳೆಯುತ್ತಿವೆ ಎಂಬುದನ್ನು ಮನವರಿಕೆ ಮಾಡಿತು. ಇದಲ್ಲದೆ ಬಹುರಾಷ್ಟ್ರೀಯ ಕಂಪನಿಗಳು, ಸಾಮ್ರಾಜ್ಯಶಾಹಿ ಏಜೆಂಟರುಗಳು ಅಭಿವೃದ್ಧಿ ಹೊಂದುತ್ತಿರುವ ತೃತೀಯ ಜಗತ್ತಿನ ದೇಶಗಳಲ್ಲಿ ತಮ್ಮ ಮಾರುಕಟ್ಟೆ ವಿಸ್ತರಣೆಗಾಗಿ ಯುವಜನರನ್ನು ವಿವಿಧ ರೀತಿಯಲ್ಲಿ ಬಳಸಿಕೊಳ್ಳುತ್ತಿರುವ ಕೀಳು ಮಟ್ಟದ ಪ್ರಚಾರ ವೈಖರಿಗಳನ್ನು ಎಳೆ-ಎಳೆಯಾಗಿ ಬಿಡಿಸಿಟ್ಟವರು ಲೇಖಕ ಮೋಹನ್.

ಜವಾಬ್ದಾರಿಯಿಂದ ನುಣುಚಿಕೊಳ್ಳುವ ಈ ಸಂದರ್ಭದಲ್ಲಿ 'ಸರ್ವರಿಗೂ ಶಿಕ್ಷಣ' ಮತ್ತು ಉದ್ಯೋಗಕ್ಕಾಗಿ ಈ ದೇಶದ ಯುವಜನತೆ ನಡೆಸಬೇಕಾದ ಹೋರಾಟದ ಅನಿವಾರ್ಯತೆ ಮತ್ತು ಅದಕ್ಕಿರುವ ಪರ್ಯಾಯ ವ್ಯವಸ್ಥೆಯನ್ನು ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದವರು ಎಸ್ಎಫ್ಐನ ಮಾಜಿ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್.

'ಸಮಾಜದ ಬೆಳವಣಿಗೆ ಮತ್ತು ಬದಲಾವಣೆ' ಕುರಿತು ರೈತ, ಕಾರ್ಮಿಕ ಮುಖಂಡರಾದ ನಿತ್ಯಾನಂದ ಸ್ವಾಮಿ, ಜಾಗತೀಕರಣದ ಪ್ರಕ್ರಿಯೆಯಲ್ಲಿ 'ಕೃಷಿ ಮತ್ತು ಕೈಗಾರಿಕೆ' ಕುರಿತು ಸಿಐಟಿಯು ಮುಖಂಡರಾದ ಬಿ.ಮಾಧವ ಹಾಗೂ 'ಪ್ರಸಕ್ತ ಪರಿಸ್ಥಿತಿ ಮತ್ತು ಯುವಜನ ಚಳುವಳಿ ಮುಂದಿರುವ ಸವಾಲುಗಳು' ಕುರಿತು ಡಿವೈಎಫ್ಐ ನ ಮಾಜಿ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ತರಗತಿಗಳನ್ನು ನೀಡಿ, ಯುವ ಕಾರ್ಯಕರ್ತರನ್ನು ಜಾಗೃತಗೊಳಿಸಿದರು.

ಶಿಬಿರಕ್ಕೆ ಆಗಮಿಸಿದ್ದ ಡಿವೈಎಫ್ಐ ಅಖಿಲ ಭಾರತ ಸಹ ಕಾರ್ಯದರ್ಶಿ ಕೆ.ಎನ್.ಬಾಲ ಗೋಪಾಲ ಅವರ ಉಪಸ್ಥಿತಿಯಲ್ಲಿ ಸಂಘಟನಾ ಚರ್ಚೆಗಳು ಜಿಲ್ಲಾವಾರು ನಡೆದವು. ಮುಖ್ಯವಾಗಿ ರಾಜ್ಯ ಸಮಿತಿ ಪರವಾಗಿ ಮಂಡಿಸಲಾದ 2002 ರ ವಾರ್ಷಿಕ ಯೋಜನೆಯನ್ನು ಇನ್ನಷ್ಟು ಕ್ರಮಬದ್ಧಗೊಳಿಸಲು ಈ ಚರ್ಚೆಗಳು ಸಾಕಷ್ಟು ಸಹಾಯಕವಾಯಿತು. ಸಾಮೂಹಿಕ ಸದಸ್ಯತ್ವ, ಸಮಿತಿಗಳ ಕಾರ್ಯನಿರ್ವಹಣೆ, ನಿಧಿ ಪ್ರಶ್ನೆ ಹಾಗೂ [illegible] ಮೂಡಿಬಂದವು.

ಸಂಘಟನಾತ್ಮಕ ದೃಷ್ಟಿಯಿಂದ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿರುವ ದಕ್ಷಿಣ ಕರ್ನಾಟಕ ಜಿಲ್ಲೆಗಳ ಯುವಜನ ಕಾರ್ಯಕರ್ತರಿಗಾಗಿ ವ್ಯವಸ್ಥೆಗೊಳಿಸಲಾಗಿದ್ದು ಈ ಶಿಬಿರಕ್ಕೆ ಬೆಂಗಳೂರು, ಕೋಲಾರ, ದ.ಕನ್ನಡ, ಉಡುಪಿ, ಮಂಡ್ಯ, ಮೈಸೂರು, ಕೊಡಗು, ಹಾಸನ ಜಿಲ್ಲೆಗಳಿಂದ ನಿರೀಕ್ಷೆಗೆ ತಕ್ಕಂತೆ ಪ್ರತಿನಿಧಿಗಳು ಪಾಲ್ಗೊಂಡಿದ್ದು ಸಹ ಈ ಶಿಬಿರದ ಗುಣಾತ್ಮಕ ಅಂಶ.

ಶಿಬಿರಕ್ಕೆ ವಿಶೇಷ ಕಾಳಜಿ ಹೊತ್ತು ಆಗಮಿಸಿದ್ದ ಡಿವೈಎಫ್ಐ ನ ಅಖಿಲ ಭಾರತ ಅಧ್ಯಕ್ಷರಾದ ಎನ್.ಎನ್.ಕೃಷ್ಣದಾಸ್ ಸಮಾರೋಪ ಭಾಷಣ ಮಾಡುತ್ತಾ, ಕರ್ನಾಟಕದ ಯುವಜನ ಚಳುವಳಿ ಸಾಗಬೇಕಾದ ಸ್ಪಷ್ಟ ದಾರಿಯನ್ನು ತೋರಿಸಿದರು. ಮುಖ್ಯವಾಗಿ ಸರಿಯಾದ ಸಮಿತಿಯ ಕಾರ್ಯ ನಿರ್ವಹಣೆ, ನಮ್ಮ ಬಹುತೇಕ ಸಂಘಟನಾತ್ಮಕ ಸಮಸ್ಯೆಗಳಿಗೆ ಪರಿಹಾರ ನೀಡುತ್ತವೆ ಎಂದು ಒತ್ತಿ ಹೇಳಿದರು. ಇಂತಹ ಎಲ್ಲಾ ನ್ಯೂನ್ಯತೆಗಳನ್ನು ಹೋಗಲಾಡಿಸಿಕೊಂಡು ಹೊಸ ದಿಕ್ಕಿನೆಡೆಗೆ ಯುವಜನ ಚಳುವಳಿಯನ್ನು ಕೊಂಡೊಯ್ಯುವ ಸ್ಫೂರ್ತಿಯನ್ನು ಈ ಶಿಬಿರ ಖಂಡಿತ ನಿಮಗೆ ನೀಡಿದೆ ಎಂದು ಹೇಳಿದರು. ಈ ವ್ಯವಸ್ಥೆಯ ಬದಲಾವಣೆಗೆ ಹೋರಾಟವನ್ನು ಹೊರತುಪಡಿಸಿ ಬೇರೆ ಮಾರ್ಗಗಳಿಲ್ಲ. ಅಂತಹ ಸಮರಧೀರ ಹೋರಾಟಗಳನ್ನು ಕಟ್ಟುವ ಕೆಲಸಕ್ಕೆ ನಾವು ಮುಂದಾಗಬೇಕೆಂದು ಯುವ ಕಾರ್ಯಕರ್ತರಿಗೆ ಕರೆ ನೀಡಿದರು,

ಯುವಜನ ಚಳುವಳಿ ಬೆಳವಣಿಗೆಗೆ ಹೊಸ ಸ್ಫೂರ್ತಿ, ಬಲವನ್ನು ಈ ದಕ್ಷಿಣ ಕರ್ನಾಟಕ ಶಿಬಿರ ತಂದುಕೊಟ್ಟಿದೆ. ಅದರ ಸಂಘಟನಾತ್ಮಕ ಫಲ ಪಡೆಯಲು ಮುನ್ನುಗಿ ಕೆಲಸ ಮಾಡುವುದು ಮಾತ್ರ

ಮೆಕ್ಸಿಕೊದಲ್ಲಿ ಬಡತನದ ಮೇಲೆ ಶೃಂಗಸಭೆಯಲ್ಲಿ ಕ್ಯಾಸ್ಟ್ರೋ ಗುಡುಗು

'ಬಡತನಕ್ಕೆ ಕಾರಣ ವಿನಾಶಕಾರಿ ಜಾಗತಿಕ ವ್ಯವಸ್ಥೆ'

ಇತ್ತೀಚೆಗೆ ಮೆಕ್ಸಿಕೊದ ಮೊಂಟೆರೆರಿ ಎಂಬಲ್ಲಿ ಬಡತನದ ಬಗ್ಗೆ ಜಾಗತಿಕ ಶೃಂಗಸಭೆ ಏರ್ಪಟ್ಟಿತ್ತು. ಇದನ್ನು ವಿಶ್ವಸಂಸ್ಥೆ ಏರ್ಪಡಿಸಿತ್ತು. ಸುಮಾರು 50 ಜಾಗತಿಕ ನಾಯಕರು ಇದರಲ್ಲಿ ಭಾಗವಹಿಸಿದ್ದರು. ವಿಶ್ವಸಂಸ್ಥೆ ಮಹಾಕಾರ್ಯದರ್ಶಿಯವರ ನಿರೀಕ್ಷೆಯನ್ನು ಮುಟ್ಟದ ಈ ಶೃಂಗಸಭೆಯಲ್ಲಿ ಶ್ರೀಮಂತ ದೇಶಗಳ ನಾಯಕರು ಬಡತನದ ಮೇಲೆ ಯಥಾಪ್ರಕಾರ ಮೊಸಳೆಕಣ್ಣೀರು ಸುರಿಸಿದರು. ಎಂದಿನಂತೆ ಕ್ಯೂಬಾದ ನಾಯಕ ಕ್ಯಾಸ್ಟ್ರೋರವರದ್ದು ಒಂದೇ ಪ್ರಾಮಾಣಿಕ, ನಿರ್ಭೀತ ಬಿಚ್ಚು ಮನಸ್ಸಿನ ದನಿಯಾಗಿತ್ತು ಶೃಂಗಸಭೆಯಲ್ಲಿ. 'ಸಾಮೂಹಿಕ ನರಹತ್ಯೆ' ಮಾಡುವ ಇಂದಿನ ಜಾಗತಿಕ ಆರ್ಥಿಕ ವ್ಯವಸ್ಥೆ ಬದಲಾಯಿಸದೆ ಬಡತನ ನಿವಾರಿಸಲು ಸಾಧ್ಯವಿಲ್ಲ ಎಂದು ಕ್ಯಾಸ್ಟ್ರೋ ಗುಡುಗಿದರು. ಆಚೆಗೆ ಇಂತಹ ಶೃಂಗಸಭೆಗಳಲ್ಲಿ ಸಾಮಾನ್ಯವಾಗಿರುವಂತೆ, ಸಾವಿರಾರು ಜನ 'ಜಾಗತೀಕರಣ'ದ ನೀತಿಗಳ ವಿರುದ್ಧ ಬೃಹತ್ ಪ್ರತಿಭಟನಾ ಪ್ರದರ್ಶನದ ಮೂಲಕ ಕ್ಯಾಸ್ಟ್ರೋ ಗುಡುಗನ್ನು ಮಾರ್ದನಿಸಿದರು.



ಮೆಕ್ಸಿಕೊದ ಮೊಂಟೆರೆರಿಯಲ್ಲಿ ವಿಶ್ವಸಂಸ್ಥೆ ಬೆಳವಣಿಗೆಗೆ ಆರ್ಥಿಕ ನೆರವಿನ ಬಗ್ಗೆ ಅಂತರ್‍ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಿತ್ತು. ಇದರಲ್ಲಿ 50 ಕ್ಕೂ ಹೆಚ್ಚು ಜಾಗತಿಕ ನಾಯಕರು ಭಾಗವಹಿಸಿದ್ದರು. ಇದನ್ನು 'ಬಡತನದ ಶೃಂಗಸಭೆ' ಎಂದು ವಾಡಿಕೆಯಲ್ಲಿ ಕರೆಯಲಾಗಿದೆ. ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ತಮ್ಮ ಭಾಷಣದಲ್ಲಿ ತೀವ್ರ ಬಡತನದಿಂದ ನರಳುತ್ತಿರುವವರ (ದಿನಕ್ಕೆ ಒಂದು ಡಾಲರಿಗಿಂತ ಕಡಿಮೆ ಆದಾಯ ಇರುವವರ) ಸಂಖ್ಯೆಯಲ್ಲಿ ಅರ್ಧದಷ್ಟಾದರೂ 2015 ರೊಳಗೆ ಕಡಿಮೆ ಮಾಡುವ ಗುರಿಯನ್ನು ಸಮ್ಮೇಳನದ ಮುಂದಿಟ್ಟರು. ಇದಕ್ಕಾಗಿ ಶ್ರೀಮಂತ ದೇಶಗಳು ಕನಿಷ್ಟ 50 ಶತಕೋಟಿ ಡಾಲರುಗಳನ್ನು ಸಹಾಯಧನವಾಗಿ ಕೊಡ ಬೇಕೆಂದು ಮನವಿ ಮಾಡಿಕೊಂಡರು. ಇದನ್ನು ಸಾಧ್ಯಮಾಡಲು ಶ್ರೀಮಂತ ದೇಶಗಳು ಅವರ ಒಟ್ಟು ಉತ್ಪಾದನೆಯ ಕನಿಷ್ಟ ಶೇಕಡಾ 0.7 (ಸಾವಿರದಲ್ಲಿ 7 ಭಾಗ)ವಾದರೂ ಸಹಾಯಧನ ನೀಡಬೇಕು ಎಂಬುದು ನಿರೀಕ್ಷೆಯಿತ್ತು. ಜಗತ್ತಿನ ಜನರಲ್ಲಿ ಐವರಲ್ಲಿ ಇಬ್ಬರು ಬಡತನದ ರೇಖೆಯ ಕೆಳಗಿದ್ದು ನಿಜವಾಗಿಯೂ ಬಡತನ ಹೋಗಲಾಡಿಸಲು 100 ಶತಕೋಟಿ ಡಾಲರುಗಳು ಬೇಕು.

ಹುಸಿಯಾದ ನಿರೀಕ್ಷೆ

ಆದರೆ ಕೋಫಿ ಅನ್ನನ್‌ರವರ ನಿರೀಕ್ಷೆ ನಿಜವಾಗಲಿಲ್ಲ. ಜಗತ್ತಿನ ಹೆಚ್ಚಿನ ಶ್ರೀಮಂತ ದೇಶಗಳ ನಾಯಕರು ಬಡತನದ ಬಗ್ಗೆ ಮೊಸಳೆ ಕಣ್ಣೀರು ಸುರಿಸಿದರೆ ವಿನಹ ಕೋಫಿ ಅನ್ನನ್‌ರ ಕರೆಗೆ ಓಗೊಡಲಿಲ್ಲ. ಅಮೆರಿಕದ ಅಧ್ಯಕ್ಷ ಬುಶ್ ಮುಂದಿನ ಮೂರು ವರ್ಷಗಳಲ್ಲಿ 5 ಶತಕೋಟಿ ಡಾಲರುಗಳ ಸಹಾಯಧನ ಘೋಷಿಸಿದ್ದರು. ಆದರೆ ಇದು ಯುರೋಪು ಮತ್ತು ಜಪಾನ್ ಕೊಡುವ ನೆರವಿನ ಮೂರನೇ ಒಂದರಷ್ಟು. ಅಮೆರಿಕದ ಒಟ್ಟು ಉತ್ಪಾದನೆಯ ಶೇಕಡಾ 0.1 ರಷ್ಟು(ಸಾವಿರದಲ್ಲಿ ಒಂದು ಭಾಗ). ಈ ನೆರವಿಗೂ ಅಧ್ಯಕ್ಷ ಬುಶ್ ನೂರಾರು ಶರತ್ತುಗಳನ್ನು ಹೇರಿದ್ದಾರೆ. ಮುಕ್ತವ್ಯಾಪಾರ, ಆರ್ಥಿಕ-ರಾಜಕೀಯ ವ್ಯವಸ್ಥೆಯಲ್ಲಿ ಅಮೆರಿಕ ಬಯಸುವ 'ಬದಲಾವಣೆಗಳು' ಶರತ್ತುಗಳು. ಫ್ರೆಂಚ್ ಅಧ್ಯಕ್ಷರೂ ಅದೇ ರೀತಿ ಶರತ್ತುಗಳ ಬಗ್ಗೆ ಮಾತನಾಡಿದರು. ಸಹಾಯಧನ ಸಾಲ (ಸುಲಭ ಕಂತಿನ ಬಡ್ಡಿಯ ಮೇಲಿನ) ದ ರೂಪದಲ್ಲಿ ಇರಬೇಕು ಎಂದು ಯುರೋಪಿಯನ್ ನಾಯಕರ ಅಭಿಪ್ರಾಯವಾಗಿತ್ತು. ಈಗ ಅತ್ಯಂತ ದೊಡ್ಡ ಸಹಾಯಧನ ಕೊಡುವ ದೇಶವಾಗಿರುವ ಜಪಾನ್ ಏರಿಕೆ ಬಗ್ಗೆ ಮಾತನಾಡಲಿಲ್ಲ. ಯುರೋಪು 7 ಶತಕೋಟಿ ಡಾಲರುಗಳ ಏರಿಕೆ ಘೋಷಿಸಿತು.

ಬುಶ್‌ರ ಶರತ್ತುಗಳು ಮತ್ತು ಕ್ಯಾಸ್ಟ್ರೋ ಗುಡುಗು

ಶೃಂಗಸಭೆಯಲ್ಲಿ ಹೆಚ್ಚಿನ ನಾಯಕರುಗಳ ಭಾಷಣ ಬಡತನ ನಿವಾರಿಸಲು ಸಹಾಯಧನ, ಎಷ್ಟು ಬೇಕು ಎಷ್ಟು ಸಾಕು ಎಂಬುದರ ಬಗ್ಗೆ ಸೀಮಿತವಾಗಿದ್ದರೆ, ಕ್ಯೂಬಾದ ಅಧ್ಯಕ್ಷ ಕ್ಯಾಸ್ಟ್ರೋ ಒಬ್ಬರೇ ಬಡತನದ ಕಾರಣಗಳ ಬಗ್ಗೆ ಎಂದಿನ ಪ್ರಾಮಾಣಿಕ, ಬಿಚ್ಚುಮನಸ್ಸಿನ ನಿರ್ಭೀತ ಮಾತುಗಳನ್ನು ಆಡಿದರು. ವ್ಯಾಪಕ ಬಡತನದ ಮೂಲಕ ಕಾರಣ 'ಸಾಮೂಹಿಕ ನರಮೇಧ'ವನ್ನು ಕೋಟ್ಯಾಂತರ ಜನಗಳ ಮೇಲೆ ಹೇರುತ್ತಿರುವ ಜಾಗತಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಎಂದು ಎಲ್ಲರ ಗಮನ ಸೆಳೆದರು. ಇದು ಜನರ ಶೋಷಣೆ, ಲೂಟಿ ಮೇಲೆ ಆಧಾರಿತ ವ್ಯವಸ್ಥೆ. ಶ್ರೀಮಂತ ದೇಶಗಳ ನಾಯಕರು ಸಹಾಯಧನಕ್ಕಾಗಿ ಹೇರುತ್ತಿರುವ ಶರತ್ತುಗಳು ಈ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಲಪಡಿಸುವ ಉದ್ದೇಶ ಹೊಂದಿರುವಂತಹವು. ಇಂತಹ ವ್ಯವಸ್ಥೆಯ ಅಧಿನಾಯಕರಾಗಿರುವ ಈ ನಾಯಕರು ಬಡತನ ನಿವಾರಣೆ ಬಗ್ಗೆ ಮೊಸಳೆ ಕಣ್ಣೀರು ಸುರಿಸುವುದನ್ನು ಕ್ಯಾಸ್ಟ್ರೋ ತೀಕ್ಷ್ಣವಾಗಿ ಲೇವಡಿ ಮಾಡಿದರು. ಶತಮಾನಗಳ ಕಾಲ ಏಶ್ಯಾ, ಆಫ್ರಿಕಾ, ದಕ್ಷಿಣ ಅಮೆರಿಕಾದ ದೇಶಗಳನ್ನು, ಜನಗಳನ್ನು ಲೂಟಿ ಮಾಡಿದ ಸಾಮ್ರಾಜ್ಯಶಾಹಿ ದೇಶಗಳು ಇಂದಿನ ಶ್ರೀಮಂತ ದೇಶಗಳು 'ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಒಂದು ವಿಶಾಲ ಜೂಜಿನ ಕಟ್ಟೆ'ಯಾಗಿಸಿರುವ ಇವರು 'ಬಡತನ ನಿವಾರಣೆ' ಗೆ ಸಹಾಯಧನಕ್ಕೆ ಶರತ್ತುಗಳು ಹಾಕುವುದು ಬಡತನದ ದುರಂತದ ಬಲಿಪಶುಗಳಾಗಿರುವವರನ್ನು ಅವರ ಸ್ಥಿತಿಗೇ ದೂಷಿಸಿದಂತೆ. ಯಾವುದೇ ಶರತ್ತು ಇಲ್ಲದೇ ಸಹಾಯಧನ ಕೊಡಬೇಕು ಎಂದು ಕ್ಯಾಸ್ಟ್ರೋ ಗುಡುಗಿದರು. ಬಡತನ ನಿವಾರಣೆಗೆ ಮುಕ್ತ-ವ್ಯಾಪಾರ, ವಿದೇಶಿ ಖಾಸಗಿ ಬಂಡವಾಳ ಹೂಡಿಕೆ ಒಂದೇ ಪರಿಹಾರ ಎಂಬ ಬುಶ್, ಅಧ್ಯಕ್ಷ ಮೆಕೆಲ್ ಮೂರ್ ಮತ್ತು ಇತರ ಹಲವು ನಾಯಕರ ಚರ್ವಿತ ಚರ್ವಣವನ್ನು ಕ್ಯಾಸ್ಟ್ರೋ ಅಲ್ಲದೆ ಇತರ ಹಲವರು ಟೀಕಿಸಿದರು. ಈ 'ಪರಿಹಾರ' ಗಳು ಕೆಲಸ ಮಾಡುತ್ತಿಲ್ಲ ಎಂಬ ಇತ್ತೀಚಿನ ಹಲವು ಉದಾಹರಣೆಗಳನ್ನು ಕೊಡಲಾಯಿತು.

ಶರತ್‌ಚಂದ್ರ

'ಮೊಂಟೆರೆರ ಸಹಮತ'

ಸಮ್ಮೇಳನ 'ಮೊಂಟೆರೆರಿ ಸಹಮತ' ಎಂದು ಕರೆಯಲಾದ ಸಮಜಾಯಿಷಿ ಒಪ್ಪಂದದೊಂದಿಗೆ ಮುಕ್ತಾಯವಾಯಿತು. ಈ ಸಹಮತದ ಪ್ರಕಾರ ಒಪ್ಪಂದದ ದಸ್ತಾವೇಜು ಶ್ರೀಮಂತ ದೇಶಗಳಿಗೆ ಧನಸಹಾಯ ಹೆಚ್ಚಿಸುವಂತೆ ಮತ್ತು ಬಡದೇಶಗಳಿಗೆ ಅರ್ಧ ಸಹಾಯವನ್ನು ಸರಿಯಾಗಿ ಬಳಸಿಕೊಳ್ಳುವಂತೆ ಮನವಿ ಮಾಡಿದೆ. ಸಾಲ ಮನ್ನಣೆ, ವಿದೇಶಿ ಖಾಸಗಿ ಬಂಡವಾಳ ಹೂಡಿಕೆ ಮುಕ್ತ ವ್ಯಾಪಾರದ ಸನ್ನಿವೇಶಕ್ಕೂ ಒಪ್ಪಂದ ಕರೆ ಕೊಟ್ಟಿದೆ. ಶ್ರೀಮಂತ ದೇಶ ತಮ್ಮ ಒಟ್ಟು ಉತ್ಪಾದನೆ ಶೇಕಡಾ 0.7 ರಷ್ಟು(ಸಾವಿರದಲ್ಲಿ 7 ಭಾಗ) ಧನಸಹಾಯ ನೀಡಬೇಕು ಎಂಬುದನ್ನು ಗುರಿಯಾಗಿಟ್ಟುಕೊಳ್ಳಬೇಕು. ಅದೇ ರೀತಿ 50 ಶತಕೋಟಿ ಡಾಲರು ವಿಶ್ವ ಸಹಾಯಧನವನ್ನು ಗುರಿಯಾಗಿಟ್ಟುಕೊಳ್ಳಬೇಕು ಎಂದು ಒಪ್ಪಂದ ಹೇಳಿದೆ. ಸಮ್ಮೇಳನ ಆರಂಭವಾದಾಗ ಇದು ಶ್ರೀಮಂತ ದೇಶಗಳ 'ಪ್ರತಿಜ್ಞೆ'ಯಾಗಬೇಕು ಎಂಬುದು ಸಮ್ಮೇಳನದ ಮೂಲ ಉದ್ದೇಶಗಳಲ್ಲೊಂದಾಗಿತ್ತು.

ಆಚೆಗೆ ಜನರ ಗುಡುಗು

ಸಮ್ಮೇಳನ ಆಚೆಗೆ ಎಂದಿನಂತೆ ಈ ಸಮ್ಮೇಳನದ 'ಗೋಸುಂಬೆತನ' ವನ್ನು ಟೀಕಿಸುವ ಭಾರಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಇದು ಇತ್ತೀಚಿ ವರ್ಷಗಳಲ್ಲಿ ಶ್ರೀಮಂತ ದೇಶಗಳ ಅಧಿಪತ್ಯದಲ್ಲಿ ನಡೆಯುವ (ವಿಶ್ವಸಂಸ್ಥೆಯದ್ದಾಗಲೀ, ಇತರ ಯಾವುದೇ ಸಂಘಟನೆಯದ್ದಾಗಲೀ) ಎಲ್ಲಾ ಸಭೆ, ಸಮ್ಮೇಳನ, ಶೃಂಗಸಭೆಗಳ ವಿರುದ್ಧ ಜನರ ದೋಷ ವ್ಯಕ್ತಪಡಿಸುವ ಭಾರಿ ಪ್ರದರ್ಶನಗಳ ಪರಂಪರೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಿದೆ. ಇತ್ತೀಚೆಗೆ ಸ್ಪೇನಿನ ಬಾರ್ಸಿಲೋನಾದಲ್ಲಿ ನಡೆದ ಯುರೋಪಿಯನ್ ಒಕ್ಕೂಟದ ಶೃಂಗಸಭೆಯಲ್ಲೂ ಹೀಗೇ ಭಾರಿ ಪ್ರತಿಭಟನೆ ನಡೆದಿತ್ತು. ಇತರೆಡೆಯಂತೆ ಇಲ್ಲೂ ಪ್ರದರ್ಶನದಲ್ಲಿ ಮೆಕ್ಸಿಕೊದ ಜನಮಾತ್ರವಲ್ಲದೆ ದಕ್ಷಿಣ ಅಮೆರಿಕಾದ ಹಲವು ನೆರೆಯ ದೇಶಗಳ ಜನರ, ಜನಸಂಘಟನೆಗಳ ವ್ಯಾಪಕ ಭಾಗವಹಿಸುವಿಕೆ ಮುಖ್ಯ ಲಕ್ಷಣವಾಗಿತ್ತು. ಕ್ಯಾಸ್ಟ್ರೋ ಸಭೆಯಲ್ಲಿ ಗುಡುಗಿದದೆ ಜನ ಆಚೆಗೆ ಗುಡುಗಿದ್ದರು. ಇದು ಬುಶ್ ಗ್ಯಾಂಗನ್ನು ನಡುಗಿಸುವ ದಿನಗಳು ದೂರವಿಲ್ಲ.

ಆರುಂಧತಿ ರಾಯ್ ಮತ್ತು ಕೋರ್ಟ್ ತೀರ್ಪು

ನ್ಯಾಯಾಂಗವನ್ನು ಟೀಕಿಸುವುದು ಪ್ರಜಾಸತ್ತಾತ್ಮಕ ಹಕ್ಕಾಗಬೇಕು

ಪ್ರಜಾಪ್ರಭುತ್ವ ದೇಶದಲ್ಲಿ ನ್ಯಾಯಾಂಗ ನೀಡುವ ತೀರ್ಪನ್ನು ಟೀಕಿಸುವುದು ಪ್ರತಿಯೊಬ್ಬ ನಾಗರೀಕ ಹಕ್ಕಾಗಬೇಕು. ಆದರೆ ಇದರ ದುರುಪಯೋಗ ಮಾಡಿಕೊಳ್ಳಬಾರದು ಹಾಗೂ ನ್ಯಾಯಾಂಗದ ಗೌರವವನ್ನು ಕಾಪಾಡುವ ಉದ್ದೇಶದಿಂದ 1971 ರಲ್ಲಿ ಕೋರ್ಟು ನಿಂದನಾ ಕಾಯಿದೆಯನ್ನು ಜಾರಿಗೆ ತರಲಾಯಿತು. ಈ ಕಾನೂನಿನನ್ವಯ ಕೋರ್ಟು ನಿಂದನೆ ಆರೋಪದ ಮೇಲೆ ಹೆಸರಾಂತ ಕಾದಂಬರಿಗಾರ್ತಿ, ಬೂಕರ್ ಪ್ರಶಸ್ತಿ ವಿಜೇತೆ ಅರುಂಧತಿ ರಾಯ್ ಅವರನ್ನು ಒಂದು ದಿನ ಜೈಲುವಾಸ ಹಾಗೂ 2000 ರೂ. ದಂಡದ ಶಿಕ್ಷೆಯನ್ನು ದೆಹಲಿಯ ಕೋರ್ಟು ನೀಡಿದೆ.

ನರ್ಮದಾ ನದಿಯ ಮೇಲೆ ಅಣೆಕಟ್ಟು ಕಟ್ಟುತ್ತಿರುವುದನ್ನು 'ನರ್ಮದಾ ಬಚಾವೋ' ಆಂದೋಲನದ ಆಶ್ರಯದಲ್ಲಿ ಪರಿಸರವಾದಿಗಳು ವಿರೋಧಿಸುತ್ತಿದ್ದರು. ಇದರಲ್ಲಿ ಸುಪ್ರೀಂಕೋರ್ಟು ಅಣೆಕಟ್ಟು ಕಟ್ಟುವುದರ ಪರವಾಗಿ ತೀರ್ಪು ನೀಡಿತು. ಇದನ್ನು ಪ್ರತಿಭಟಿಸಿದ ಅರುಂಧತಿ ರಾಯ್ ಅವರಿಗೆ ಸುಪ್ರೀಂ ಕೋರ್ಟು ಕೋರ್ಟು ನಿಂದನಾ ಆರೋಪ ಹೊರಿಸಿತು. ಹಾಗೂ ಇದೀಗ ಶಿಕ್ಷೆ ನೀಡಿದೆ. ಹಾಗಾದರೆ ಯಾವುದೇ ವ್ಯಕ್ತಿ ಸಮಾಜ ಮತ್ತು ಪರಿಸರದ ಬಗ್ಗೆ ಕಾಳಜಿ ವಹಿಸುವುದು ತಪ್ಪೇ?




ಇತ್ತೀಚಿನ ದಿನಗಳಲ್ಲಿ ನಾಗರಿಕ ಹಕ್ಕುಗಳ ಮೇಲೆ ಕೋರ್ಟುಗಳ ಮಧ್ಯಪ್ರವೇಶ ಹೆಚ್ಚಾದಂತೆ ಕಾಣುತ್ತದೆ. ಹರತಾಳ, ಬಂದ್‌ಗಳನ್ನು ನಡೆಸಬಾರದೆಂದು ಕೇರಳ ಹೈಕೋರ್ಟ್ ತೀರ್ಪು ನೀಡಿದ್ದರೆ, ಮುಷ್ಕರ ನಡೆಸಿದರೆ ಆಗುವ ನಷ್ಟವನ್ನು ಭರ್ತಿ ಮಾಡಿಕೊಡಬೇಕೆಂದು ಮುಂಬೈ ಹೈಕೋರ್ಟ್ ಕಾರ್ಮಿಕ ಸಂಘವೊಂದಕ್ಕೆ ಆದೇಶ ನೀಡಿತ್ತು. ಉದಾರೀಕರಣ ಮತ್ತು ಖಾಸಗೀಕರಣ ನೀತಿಯ ಬೆನ್ನ ಹಿಂದೆಯೇ ದುಡಿಯುವ ವರ್ಗದ ವಿರುದ್ಧ ತೀರ್ಪುಗಳು ಹೆಚ್ಚಾಗುತ್ತಿದ್ದುದನ್ನು ಕಾಣುತ್ತೇವೆ.

ಇಂತಹ ತೀರ್ಪುಗಳಿಂದ ನ್ಯಾಯಾಂಗದ ಮೇಲೆ ಜನತೆ ವಿಶ್ವಾಸ ಕಳೆದುಕೊಳ್ಳುತ್ತಾರೆ. ಇದು ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಅಂತಹ ತೀರ್ಪು. ಆದ್ದರಿಂದ ಜನರ ಆಶಯಗಳನ್ನು ಗಮನದಲ್ಲಿಟ್ಟುಕೊಂಡು, ಕೋರ್ಟು ನಿಂದನಾ ಕಾಯಿದೆಗೆ ಸೂಕ್ತ ತಿದ್ದುಪಡಿ ತರುವುದು ಅಗತ್ಯ.

ಮೂರ್ಖರ ಪೆಟ್ಟಿಗೆ ಶಾಂತಿನಿರೂಪಕನಾದುದು

ಟಿ.ವಿ. ಇಂದು ಬಹು ಪ್ರಭಾವಿ ಮಾಧ್ಯಮ. ಅದೂ ಕೋಮುವಾದಿ ಶಕ್ತಿಗಳು ಪ್ರಾಬಲ್ಯ ಹೆಚ್ಚಾದ ಮೇಲೆ, ಮಾಧ್ಯಮಗಳು ಸುದ್ದಿಗಳನ್ನು, ಘಟನೆಗಳನ್ನೂ 'ಕೇಸರಿ' ಕಣ್ಣುಗಳಿಂದಲೇ ಕಂಡು, 'ಕಿಚ್ಚಿಗೆ' ಪೆಟ್ರೋಲ್ ಸುರಿಯುತ್ತಿರುವಾಗ ತಣ್ಣಗೆ ರಾಜಸ್ತಾನದ ಪಟ್ಟಣವೊಂದರಲ್ಲಿ ಟಿ.ವಿ. ಜಾಲವೊಂದು ಸೌಹಾರ್ದತೆಯ ಪ್ರತೀಕವಾಗಿ, ಸ್ನೇಹದ ಸೇತುವಾಗಿ ಸತ್ಯದ ರೂವಾರಿಯಲ್ಲಿ ಸಂಶಯಗಳನ್ನು ದೂರ ಅಟ್ಟಿ ವಿಶ್ವಾಸ ಮೂಡಿಸಿದು ಅಭಿನಂದನೀಯ ಪಾತ್ರದ ವರದಿ ಇಲ್ಲಿದೆ.



ಅವನೊಬ್ಬ ಸ್ಥಳೀಯ ಪತ್ರಕರ್ತ. ಮಧ್ಯ ರಾಜಸ್ತಾನದ ಸಣ್ಣ ಪಟ್ಟಣದ ಬೇವಾರ್‌ನಲ್ಲಿ ಒಂದು ಸಣ್ಣ ಪ್ರಕಟಣೆಯನ್ನು ಹೊರತರುತ್ತಿದ್ದ. ಹೆಸರು 'ನಿರಂತರ'. 22 ವರ್ಷಗಳ ಹಿಂದೆ ಸಣ್ಣ ಪತ್ರಿಕೆಯಾಗಿ ಆರಂಭಗೊಂಡ ನಿರಂತರ 18 ತಿಂಗಳಿಂದ 40 ಚಾನೆಲ್‌ಗಳನ್ನು ಪ್ರಸಾರ ಮಾಡುವ ಕೇಬಲ್‌ನೆಟವರ್ಕನ್ನು ಆರಂಭಿಸಿತು.

ಕಳೆದ ಏಪ್ರಿಲ್ 16 ರಂದು ವಿಶ್ವ ಹಿಂದು ಪರಿಷತ್ ಮೆರವಣಿಗೆಯೊಂದನ್ನು ಸಂಘಟಿಸಿತ್ತು. ಆ ಮೆರವಣಿಗೆಯು ಅನಧಿಕೃತವಾಗಿದ್ದ ಮಸೀದಿಯೊಂದನ್ನು ಕೆಡವಲು ಹೋಗಿ ಪೆಟ್ಟು ತಿಂದು ಬಂದಿದ್ದ ಸ್ಥಳೀಯ ಆಡಳಿತದ ಪರವಾದ ಮೆರವಣಿಗೆಯಾಗಿತ್ತು. ಮೆರವಣಿಗೆಯು ಹಿಂಸಾಚಾರಕ್ಕೆ ತಿರುಗಿ ಕಲ್ಲು ತೂರಾಟ ಮತ್ತು ಎರಡೂ ಕಡೆಯ ಆಸ್ತಿಯನ್ನು ಲೂಟಿ ಮಾಡಿತು, ಪರಿಣಾಮವಾಗಿ 25 ದಿನಗಳ ಕಾಲ ಪಟ್ಟಣದಲ್ಲಿ ಕರ್ಫ್ಯೂ ವಿಧಿಸಲಾಗಿತ್ತು.

ಮುಖ್ಯ ಬಜಾರಿನಿಂದ ಆರಂಭಗೊಂಡು ಮೆರವಣಿಗೆಯು ಈ ಚಿಕ್ಕಪಟ್ಟಣದ ಬೀದಿಗಳಲ್ಲಿ ಸಾಗುವಾಗ ಘೋಷಣೆಗಳನ್ನು ಕೂಗುತ್ತಾ, ಮುಸಲ್ಮಾನರು ಈ ದೇಶದಲ್ಲಿರಬೇಕಾದರೆ 'ವಂದೇ ಮಾತರಂ' ಹೇಳಬೇಕೆಂದು ಒತ್ತಾಯಿಸುತ್ತಿತ್ತು.

ಉದ್ರಿಕ್ತತೆ

ಮೆರವಣಿಗೆಯು ಮುಸಲ್ಮಾನರ ಗಲ್ಲಿಯಲ್ಲಿ ಸಾಗುವಾಗ ನಿಲ್ಲಿಸಿ ಧ್ವನಿವರ್ಧಕವನ್ನು ಮುಸಲ್ಮಾನರ ಮನೆಗಳ ಕಡೆ ತಿರುಗಿಸಿ ಉದ್ರೇಕಕಾರಿ ಘೋಷಣೆಗಳನ್ನು ಕೂಗುವುದನ್ನು ಮುಂದುವರೆಸಲಾಯಿತು. ಈ ಸನ್ನಿವೇಶದಲ್ಲಿ ಇಬ್ಬರು ಯುವಕರು ಮುಸ್ಲಿಂ ಮನೆಗಳ ಕಡೆಯಿಂದ ಮೆರವಣಿಗೆಯ ಕಡೆ ಕಲ್ಲು ತೂರಿದರು. ಕ್ಷಣಕ್ಕೆ ಚದುರಿದ ಗುಂಪು ಕಲ್ಲು ತೂರಾಟದಲ್ಲಿ ತೊಡಗಿತು. ಭಯಗೊಂಡವರು ಅಂಗಡಿಗಳನ್ನು ಮುಚ್ಚಿದರು. ಮಾರುಕಟ್ಟೆ ಸ್ತಬ್ಧಗೊಂಡಿತು ಸುಳ್ಳು ಸುದ್ದಿಗಳು ಕಾಡ್ಗಿಚ್ಚಿನಂತೆ ಹಚ್ಚಿದವು. ಇವುಗಳನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಲು ಯಾರೂ ಇರಲಿಲ್ಲ. ಹಿಂದೂ ಪ್ರದೇಶಗಳ ಮುಸ್ಲಿಂ ಅಂಗಡಿಗಳನ್ನು, ಮುಸ್ಲಿಂ ಪ್ರದೇಶದ ಹಿಂದು ಅಂಗಡಿಗಳನ್ನು ಲೂಟಿ ಮಾಡಿ, ಬೆಂಕಿ ಹಚ್ಚಲಾಯಿತು.

ಮಾಹಿತಿ ಅವಕಾಶ

ಈ ಸನ್ನಿವೇಶದಲ್ಲೇ 'ನಿರಂತರ' ನೆಟ್‌ವರ್ಕ್ ತನ್ನ ಜವಾಬ್ದಾರಿ ಮೆರದ್ದದ್ದು. ಎರಡು ಕಡೆಯವರನ್ನು ಸಂಪರ್ಕಿಸಿ, ತಪ್ಪುಗಳನ್ನು ವಿವರಿಸಿ, ಸಂಪರ್ಕದ ಸೌಹಾರ್ದದ ಸೇತುವೆಯಾದುದು.

ಇದನ್ನು ಕುಮಾದತ್‌ರವರ ಭಾಷೆಯಲ್ಲೇ ಹೇಳುವುದಾದರೆ 'ವಿಶ್ವಹಿಂದೂ ಪರಿಷತ್ ಘಟನೆಗೊಂದು ನಾಟಕೀಯ ತಿರುವು ನೀಡುತ್ತಾ, ಮುಸ್ಲಿಮರ ಅಹಂಕಾರ ನೋಡಿರಿ, ಹಿಂದೂಗಳು ಈಗ ಅಭದ್ರತೆಯನ್ನು ಎದುರಿಸುವಂತಾಗಿದೆ ಎಂದು ಹೇಳಿತು. ಘಟನೆಯ ಬಗ್ಗೆ ಕಟ್ಟುಕತೆಗಳು, ಸುಳ್ಳುಗಳು ಎಲ್ಲಾ ಕಡೆ ಹಾರಾಟ ಮಾಡತೊಡಗಿತು. ಈ ಸಂದರ್ಭದಲ್ಲಿ ನನ್ನೊಳಗಿನ ವಿಚಾರಗಳು ನನ್ನ ಮಿತಿಯಲ್ಲೇ ಹಿಂಸೆಯನ್ನು ತಡೆಗಟ್ಟಲು ಮಾಧ್ಯಮವನ್ನು ಬಳಸಲು ಪ್ರೇರೇಪಿಸಿದವು. ಜನರಿಗೆ ಮಾತನಾಡಲು ಮತ್ತು ಕೇಳುವ ಅವಕಾಶವನ್ನು ನಿರ್ಮಿಸಲಾಯಿತು. ಒಂದು ಕಡೆಯವರು ಏನು ಹೇಳಿದ್ದಾರೆ ಎಂದು ಕೇಳಿಸಿಕೊಳ್ಳಲು ಇನ್ನೊಂದು ಕಡೆಯವರಿಗೆ ಅವಕಾಶ ನೀಡಲಾಯಿತು.

ಇದು ಹೇಗೆಂದರೆ 'ಸಿಟಿ ನ್ಯೂಸ್' ನ್ನು ಪ್ರತಿರಾತ್ರಿ ಒಂದು ಗಂಟೆಯ ಸಮಯ ರಾತ್ರಿ ಹತ್ತಕ್ಕೆ ಪ್ರಸಾರ ಮಾಡಲು ಆರಂಭಿಸಲಾಯಿತು. ಇದು ಕರ್ಫ್ಯೂ ವಿಧಿಸಿದ ಎರಡನೇ ದಿನದಿಂದಲೇ ಆರಂಭಿಸಲಾಯಿತು. ಎರಡು ಕಡೆಯ ಜನರನ್ನು ಸಂದಿಸಲಾಯಿತು. ಜನರನ್ನು ಘಟನೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಲು ಮತ್ತು ಘಟನೆಗೆ ತುಪ್ಪ ಸುರಿಯುತ್ತಿರುವವರ ಬಗ್ಗೆ ತಿಳಿಸಲು ಕೇಳಲಾಯಿತು. ಜನರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು, ಅಭಿಪ್ರಾಯ ತಿಳಿಸಲು, ನೋವುಗಳನ್ನು ಹಂಚಿಕೊಳ್ಳಲು ಒಂದು ಅವಕಾಶ ಪಡೆದರು. ನಾಶಗೊಂಡ ಆಸ್ತಿಯ ಚಿತ್ರಗಳನ್ನು ಪ್ರಸಾರ ಮಾಡಲಾಯಿತು. ನಮ್ಮ ಕೆಮಾರದೊಡನೆ ಪಕ್ಕದ ರಾವ್ಲಾ ಬಾರಿಯಾ ಹಳ್ಳಿಗೆ ಹೋಗಿ ಸ್ಥಳೀಯರನ್ನು ಭೇಟಿ ಮಾಡಲಾಯಿತು. ಬೇವಾರಿಗೆ ಉಳಿದ ಜನರಿಗೆ ಮಸೀದಿಯನ್ನು ಕಟ್ಟಿದ ಕಾಲ ಮತ್ತು ಪೂಜೆ ಸಲ್ಲಿಸುತ್ತಿರುವುದುರ ಬಗ್ಗೆ ತಿಳಿಸಿದೆ. ಜನರು ನಾವು ಮಾಡುತ್ತಿದ್ದುದನ್ನು ಮೆಚ್ಚಿಕೊಂಡರು, ಆದರೆ ಸ್ಥಳೀಯ ಆಡಳಿತಕ್ಕೆ ಇದು ಇಷ್ಟವಾಗಲಿಲ್ಲ.

ಪ್ರತಿರಾತ್ರಿಯೂ ಈ ಕಾರ್ಯಕ್ರಮಕ್ಕಾಗಿ ಜನರು ಕಾಯುತ್ತಿದ್ದರು. ಅವರ ಪ್ರಶ್ನೆಗಳು, ಅಭಿಪ್ರಾಯಗಳು ಸುಳ್ಳುಗಳನ್ನು ಪ್ರಚಾರಪಡಿಸುತ್ತಿದ್ದ ರೀತಿಯನ್ನು ತೋರಿಸಲಾಗುತ್ತಿತ್ತು. ಇದರ ಹಿಂದಿರುವ ಉದ್ದೇಶವೆಂದರೆ ಎರಡೂ ಕಡೆಯ ಜನರಿಗೆ ಆಧಾರವಿಲ್ಲದ ಸುಳ್ಳುಗಳ ಬಗ್ಗೆ, ಅವುಗಳನ್ನು ನಂಬುವುದರಿಂದ, ಪ್ರಚಾರ ಮಾಡುವುದರಿಂದ ಆಗುವ ಅನಾಹುತದ ಬಗ್ಗೆ ತಿಳಿಸುವುದೇ ಆಗಿತ್ತು.

ರಾವ್ಲಾಬಾರಿಯಾ ಹಳ್ಳಿಯ ಮುಸಲ್ಮಾನರಿಗೆ 'ಇದೊಂದು ಅನಧಿಕೃತ ಮಸೀದಿಯಾಗಿರುವುದರಿಂದ ಇದನ್ನು ಕೆಡವಲು ನೀವೇಕೇ ಆಕ್ಷೇಪಿಸುತ್ತಿದ್ದೀರಿ? ಎಂದು ಪ್ರಶ್ನಿದೆವು. ಆಗ ಅವರು ಕೊಟ್ಟ ಉತ್ತರದಿಂದ ನಾವು ಸ್ತಬ್ಧಗೊಂಡೆವು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯರಿಗಾಗಿ ಶಾಲೆ ನಡೆಸುವ ಒಬ್ಬ ಶಿಕ್ಷಕಿಯ ಮಾತುಗಳೆಂದರೆ "ಹೆದ್ದಾರಿಯುದ್ದಕ್ಕೂ ಅಸಂಖ್ಯಾತ ದೇವಾಲಯಗಳನ್ನು ಕಾಣಬಹುದು. ಆ ಯಾವುದಕ್ಕಾದರೂ ನಗರಾಡಳಿತದ ಅನುಮತಿಯಿದೆಯೇ? ಅವೆಲ್ಲವೂ ಅಧಿಕೃತವಲ್ಲದ ಮೇಲೆ ಈ ಮಸೀದಿ ಮಾತ್ರವೇ ಏಕೆ ಎಲ್ಲರಿಗೂ ವಿಷಯ ವಸ್ತುವಾಗಿದೆ?. ನನಗೆ ಮಸೀದಿ ಅಧಿಕೃತವಲ್ಲ ಎಂದು ತಿಳಿದಿದೆ. ಆದರೆ ಮೊದಲು ಎಲ್ಲಾ ಅನಧಿಕೃತ ಮಂದಿರಗಳನ್ನು ಕೆಡವಲಿ. ಆಗ ನಾನೇ ನನ್ನ ಕೈಯಾರೆ ಮಸೀದಿಯನ್ನು ಕೆಡುವುತ್ತೇನೆ" ಎಂದು ಮಾತು ಸೇರಿಸಿದರು.

ಸತ್ಯವರದಿ

ಈ ಗಲಭೆಗಳು ನಡೆದಾಗ ಅಜ್ಮೇರ್‌ನಲ್ಲಿ ಒಂದು ಕುಟುಂಬವನ್ನು ಸಂದರ್ಶಿಸಿದೆವು. ಈ ಘಟನೆಗಳು ನಡೆಯುವಾಗ ನೀವು ಬೇವಾರಿನಲ್ಲಿದ್ದರೆ ಏನು ಮಾಡುತ್ತಿದ್ದಿರಿ ಎಂದು ಕೇಳಿದೆವು. ಆಗ ಅವರು "ನಾವು ಮೆರವಣಿಗೆಯ ಮುಖಂಡರ ಬಳಿ ಹೋಗುತ್ತಿದ್ದೆವು ಮತ್ತು ವಿ.ಹಿಂ.ಪ. ಈ ಹುಚ್ಚುತನವನ್ನು ನಿಲ್ಲಿಸುವಂತೆ ಕೇಳಿಕೊಳ್ಳುತ್ತಿದ್ದೆವು. ಇವೆಲ್ಲವೂ ಎಂದಿಗೆ ಕೊನೆಯಾಗುತ್ತದೆ?"

ನಾವು ಅನೇಕ ಮುಸ್ಲಿಮರಿಗೆ "ವಂದೇ ಮಾತರಂ ಬಗ್ಗೆ ಯಾವಾಗಲೂ ಸುದ್ದಿಯಾಗುವುದೇಕೆ? ಇದಕ್ಕೆ ನೀವೇನು ಹೇಳುತ್ತೀರಿ?" ಎಂದು ಕೇಳಿದೆವು.

ಆಗವರು "ಏನೂ ಇಲ್ಲ. ಯಾವ ತಕರಾರು ಇಲ್ಲ" ಎಂದರು. ನಾವು ಸಂದರ್ಶಿಸಿದ ಅನೇಕ ಮುಸ್ಲಿಮರು 'ವಂದೇ ಮಾತರಂ ಹೇಳಲು ನಮ್ಮ ತಕರಾರೇನೂ ಇಲ್ಲ. ಆದರೆ ಈ ಹಲ್ಲೆಯೇಕೆ? ಈಗ ನಮ್ಮನ್ನು ಒತ್ತಾಯಿಸಲಾಗುತ್ತಿದೆ. ಅದರಿಂದ ನಮಗಾಗ ಸಿಟ್ಟಾಗುತ್ತದೆ"

ಮತ್ತೊಬ್ಬ ಮುಸ್ಲಿಂ ಹೇಳಿದ "ಎರಡೂ ಧಾರ್ಮಿಕ ನಂಬಿಕೆಗಳೂ ನೂರಾರು ವರ್ಷಗಳಿಂದ ಜೊತೆಯಲ್ಲೇ ಸಾಗಿಬಂದಿವೆ. ನಮ್ಮದು ಪರಸ್ಪರ ಸಂಬಂಧವಿರುವ ಅಪೂರ್ವ ಸಂಸ್ಕೃತಿ. ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಲಿಲ್ಲವೇ? ಆದರೆ ಯಾವಾಗಲೂ ಈ ರೀತಿಯ ಪ್ರಚೋದನಕಾರಿ ಘೋಷಣೆಗಳೇಕೆ?"

ಸಂದರ್ಶನಗಳು ಪರಿಣಾಮಕಾರಿಯಾಗಿದ್ದವು. ಒಳ್ಳೆಯ ಪರಿಣಾಮ ಬೀರಿದವು. ಕರ್ಫ್ಯೂ ಎಂದರೇನು? ಜೀವನ ಹೇಗಿರುತ್ತದೆ ಎಂದು ವಿವರಿಸಿದೆವು. ಮುಗ್ಧ ಜನರನ್ನು ಪೋಲಿಸಲು ಹೇಗೆ ಹಿಂಸಿಸುತ್ತಿದ್ದಾರೆ, ಆರಿಸಿ, ಆರಿಸಿ ಕೆಲವರನ್ನೇ ಬಂಧಿಸುತ್ತಿದ್ದಾರೆ, ಅವರ ಕುಟುಂಬಗಳ ಸ್ಥಿತಿಯೇನು? ಎಂಬುದನ್ನೆಲ್ಲಾ ಪ್ರಸಾರ ಮಾಡಿದೆವು. ಎರಡು ಕಡೆಗಾದ ಹಾನಿಯನ್ನು ಪ್ರಸಾರ ಮಾಡಿದೆವು. **ಆದರೆ ಸತ್ಯವನ್ನು ತಿರುಚಲಿಲ್ಲ. ರಂಜನೀಯಗೊಳಿಸಲಿಲ್ಲ.**

ರಾತ್ರಿ ಹತ್ತು ಗಂಟೆಯವರೆಗೂ ಜನ ಕಾಯುವಂತೆ ಇದು ಪರಿಣಾಮಕಾರಿಯಾಗಿತ್ತು. ನಮ್ಮ ಪ್ರೇಕ್ಷಕರಿಂದ ಮೆಚ್ಚುಗೆಯ ಪತ್ರಗಳು ಬಂದವು.

ಆದರೆ ಆಡಳಿತ ನಿಜವಾಗಿಯೂ ಅಸಂತುಷ್ಟವಾಗಿತ್ತು. ಏಕೆಂದರೆ ಜನರು ಹೇಗೆ ಜೀವಿಸುತ್ತಿದ್ದಾರೆ, ಮಹಿಳೆಯರು ಮತ್ತು ಮಕ್ಕಳು ಹೇಗ ಒಂಟಿ ಬದುಕು ನಡೆಸುತ್ತಿದ್ದಾರೆ, ಹೇಗೆ ಜನರನ್ನು, ಅದರಲ್ಲೂ ಮುಸ್ಲಿಮರನ್ನು ಹೇಗೆ ಹಿಂಸಿಸಲಾಗುತ್ತಿದೆ ಎಂದು ತೋರಿಸಿದೆವು. ಜನರನ್ನು ಪ್ರಶ್ನಿಸುವ ನೆಪದಲ್ಲಿ ಪೋಲೀಸರು ಮತ್ತು ಸ್ಥಳೀಯ ಆಡಳಿತ ಅವರನ್ನು ಪೀಡಿಸುತ್ತಿದೆ ಎಂದು ತೋರಿಸಿದೆವು.

ನಾವು ಹೇಗೆ ಈ ಕೆಲಸ ಮಾಡಿದೆವೆಂದರೆ ಜನರನ್ನು ಸಂದರ್ಶಿಸುವಾಗ ಮತ್ತು ಅದನ್ನು ಪ್ರಸಾರ ಮಾಡುವಾಗ ಪ್ರಾಮಾಣಿಕರಾಗಿರುತ್ತಿದ್ದೆವು. ಜನರನ್ನು ಸಂದರ್ಶಿಸುವ ಜತೆಗೆ ಎಲ್ಲಾ ಕಡೆಯ ನಾಯಕರುಗಳ ಅಭಿಪ್ರಾಯವನ್ನು ಪ್ರಸಾರ ಮಾಡಿದೆವು. ಸಾಮಾನ್ಯ ಜನರಿಗೆ ಈ ಚಾನೆಲ್ ತಮ್ಮ ದುಃಖವನ್ನು ಪ್ರಕಟಪಡಿಸುವ ಚಾನಲ್ ಆಯಿತು.

ಅದ್ಭುತ ಪಾತ್ರ

ಬೇವಾರಿಯಲ್ಲಿ ಶಾಂತಿ ನೆಲೆಸುವಂತೆ ಮಾಡಲು 'ನಿರಂತರ'ದ 'ಸಿಟಿನ್ಯೂಸ್' ಕಾಣಿಕೆ ನೀಡಿದೆ ಎಂಬುದು ನಮ್ಮ ನಂಬಿಕೆ. ಪ್ರತಿ ಪ್ರಸಾರದ ಕೊನೆಯಲ್ಲಿ ಶಾಂತಿ ಮತ್ತು ಸೌಹಾರ್ದತೆಯ ಸಂದೇಶದೊಡನೆ ಪ್ರಸಾರ ಕೊನೆಗೊಳ್ಳುತ್ತಿದ್ದವು. ಮಾನವೀಯತೆಯ ಸಂದೇಶವನ್ನು ಹೊತ್ತ ಕಾರ್ಯಕ್ರಮದೊಡನೆ ಪ್ರತಿದಿನದ ಪ್ರಸಾರ ಕೊನೆಗೊಳ್ಳುತ್ತಿತ್ತು.

ಅನು: **ಟಿ.ಎಸ್.ಕೃಷ್ಣೇಗೌಡ**
ಕಂಬಾಟ್ ಕಮ್ಯುನಿಲಿಸಂ ಪತ್ರಿಕೆಯಿಂದ

ಮಾಧ್ಯಮಗಳ ಮೇಲೆ ಮೋದಿ ಸಂತತಿ ಆಕ್ರಮಣ

ಮಾಧ್ಯಮಗಳ ಪ್ರಜಾಸತ್ತಾತ್ಮಕ ಹಕ್ಕಿಗಾಗಿ ಸಂಘ ಪರಿವಾರದ ಧಾಳಿ ಎದುರಿಸಿ ಮಂಗಳೂರಿನಲ್ಲಿ ಪ್ರತಿಭಟನೆ

ಗುಜರಾತ್‌ನಲ್ಲಿ ನಡೆದ ಬರ್ಬರ ಹತ್ಯಾಕಾಂಡದ ಸವಿವರವಾದ ವರದಿ ದೇಶದ ಜನತೆಗೆ ದೊರೆಯುದಂತೆ ಟಿ.ವಿ., ಪತ್ರಿಕಾ ಮಾಧ್ಯಮಗಳು ಆಡಿದ ಆಟ ಎಲ್ಲರಿಗೂ ತಿಳಿದಿದೆ. ಮಾಧ್ಯಮದ ಕರಸೇವಕರ ಈ ಎಲ್ಲಾ ಕರಾಮತ್ತುಗಳನ್ನು ಎದುರಿಸಿ, ಅತ್ಯಂತ ಅಪಾಯಕಾರಿ ಸ್ಥಳಗಳಿಂದ ವರದಿ ಮಾಡಿ ವೃತ್ತಿ ಗೌರವ, ಸತ್ಯಕ್ಕೆ ನ್ಯಾಯ-ಬದ್ಧತೆ ತೋರಿದವರೂ ಇಲ್ಲದಿಲ್ಲ. ಇಡೀ ಮೊಹಲ್ಲಾವೇ ಧಗದಹಿಸುತ್ತಿರುವಾಗ, ಬೀದಿ ಬೀದಿಗಳಲ್ಲಿ ಕತ್ತಿ ಹಿಡಿದು 'ಕರಸೇವಕ ಗೂಂಡಾ'ಗಳು ಮನುಷ್ಯರನ್ನು ಬೇಟೆಯಾಡುತ್ತಿರುವುದನ್ನು ವರದಿ ಮಾಡಿದ 'ಸ್ಟಾರ್ ಟಿ.ವಿ.' ಜನರ ಗಮನ ಸೆಳೆಯಿತು. ಇದರಿಂದ ಕೆರಳಿದ ವಿಹೆಚ್‌ಪಿ, ಭಜರಂಗದಳದ ಗೂಂಡಾಗಳು, ಗುಜರಾತ್ ಮುಖ್ಯಮಂತ್ರಿ ಅವರ ವಿರುದ್ಧ ಹರಿಹಾಯ್ದರು. ಸ್ಟಾರ್ ಹಾಗೂ ಸ್ಥಳೀಯ ಟಿ.ವಿ. ಚಾನೆಲ್‌ರವರ ಕ್ಯಾಮರಾಗಳನ್ನು ಧ್ವಂಸ ಮಾಡಿದರು. ವರದಿಗಾರರನ್ನು ಬೆನ್ನಟ್ಟಿ ಬೇಟೆಯಾಡಲು ಅಟ್ಟಿಸಿಕೊಂಡು ಹೋದರು. ವರದಿಗಾರನಿಗೆ ಸೀಮೆ ಎಣ್ಣೆ ಸುರಿದರು. ಅಕಸ್ಮಾತ್ ಜನ ಆ ವರದಿಗಾರನನ್ನು ರಕ್ಷಿಸಿಕೊಂಡರು. ಕೊನೆಗೆ ಮೋದಿ ಫರ್ಮಾನು ಹೊರಡಿಸಿ 'ಸ್ಟಾರ್ ನ್ಯೂಸ್' ಚಾನಲ್ ವರದಿ ಮಾಡುವುದನ್ನು 'ಬ್ಯಾನ್' ಮಾಡಿಯಾಯಿತು.

ಹಾಗೇ ಅತ್ಯಂತ ಸಮಯೋಜಿತ, ಪ್ರಭುದ್ಧತೆಯ, ಕಳಕಳಿಯ ಸಂಪಾದಕೀಯ ಬರೆದ 'ಪ್ರಜಾವಾಣಿ'(ಮಾರ್ಚ್ 1) ಪತ್ರಿಕೆಯನ್ನು ಬೆಂಗಳೂರಿನಲ್ಲಿ ಸೇರಿದ್ದ ವಿಹೆಚ್‌ಪಿ ಪಡೆ ಬೆಂಕಿ ಹಾಕಿ ಸುಟ್ಟುಹಾಕಿತು. ಫ್ಯಾಸಿಸ್ಟ್ ಸ್ವರೂಪ ತೋರಿಸಿತು.(ಆದರೂ ಪ್ರಜಾವಾಣಿ ಗುಜರಾತ್ ಆರೋಪಿಗಳಿಗೆ ಶಿಕ್ಷೆ ಆಗಲೇಬೇಕು ಎಂದು ಮತ್ತೆ ಸಂಪಾದಕೀಯದಲ್ಲಿ ಆಗ್ರಹಿಸಿದೆ)

ಹೀಗೆ ಕೋಮುವಾದಿ ಫ್ಯಾಸಿಸ್ಟರು ಮಾಡುತ್ತಿರುವ ಮಾಧ್ಯಮದ ಮೇಲೆ ಆಕ್ರಮಣಗಳನ್ನು ಖಂಡಿಸಿ, ಪ್ರಜಾಸತ್ತಾತ್ಮಕ ಹಕ್ಕು ರಕ್ಷಿಸಲು ಒತ್ತಾಯಿಸಿ ಮಂಗಳೂರಿನಲ್ಲಿ 'ಮಾಧ್ಯಮ'ದ ನೂರಾರು ಗೆಳೆಯರು ಮಾರ್ಚ್ 6 ರಂದು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು. ಕತ್ತಲೆಯೊಡನೆ ಹೋರಾಡುತ್ತಿರುವ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,